ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ


ಕನ್ನಡ ವಾರಪತ್ರಿಕೆ

ಸಂಪುಟ 11 | ಸಂಚಿಕೆ 11 | ಪುಟ 20 | ಮಾರ್ಚ್ 6-12, 2017 | ರೂ. 10/-

web: ww...anas...hi.co.in e-mail: js...eekly@yahoo.com



ಪಿಣರಾಯಿ ತಲೆಗೆ ಒಂದು ಕೋಟಿ ಸುಪಾರಿ ಕೊಟ್ಟ ಸಂಘಿ ಚಂದ್ರಾವತ್





ಮಂಗಳೂರಲ್ಲಿ ಕೋಮುವಾದದ ವಿರುದ್ಧ ಸೌಹಾರ್ದದ ಕಹಳೆ

ಸೌಹಾರ್ದ ರ್‍ಯಾಲಿ

ವಿಶೇಷ ಪುರವಣಿ

ಆರ್.ಎಸ್.ಎಸ್. ಬೆದರಿಕೆಗಳಿಗೆ ದಿಟ್ಟ ಉತ್ತರ : ಕಾರಟ್



ಕಲಿತ ಮಗಳ ಬಾಯಿ ಮುಚ್ಚಿಸಿದರು

ಜಿಡಿಪಿ ಹೆಚ್ಚಳ ನಕಲಿ?



'ಬುರ್ಖಾದಡಿ ಲಿಪ್‌ಸ್ಟಿಕ್' ಕತ್ತರಿಗೆ ವಿರೋಧ

ಸಾವಿನ ವ್ಯಾಪಾರಿ ಸಂಘ ಪರಿವಾರ, ಪಿಣರಾಯಿ ಅಲ್ಲ

ಫೆ. 25ರಂದು ಮಂಗಳೂರು ಸೌಹಾರ್ದ ರ್‍ಯಾಲಿಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾ. ಜಿ.ವಿ. ಶ್ರೀರಾಮರೆಡ್ಡಿ ಅವರ ಭಾಷಣದ ಪೂರ್ಣ ಪಠ್ಯ



ವೇದಿಕೆ ಮೇಲಿರುವ ಎಲ್ಲಾ ಸಿಪಿಐ(ಎಂ) ಪಕ್ಷದ ಮುಖಂಡರೇ,

ಒಂದು ವಾರದ ಕಾಲ ಸಂಘಪರಿವಾರದ ಬೆದರಿಕೆಗಳು, ದಾಳಿಗಳು ಎಲ್ಲವನ್ನು ಎದುರಿಸಿ ಹರತಾಳಕ್ಕೆ ಕರೆಕೊಟ್ಟರು ಕೂಡಾ, ಬಂದ್‌ಗೆ ಕರೆ ಕೊಟ್ಟರು ಕೂಡ, ಎದೆಗುಂದದೆ ದಕ್ಷಿಣ ಕನ್ನಡ ಜಿಲ್ಲೆಯ ಜನತೆ ಒಂದಾಗಿ ನಿಂತು ಈ ಸೌಹಾರ್ದ ರ್‍ಯಾಲಿಯನ್ನು ಅತ್ಯಂತ ಯಶಸ್ವಿಗೊಳಿಸುವುದರ ಮುಖಾಂತರ ಸಂಘ ಪರಿವಾರದ ಶಕ್ತಿಗಳಿಗೆ ಒಂದು ಸವಾಲನ್ನು ಹಾಕಿದ್ದಾರೆ. ಅವರಿಗೆ ನಾನು ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಪರವಾಗಿ ಮೊಟ್ಟ ಮೊದಲಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಬಂಧುಗಳೇ! ದೇಶದ ರಾಜಕೀಯ ಪರಿಸ್ಥಿತಿ ಹಿನ್ನೆಲೆಯಲ್ಲಿ ಕೋಮುವಾದಿ ಶಕ್ತಿಗಳು ಯಾವ ರೀತಿಯಲ್ಲಿ ಆಕ್ರಮಣಕಾರಿಯಾಗಿ ಹೋಗ್ತಾ ಇವೆ, ಯಾವ ರೀತಿಯಲ್ಲಿ ದೇಶದ ಐಕ್ಯತೆಯನ್ನು ಒಡೆ–ಯತಕ್ಕಂತ ಕೆಲಸ ಮಾಡುತ್ತಿವೆ ಅಂತ, ಕಾಂ. ಪಿಣರಾಯಿ ವಿಜಯನ ಕೇರಳ ಮುಖ್ಯಮಂತ್ರಿ ಮತ್ತು ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯರು ಸ್ಪಷ್ಟವಾಗಿ ನಿಮ್ಮ ಮುಂದೆ ಹೇಳಿದ್ದಾರೆ. ಅದೇ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲೂ ಕೂಡಾ ಕೋಮುವಾದಿ ಶಕ್ತಿಗಳು ಆಕ್ರಮಣಕಾರಿಯಾಗಿ ಹೋಗ್ತಾ ಇವೆ. ಈ ಸಭೆಯನ್ನು ಮಾಡದಂತೆ ಮಾಡಲಿಕ್ಕೆ ಎಲ್ಲಾ ರೀತಿಯಾದಂತಹ ಪ್ರಯತ್ನವನ್ನು ಮಾಡಿದ್ದಾರೆ. ನಿನ್ನೆ ಬಿಜೆಪಿಯ ಸಂಘ ಪರಿವಾರದವರು ಇಲ್ಲಿ ದೊಡ್ಡ ಪ್ರತಿಭಟನೆಯನ್ನ ಮಾಡುತ್ತೀವಿ, ಲಕ್ಷಗಟ್ಟಲೆ ಜನಗಳನ್ನು ಸೇರಿಸುತ್ತೀವಿ ಅಂತ ಹೇಳಿ ಕಡೆಗೆ ಇಲ್ಲೇ ಪಕ್ಕದಲೇ 2000 ಜನ ಸೇರಿಸಿ ಒಂದು ರ್‍ಯಾಲಿ ಮಾಡಿದರು. ಇದನ್ನು ಬೆದರಿಕೆ ಹಾಕಲಿಕ್ಕೆ ಅಲ್ಲಿ ಭಾಷಣ ಮಾಡಿದ ಮುಖಂಡರು ಹೇಳಿದರು. ಪಿಣರಾಯಿ ವಿಜಯನ ಸಾವಿನ ವ್ಯಾಪಾರಿ ಅಂತ ಹೇಳಿ. ನಾನು ಅವರನ್ನ ಕೇಳ್ತಾ ಇದ್ದೀನಿ ಈ ದೇಶದ ನಿಜವಾದ ಸಾವಿನ ವ್ಯಾಪಾರಿಗಳ್ಯಾರು? ಭಾರತ, ಪಾಕಿಸ್ತಾನ ಇಬ್ಭಾಗ ಆದಾಗ ನಡೆದಂತಹ ಲಕ್ಷ ಲಕ್ಷ ಜನರ ಮಾರಣಹೋಮ ನಡೆಸಿದ್ಯಾರು? ರಾಷ್ಟ್ರಪಿತ ಮಹಾತ್ಮಗಾಂಧಿಯವರನ್ನು ಕೊಲೆ ಮಾಡಿದ್ದು ಯಾರು? ಅಲ್ಲಿಂದ ಪ್ರಾರಂಭವಾಗಿ 2002 ರ ವರೆಗೂ ಕೂಡ ಭಾರತ ದೇಶದಲ್ಲಿ ನಡೆದಂತಹ ಮನುಷ್ಯರ ಮಾರಣ ಹೋಮಕ್ಕೆ ಕಾರಣರಾದಂತಹ ಸಂಘಪರಿವಾರದವರೇ ಸಾವಿನ ವ್ಯಾಪಾರಿಗಳು.

ಒಂದು ವಾರದಿಂದ ಏನು ಪ್ರಚಾರ ಮಾಡಿದ್ದೀರಿ? ನೀವು ಹಿಂದೂಗಳನ್ನು ಸಾಯಿಸುತ್ತಿದೆ ಪಿಣರಾಯಿ ವಿಜಯನ್ ಸರ್ಕಾರ. ಸಿಪಿಐ(ಎಂ) ಪಕ್ಷ ಹಿಂದುಗಳನ್ನ ಕೊಲೆ ಮಾಡುತ್ತಿದೆ. ಅವರನ್ನ ಮಂಗಳೂರಿಗೆ ಕಾಲಿಡಲಿಕ್ಕೆ ಬಿಡುವುದಿಲ್ಲವೆಂದು ಶಪಥ ಮಾಡಿದರು ಸಂಘ ಪರಿವಾರದ ನಾಯಕರು. ಕಾಲಿಟ್ಟರು ಬೆಳಿಗ್ಗೆ ಪಿಣರಾಯಿ ವಿಜಯನ್, ಕಾಲಿಟ್ಟಿದ್ದಾರೆ ದಕ್ಷಿಣ ಕನ್ನಡ ಜಿಲ್ಲೆಗೆ, ನಿಮ್ಮಗೆ ಸವಾಲು ಹಾಕುತ್ತಿದ್ದೇವು, ಖಂಡಿತ ಪಿಣರಾಯಿ ವಿಜಯನ್ ಬರುತ್ತಾರೆ ಅಂತ ಹೇಳಿ. ಹಿಂದೂಗಳನ್ನು ಸಾಯಿಸಿದ್ದು ನಾವಲ್ಲ, ಈಗಾಗಲೇ ಪಿಣರಾಯಿ ವಿಜಯನ್ ಕೆಲವು ಹೆಸರುಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕೇರಳದಲ್ಲಿ ಕಳೆದ ಚುನಾವಣೆಯಿಂದ ಈಚೆಗೆ ಸಿಪಿಐ(ಎಂ) ಪಕ್ಷದ ಏಳು ಜನರನ್ನ ಕೊಲೆ ಮಾಡಿದ್ದು ಆರೆಸ್ಸೆಸ್‌ನವರು, ಅವರೆಲ್ಲ ಹಿಂದೂಗಳೇ. ಆರೆಸ್ಸೆಸ್‌ನವರು ಸಾಯಿಸಿದವರು, ಅವರೆಲ್ಲ ಹಿಂದುಗಳಲ್ವ? ಇದೇ ದಕ್ಷಿಣ ಕನ್ನಡ ಕರಾವಳಿ ಪ್ರದೇಶದಲ್ಲಿ 13 ಜನ ಹಿಂದುಗಳನ್ನು, ನಿಮ್ಮ ಬಿಜೆಪಿ ಕಾರ್ಯಕರ್ತರನ್ನೇ ಕೊಲೆ ಮಾಡಿದ್ದಿರೀ ನೀವು ಹಿಂದುಗಳಾ? ನೀವು ಕೊಲೆ ಮಾಡಿದವರು ಹಿಂದುಗಳಲ್ವ? ನಿಮ್ಮಗೆ ಇವತ್ತು ಸಿಪಿಐ(ಎಂ) ಪಕ್ಷದ ಬಗ್ಗೆ ಹೆದರಿಕೆ ಬಂದಿದೆ ನಿಮಗೆ. ಹೆದರಿಕೆ ಬಂದು ದಾಳಿಯನ್ನು ಶುರುಮಾಡಿದ್ರಿ, ನಾವು ನಿಮಗೆ ಎಚ್ಚರಿಕೆಯನ್ನು ಕೊಡುತ್ತಿದ್ದೇವೆ, ನಾವು ಹೆದರುವವರಲ್ಲ. ಈ ದೇಶದ ವಾರಸುದಾರರು ಎಂದು ಹೇಳುವ ನೀವು ಮತ್ತು ನಿಮ್ಮ ಸಂಸ್ಕೃತಿ ಎಂತಾದ್ದು? ನಿಮ್ಮ ವರ್ಣಾಶ್ರಮ ವ್ಯವಸ್ಥೆಯನ್ನು ವಿರೋಧ ಮಾಡಿ ಸವಾಲು ಹಾಕಿದಂತವರನ್ನ ತಾತ್ವಿಕವಾಗಿ ಎದುರಿಸಲಾರದೆ ನಿಮ್ಮ ಕೊಲೆಗಡುಕ ರಾಜಕಾರಣವನ್ನ ಈ ದೇಶದ ಉದ್ದಗಲಕ್ಕೂ ಹರಡಿದವರು ನೀವು.

ಬಂಧುಗಳೇ, 5 ಸಾವಿರ ವರ್ಷಗಳಿಂದ ಭಾರತ ದೇಶ ಯಾವ ಮಹಾನ್ ಸಂಸ್ಕೃತಿಯನ್ನು ಸೃಷ್ಟಿ ಮಾಡಿತ್ತೋ, ಇಡೀ ಜಗತ್ತಿಗೆ ಮಾದರಿಯಾದಂತಹ ಒಂದು ಸಂಸ್ಕೃತಿ, ನಾಗರೀಕತೆಯನ್ನ ಬೆಳೆಸಿದಂತ ದೇಶ ಇದು. ಹಲವಾರು ನಾಗರೀಕತೆಗಳನ್ನು, ಹಲವಾರು ಸಂಸ್ಕೃತಿಗಳನ್ನು ಬೆಳೆಸಿದಂತ ದೇಶ ಇದು. ಐದು ಸಾವಿರ ವರ್ಷಗಳಿಂದ ಭಾರತ ದೇಶದ ಜನ ಯಾವ ಭವ್ಯ ಸಂಸ್ಕೃತಿಯನ್ನ ಬೆಳೆಸಿದ್ದರೋ, ಅದನ್ನ ಸರ್ವನಾಶ ಮಾಡಲಿಕ್ಕೆ ಹೊರಟವಂತವರು ನೀವು. ಎಲ್ಲವನ್ನು ನಾಶ ಮಾಡಲಿಕ್ಕೆ ಹೊರಟಿದ್ದೀರಿ. ಎಲ್ಲವನ್ನೂ ಸರ್ವನಾಶ ಮಾಡಲಿಕ್ಕೆ ಹೊರಟೀದ್ದೀರಿ, ಬಹುಸಂಸ್ಕೃತಿಯನ್ನು, ಬಹುನಾಗರೀಕತೆಯನ್ನು, ಬಹುಭಾಷಾಭಿಮಾನವನ್ನ, ಕಾರ್ಮಿಕ ಐಕ್ಯತೆಯನ್ನು ನಾಶ ಮಾಡಲಿಕ್ಕೆ ಹೊರಟಿದ್ದೀರಿ. ಎಲ್ಲ ಧರ್ಮಗಳು ಹುಟ್ಟಿ ಬೆಳೆದಂತಹ ದೇಶ, ಆ ದೇಶದ ಧಾರ್ಮಿಕ ಐಕ್ಯತೆಯನ್ನ ಒಡಿಲಿಕ್ಕೆ ನೀವು ಪ್ರಯತ್ನ ಮಾಡುತ್ತಿದ್ದೀರಿ. ಐದು ಸಾವಿರ ವರ್ಷಗಳಿಂದ ನಾವು ಏನನ್ನೂ ರಕ್ಷಣೆ ಮಾಡಿಕೊಂಡು ಬಂದಿದ್ದೇವೋ ಅದೆಲ್ಲವನ್ನೂ ನಾಶಮಾಡಲಿಕ್ಕೆ ಹೊರಟಿರುವಂತದು ರಾಷ್ಟ್ರೀಯ ಸರ್ವನಾಶಕ ಸಂಘ, ಆರೆಸ್ಸೆಸ್, ಈ ದೇಶದ ಸರ್ವಸ್ವವನ್ನು ನಾಶ ಮಾಡಲಿಕ್ಕೆ ಹೊರಟಿದೆ. ಸಿಪಿಐ(ಎಂ) ಪಕ್ಷ ನಿಮಗೆ ಸವಾಲಾಕಿ ಹೇಳ್ತಾ ಇದ್ದೀವಿ, ಯಾವ ಕಾರಣಕ್ಕೂ ನಾವು ಈ ನಾಶ ಮಾಡೋ ಸಂಸ್ಕೃತಿನ ಬಿಡೋದಿಲ್ಲ, ನಿಮ್ಮನ ಎದುರಿಸ್ತೀವಿ ಅಂತ ಎಚ್ಚರಿಕೆಯನ್ನು ಕೊಡುತ್ತಿದ್ದೀವಿ.

ಬಂಧುಗಳೇ, ನಿಮ್ಮನ್ನ ಎದುರಿಸುವವರನ್ನು ಕೊಲೆ ಮಾಡುವುದು ನಿಮ್ಮ ಸಂಸ್ಕೃತಿ. ಕೈಲಾಗದ ರಣಹೇಡಿಗಳು ನೀವು. ಶಂಭುಕನನ್ನು ಎದುರಿಸಲಾರದೆ ತಲೆ ಕಡಿದಿದ್ದೀರಿ ನೀವು ರಾಮಾಯಣದಲ್ಲಿ. ಏಕಲವ್ಯನಿಗೆ ಹೆದರಿ ಹೆಬ್ಬೆಟ್ಟು ಕತ್ತರಿಸಿದಂತಹ ಸಂಸ್ಕೃತಿ ನಿಮ್ಮದು. ಅದೇ ರೀತಿಯಲ್ಲೇನೆ ಕರ್ಣನ ಕರ್ಣಕುಂಡಲವನ್ನು ಕಿತ್ತುಕೊಂಡು ಮೋಸದಿಂದ ಕೊಂದಂತಹ ಸಂಸ್ಕೃತಿ ನಿಮ್ಮದು. ಸಿಪಿಐ(ಎಂ) ಪಕ್ಷವನ್ನ ಎದುರಿಸಲಿಕ್ಕೆ ತೊಕ್ಕೊಟ್ಟಿನಲ್ಲಿ ನಮ್ಮ ಆಫೀಸಿಗೆ ಬೆಂಕಿ ಹಾಕತೀರಿ ನೀವು, ಬೆದರಿಸಿದರೆ, ಬೆಂಕಿ ಹಾಕಿದರೆ ನಮ್ಮ ಕಾರ್ಯಕ್ರಮ ನಿಲ್ಲುತ್ತೇ ಅಂದುಕೊಂಡ್ರ? ನೀವು ಬಂಟಿಂಗ್ಸ್‌ನ ಹರಿದು ಹಾಕಿದ್ದೀರಿ, ಬ್ಯಾನರ್ಸ್‌ಗಳನ ಹರಿದು ಹಾಕೀದ್ದೀರಿ ಕಟೌಟ್‌ನ್ ಹರಿದು ಹಾಕಿದ್ದೀರಿ. ಸಿಪಿಐ(ಎಂ) ಪಕ್ಷದ ಹೆದರಿಕೆ ಬಂದಿದೆ ನಿಮಗೆ. ನಿಮಗೆ ಧೈರ್ಯ ಇದ್ದರೆ, ತಾತ್ವಿಕವಾಗಿ ನಮ್ಮ ಜೊತೆ ಸಂವಾದಕ್ಕೆ ಬನ್ನಿ, ನಿಮ್ಮ ಕೋಪ ತೋರಿಸುವುದು ಬ್ಯಾನರು, ಫ್ಲೇಕ್ಸ್‌ಗಳ ಮೇಲಲ್ಲ. ಕಳ್ಳರ ರೀತಿಯಲ್ಲಿ ಮಧ್ಯರಾತ್ರಿಯಲ್ಲಿ ಹೋಗಿ ಆಫೀಸಿಗೆ ಹೋಗಿ ಬೆಂಕಿ ಹಾಕುವುದು ನಿಮ್ಮ ಶೌರ್ಯ ಅಲ್ಲ, ನಿಮ್ಮ ಹೇಡಿತನ. ನಾವು ಸವಾಲಾಕುತ್ತ ಇದ್ದೀವಿ – ಬನ್ನಿ ಚರ್ಚೆಗೆ.

ಪುಟ 19 ಕ್ಕೆ

ಒಕ್ಕೂಟ ವ್ಯವಸ್ಥೆ ಹಾಗೂ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವ ರಾಷ್ಟ್ರೀಯ ಪಕ್ಷವೊಂದು ಮುಖ್ಯಮಂತ್ರಿ ಕಾರ್ಯಕ್ರಮಕ್ಕೆ ಈ ರೀತಿ ವಿರೋಧ ವ್ಯಕ್ತಪಡಿಸುತ್ತಿರುವುದು ಅವರ ಬೌದ್ಧಿಕ ದಿವಾಳಿತನಕ್ಕೆ ಸಾಕ್ಷಿಯಾಗಿದೆ. ಶಾಂತಿ ಕದಡುವ ಏಕಮಾತ್ರ ಗುರಿ ಬಿಜೆಪಿಯದ್ದು. ಜವಾಬ್ದಾರಿಯುತ ಸಂಸದ, ಶಾಸಕರು ಪಿಣರಾಯಿ ವಿಜಯನ್ ಅವರ ಕಾರ್ಯಕ್ರಮಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವುದು ಎನ್.ಡಿ.ಎ. ಸರ್ಕಾರದ ಅಜೆಂಡಾದ ಭಾಗ. ಇದನ್ನು ತಡೆಯಲು ರಾಜ್ಯ ಸರ್ಕಾರ ಮುಂದಾಗಬೇಕು.

– ಕೆ. ಅಮರನಾಥ ಶೆಟ್ಟಿ, ಮಹಮ್ಮದ್ ಕುಂಞ, ಅಕ್ಷಿತ್ ಸುವರ್ಣ, ಹೈದರ್ ಪರ್ತಿಪಾಡಿ (ಜೆ.ಡಿ.ಎಸ್ ದ.ಕ. ಜಿಲ್ಲಾ ಘಟಕ)

ಆರೆಸ್ಸೆಸ್‌ನ ಅಸಹ್ಯಕರ ಬೆದರಿಕೆ–ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಆರೆಸ್ಸೆಸ್ ಮುಖಂಡರು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ವಿರುದ್ಧ ಬೆದರಿಕೆಗಳನ್ನು ಹಾಕುತ್ತಿದ್ದಾರೆ. ಮಧ್ಯಪ್ರದೇಶದ ಉಜ್ಜಯಿನಿಯಲ್ಲಿ ಒಬ್ಬ ಆರೆಸ್ಸೆಸ್ ಮುಖಂಡ ಪ್ರಜಾಸತ್ತಾತ್ಮಕವಾಗಿ ಚುನಾಯಿತರಾದ ಮುಖ್ಯಮಂತ್ರಿಯ ತಲೆತಂದು ಕೊಟ್ಟವರಿಗೆ 1 ಕೋಟಿ ರೂ.ಗಳ ಬಹುಮಾನ ಘೋಷಿಸಿದ್ದಾರೆ. ಇದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಈ ಮೂಲಕ ತಾನು ಹಿಂಸಾಚಾರದ ರಾಜಕೀಯದ ಮುಂಚೂಣಿಯಲ್ಲಿದ್ದೇನೆ ಎಂಬುದನ್ನು ಆರೆಸ್ಸೆಸ್ ಮತ್ತೊಮ್ಮೆ ದೃಢಪಡಿಸಿದೆ. ಕೇರಳದಲ್ಲಿ ಇದು ಇತ್ತೀಚಿನ ತಿಂಗಳುಗಳಲ್ಲಿ ಸ್ಪಷ್ಟವಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ರಾಜ್ಯ ಮತ್ತು ಕೇಂದ್ರ ಸರಕಾರಗಳು ಕಾನೂನಿನ ಪ್ರಕಾರ ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ. ಈ ಸರಕಾರಗಳ ಮೌನ ಇದ–ಕ್ಕೆ ನೀಡುವ ಅನುಮೋದನೆಯಾಗುತ್ತದೆ, ಇದು ಆರೆಸ್ಸೆಸ್ ಇಂತಹ ಅಸಹ್ಯ ಬೆದರಿಕೆಗಳನ್ನು ಹಾಕಲು ಕುಮ್ಮಕ್ಕು ನೀಡುತ್ತದೆ ಎಂದು ಅದು ಹೇಳಿದೆ.



ಆರೆಸ್ಸೆಸ್ ಒಂದು ಭಯೋತ್ಪಾದಕ ಸಂಘಟನೆ ಎಂದು ಪ್ರಕಟವಾಗಿದೆ–ಯೆಚುರಿ

ಇದು ಘಾತುಕ ಹೇಳಿಕೆ. ಒಂದು ರಾಜ್ಯದ ಮುಖ್ಯಮಂತ್ರಿಗೆ ಬೆದರಿಕೆ ಹಾಕುತ್ತಿದ್ದಾರೆ ಎಂದರೆ ಅವರಿಗೆ ಸರಕಾರದ ರಕ್ಷಣೆ, ಪೋಷಣೆ ಇದೆ ಎಂದು ಅರ್ಥ ಎಂದು ಈ ಹೇಳಿಕೆಯನ್ನು ಖಂಡಿಸುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಹೇಳಿದ್ದಾರೆ. ಆರೆಸ್ಸೆಸ್ ಒಂದು ಭಯೋತ್ಪಾದಕ ಸಂಘಟನೆ ಎಂಬ ಅದರ ನಿಜ ಬಣ್ಣವನ್ನು ಪ್ರಕಟಗೊಳಿಸಿದೆ, ಪ್ರಧಾನ ಮಂತ್ರಿಗಳು ಮತ್ತು ಅವರ ಸರಕಾರದ ಮೌನ ಇನ್ನೂ ಇರುತ್ತದೆಯೇ ಎಂದು ಅವರು ಪ್ರಶ್ನಿಸಿದ್ದಾರೆ.

ಆರೆಸ್ಸೆಸ್ ಹಲವು ತಲೆಗಳನ್ನು ಕಡಿದಿದೆ, ಆದರೆ ನಾನೇನೂ ಪ್ರಯಾಣಗಳನ್ನು ನಿಲ್ಲಿಸುವುದಿಲ್ಲ ಎಂದು ಪಿಣರಾಯಿ ವಿಜಯನ್ ಈ ಹೇಳಿಕೆಗೆ ಶಾಂತವಾಗಿ ಪ್ರತಿಕ್ರಿಯಿಸಿದ್ದಾರೆ.

ಗುಜರಾತಿನಲ್ಲಿ 2000 ಜನರನ್ನು ಹೂತು ಹಾಕಿದವರು?

ಪಿಣರಾಯಿ ವಿಜಯನ್ ಅವರ ತಲೆಗೆ 1 ಕೋಟಿ ರೂ. ಕೊಡುವುದಾಗಿ ಸಾರಿದ ಆರೆಸ್ಸೆಸ್‌ನ ಉಜ್ಜಯಿನಿಯ ‘ಮಹಾನಗರ ಪ್ರಚಾರ ಪ್ರಮುಖ್’ ಕುಂದನ್ ಚಂದ್ರವತ್ ಮುಂದುವರೆದು ಗೋಧ್ರಾದಲ್ಲಿ ಸತ್ತ 56 ಮಂದಿಗೆ ಪ್ರತಿಯಾಗಿ 2000 ಮಂದಿಯನ್ನು ಮಸಣಗಳಲ್ಲಿ ಹೂತು ಹಾಕಿದ್ದೇವೆ ಎಂದು ಹೆಮ್ಮೆಯಿಂದ ಹೇಳಿಕೊಂಡು ಗುಜರಾತಿನಲ್ಲಿ ಈಗಿನ ನಮ್ಮ ಪ್ರಧಾನ ಮಂತ್ರಿಗಳು ಮುಖ್ಯಮಂತ್ರಿಗಳಾಗಿದ್ದಾಗ ನಡೆದ 2002 ರ ಹತ್ಯಾಕಾಂಡವನ್ನು ನಡೆಸಿದವರು ಆರೆಸ್ಸೆಸ್ ಎಂಬ ಸತ್ಯವನ್ನು ಬಹಿರಂಗ ಪಡಿಸಿದ್ದಾರೆ!

ಹುಲಿಯ ಗುಹೆಯೊಳಗೆ ನುಗ್ಗಿ ನಡೆಸಿದ ಧೀರೋದ್ದಾತ ಹೋರಾಟ

ಜಿ.ವಿ. ಶ್ರೀರಾಮರೆಡ್ಡಿ

ಫೆಬ್ರವರಿ 25 2017 ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಒಂದು ಐತಿಹಾಸಿಕ ಮೈಲಿಗಲ್ಲಾಗಿದೆ. ಅಂದು ಮಂಗಳೂರಿನಲ್ಲಿ ನಡೆದ ಅಭೂತರ್ಪರ್ವ ಕೋಮು ಸೌಹಾರ್ದ ರ್‍ಯಾಲಿಯು ಇಡೀ ರಾಜ್ಯದ ಮತ್ತು ದೇಶದ ಗಮನವನ್ನು ಸೆಳೆಯಿತು. ಸಿ.ಪಿ.ಐ.(ಎಂ)ಪಕ್ಷದ ರಾಜ್ಯಸಮಿತಿಯ ತೀರ್ಮಾನದಂತೆ ಮತ್ತು ಕಳೆದ ವರ್ಷ ನವೆಂಬರ್ 6ರಂದು ಬೆಂಗಳೂರಿನಲ್ಲಿ ನಡೆದ ಎಡಪಕ್ಷಗಳ ಕೋಮುವಾದಿ ವಿರೋಧಿ ರಾಜಕೀಯ ಸಮಾವೇಶದ ಆಶಯದ ಹಿನ್ನೆಲೆಯಲ್ಲಿ ಈ ಅಭೂತಪೂರ್ವ ರ್‍ಯಾಲಿ ಮತ್ತು ಬಹಿರಂಗ ಸಭೆಯನ್ನು ನಡೆಸಲಾಗಿದೆ.

ಆರ್.ಎಸ್.ಎಸ್. ನೇತೃತ್ವದ ಸಂಘಪರಿವಾರವು ಕರಾವಳಿ ಪ್ರದೇಶವನ್ನು ನಿರ್ದಿಷ್ಟವಾಗಿ ದಕ್ಷಿಣ ಕನ್ನಡ ಜಿಲ್ಲೆಯನ್ನು ತನ್ನ ಕೋಮುವಾದ ಪ್ರಯೋಗ ಶಾಲೆಯನ್ನಾಗಿ ಮಾಡಿಕೊಂಡು ನೈತಿಕ ಪೋಲಿಸಗಿರಿಯಿಂದ ಹಿಡಿದು ಗೋರಕ್ಷಣೆ ಹೆಸರಿನಲ್ಲಿ ದೇಶಪ್ರೇಮ ಹೆಸರಿನಲ್ಲಿ ನಿರಂತರವಾಗಿ ಕೊಲೆ, ಸುಲಿಗೆ ಮತ್ತು ಹಲ್ಲೆಗಳ ಮುಖಾಂತರ ಕೋಮು ಧ್ರುವೀಕರಣ ಮಾಡಲು ಅಲ್ಪಸಂಖ್ಯಾತರ ಮೇಲೆ ದಾಳಿಯನ್ನು ನಡೆಸುತ್ತಿದೆ. ಅದೇ ಪ್ರಮಾಣದಲ್ಲಿ ಇಡೀ ರಾಜ್ಯದಲ್ಲಿ ಸಹ ಬಿ.ಜೆ.ಪಿ. ಮತ್ತು ಆರ್.ಎಸ್.ಎಸ್. ಆಕ್ರಮಣಕಾರಿ ಹೋಗುತ್ತಿದೆ. ಚುನಾವಣೆಗಳು ಹತ್ತಿರ ಬರುತ್ತಿರುವ ಹಿನ್ನೆಲೆಯಲ್ಲಿ ಈ ಕೋಮು ಆಕ್ರಮಣ ಹೆಚ್ಚಾಗುವ ಎಲ್ಲಾ ಸಾಧ್ಯತೆಗಳು ಕಂಡು ಬರುತ್ತಿದೆ. ದುರಂತವೆಂದರೆ ಈ ರಾಜ್ಯದಲ್ಲಿ ಕಾಂಗ್ರೇಸ್ ಪಕ್ಷ ಅಧಿಕಾರದಲ್ಲಿದೆ. ಜಾತ್ಯಾತೀತ ಪಕ್ಷವೆಂದು ಹೇಳಿಕೊಳ್ಳುವ ಈ ಪಕ್ಷ ಕೋಮುವಾದಿ ಶಕ್ತಿಗಳ ವಿರುದ್ಧ ಚಕಾರವೆತ್ತುವುದಿಲ್ಲ. ಇನ್ನು ಜನತಾದಳ ಅಪ್ಪಟ ಅವಕಾಶವಾದಿತನವನ್ನು ಪ್ರದರ್ಶಿಸುತ್ತಿದೆ. ಹಲವಾರು ಸಂದರ್ಭದಲ್ಲಿ ಕೋಮುವಾದಿ ಶಕ್ತಿಗಳೊಂದಿಗೆ ಶಾಮೀಲಾಗಿದೆ.

ಇಂತಹ ಪರಿಸ್ಥಿತಿಯಲ್ಲಿ ಸಿ.ಪಿ.ಐ.(ಎಂ) ನಿರಂತರವಾಗಿ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟವನ್ನು ನಡೆಸುತ್ತಿದೆ. ಇತ್ತೀಚೆಗೆ ಇತರೆ ಎಡಪಕ್ಷಗಳ ಜೊತೆ ಸೇರಿ ಒಂದು ವಿಶಾಲವಾದ ಹೋರಾಟಗಳನ್ನು ರೂಪಿಸಲು ಪ್ರಯತ್ನ ಮಾಡುತ್ತಿದೆ. ನಿರ್ದಿಷ್ಟವಾಗಿ ಕರಾವಳಿ ಪ್ರದೇಶದಲ್ಲಿನ ಸಂಘಪರಿವಾರ ಕೋಮುದಾಳಿಗಳ ವಿರುದ್ಧ, ಜಾತಿತಾರತಮ್ಯದ ವಿರುದ್ಧ, ಮೌಡ್ಯಾಚರಣೆಗಳ ವಿರುದ್ಧ ಮತ್ತು ಮಹಿಳೆಯ ಮೇಲೆ ನಡೆಯುತ್ತಿರುವ ಅತ್ಯಾಚಾರ, ಕೊಲೆಗಳ ವಿರುದ್ಧ ಸಿ.ಪಿ.ಐ.(ಎಂ) ಪಕ್ಷ ನಿರಂತರ ಹೋರಾಟಗಳನ್ನು ನಡೆಸುತ್ತಾ ಬಂದಿದೆ. 2012 ರಲ್ಲಿ ಉಡುಪಿಯ ಕೃಷ್ಣಮಠದಲ್ಲಿ ನಡೆಯುತ್ತಿರುವ ಪಂಕ್ತಿಬೇಧದ ವಿರುದ್ಧ, ಕುಕ್ಕೆ ಸುಬ್ರಮಣ್ಯದಲ್ಲಿ ನಡೆಯುತ್ತಿದ್ದ ಮಡೆ ಸ್ನಾನ ಎಂಬ ಅನಿಷ್ಟ ಪದ್ಧತಿಯ ವಿರುದ್ಧ ಮತ್ತು ಕುಪ್ರಸಿದ್ಧ ಉಜಿರೆಯ ಸೌಜನ್ಯ ಎಂಬ ವಿದ್ಯಾರ್ಥಿನಿ ಕೊಲೆ ವಿರುದ್ದ ನಿರಂತರ ಹೋರಾಟಗಳನ್ನು ನಡೆಸುತ್ತಾ ರಾಜ್ಯದ ಗಮನವನ್ನು ಸೆಳೆಯಲಾಯಿತು. ಈ ಎಲ್ಲದರ ಮುಂದುವರೆದ ಭಾಗವೇ ಫೆಬ್ರವರಿ 25 ರ "ಕೋಮ ಸೌಹಾರ್ಧ ರ್‍ಯಾಲಿ".

ಈ ಹೋರಾಟವು ಒಂದು ರೀತಿಯಲ್ಲಿ "ಹುಲಿಯ ಗುಹೆಯೊಳಗೆ ನುಗ್ಗಿ ನಡೆಸಿದ ಧೀರೋದ್ದಾತ ಹೋರಾಟ". ಈ ಹೋರಾಟವನ್ನು ನಡೆಸಲು ಪಕ್ಷ ರಾಜ್ಯ ಸಮಿತಿ ನಿರ್ದಿಷ್ಟವಾಗಿ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ, ಸತತ 3 ತಿಂಗಳಿಂದ ಎಲ್ಲಾ ರೀತಿಯಾದ ತಯಾರಿ ನಡೆಸಿದೆ. ಡಿಸೆಂಬರ್ 12 ರಂದು ಮಂಗಳೂರಿನ ಪುರಭವನದಲ್ಲಿ ನಡೆದ ವ್ಯಾಪಕ ಪ್ರಚಾರಾಂದೋಲನ ಅದೇ ರೀತಿ ಉಡುಪಿ ಜಿಲ್ಲೆಯ ಫೆಬ್ರವರಿ 6ನೇ ತಾರೀಕಿನಂದು ನಡೆದ ಕೋಮುವಾದಿ ವಿರೋಧಿ ಸಮಾವೇಶ ಮತ್ತು ಪ್ರಚಾರಾಂದೋಲನಗಳ ಫೆಬ್ರವರಿ 21 ರಂದು ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದ ಸಮಾವೇಶ ಪ್ರಚಾರಾಂದೋಲನ ಸಂಘಪರಿವಾರದ ಸಂಘಟನೆಗಳಿಗೆ ಗಾಬರಿ ಹಿಟ್ಟಿಸಿದೆ. ಅದರ ಜೊತೆಗೆ ಸೌಹಾರ್ದ ರ್‍ಯಾಲಿಗೆ ಕೇರಳದ ಮುಖ್ಯಮಂತ್ರಿ ಕಾಂ॥ ಪಿನರಾಯಿ ವಿಜಯನ್ ಬರುತ್ತಾರೆಂದು ಗೊತ್ತಾದ ಮೇಲೆ ಅವರುಗಳಿಗೆ ಭಯ ಪ್ರಾರಂಭವಾಗಿ ಫೆಬ್ರವರಿ 15 ರಿಂದಲೇ ಸಾಮಾಜಿಕ ಜಾಲತಾಣಗಳ ಮುಖಾಂತರ ಈ ರ್‍ಯಾಲಿಯ ವಿರುದ್ಧ ಮತ್ತು ಪಿನರಾಯಿ ವಿಜಯನ್ ಅವರ ವಿರುದ್ಧ ಆಕ್ರಮಣಕಾರಿಯಾಗಿ ಅಪಪ್ರಚಾರವನ್ನು ಪ್ರಾರಂಭ ಮಾಡಿದವು. ಅದರ ನಂತರ ಇಡೀ ಸಂಘಪರಿವಾರದ ಸಂಘಟನೆಗಳು ಒಂದೊಂದಾಗಿ ಪ್ರತಿದಿನ ಪತ್ರಿಕಾ ಗೋಷ್ಟಿಗಳನ್ನು ನಡೆಸಿ ಈ ಕಾರ್ಯಕ್ರಮವನ್ನು ನಡೆಯದ ಹಾಗೆ ಮಾಡಲು ಒಂದು ರೀತಿಯಾದಂತಹ ಭಯದ ವಾತವರಣವನ್ನು ನಿರ್ಮಿಸಲಾಯಿತು. ಜಿಲ್ಲೆಯಾದ್ಯಂತ ಇರುವ ತನ್ನ ಶಾಖೆಗಳ ಮುಖಾಂತರ ಜನರನ್ನು ಕಾರ್ಯಕ್ರಮಕ್ಕೆ ಬಾರದಂತೆ ಮಾಡಲು ಎಲ್ಲಾ ರೀತಿಯಾದಂತಹ ಪ್ರಯತ್ನಗಳನ್ನು ಮಾಡಿದರು. ಅಷ್ಟೇ ತೀವ್ರವಾಗಿ ನಮ್ಮ ಪಕ್ಷದ ಕಾರ್ಯಕರ್ತರು, ಮುಖಂಡರು ಅವರ ಬೆದರಿಕೆಗಳಿಗೆ ದಿಟ್ಟ ಸವಾಲನ್ನು ಎಸೆದು ತಮ್ಮ ಪ್ರಚಾರ ಮತ್ತು ತಯಾರಿ ಕೆಲಸಗಳನ್ನು ಹೆಚ್ಚು ಮಾಡಿದರು.

ಸಂಘಪರಿವಾರದ ಶಕ್ತಿಗಳು 3 ಸುತ್ತು ಫ್ಲೆಕ್ಸುಗಳನ್ನು, ಬ್ಯಾನರುಗಳನ್ನು, ಪೋಸ್ಟರುಗಳನ್ನು, ಬಾವುಟಗಳನ್ನು ನಾಶಗೊಳಿಸಿದರೂ ನಮ್ಮ ಕಾರ್ಯಕರ್ತರು ಎದೆಗುಂದಲಿಲ್ಲ. ದಿಕ್ಕು ತೋಚದೆ ಕಂಗಲಾದ ಸಂಘಪರಿವಾರದ ಶಕ್ತಿಗಳು ತೊಕ್ಕೊಟದಲ್ಲಿರುವ ನಮ್ಮ ಪಕ್ಷದ ಕಛೇರಿಗೆ ಬೆಂಕಿಹಾಕಿ ಸುಟ್ಟರು. ಇದರ ಮುಖಾಂತರ ಇಡೀ ಜಿಲ್ಲೆಯಲ್ಲಿ ಪ್ರಕ್ಷುಬ್ಧ ವಾತಾವರಣವನ್ನು ನಿರ್ಮಾಣ ಮಾಡಿದರು ಮತ್ತು ಹತಾಶೆಯಿಂದ ಫೆಬ್ರವರಿ 25 ರಂದು ಮಂಗಳೂರು ಬಂದ್‌ಗೆ ಕರೆಕೊಟ್ಟರು. ಅದು ಸಾಲದಂತೆ ಕೋಮು ಸೌಹಾರ್ಧ ರ್‍ಯಾಲಿಗೆ ವಿರುದ್ಧವಾಗಿ 24 ರಂದು ಮೆರವಣಿಗೆ ನಡೆಸಿ ಬಹಿರಂಗ ಸಭೆಯನ್ನು ನಡೆಸಿ ಕೇರಳದ ಮುಖ್ಯಮಂತ್ರಿ ಪಿನರಾಯಿ ವಿಜಯನ್ ಅವರನ್ನು ಮಂಗಳೂರು ಒಳಗೆ ಕಾಲಿಡಲು ಬಿಡುವುದಿಲ್ಲವೆಂದು ಘರ್ಜಿಸಿದರು. ಇದರಿಂದಾಗಿ ಇಡೀ ರಾಜ್ಯಾದ್ಯಂತ ಕಾರ್ಯಕ್ರಮಕ್ಕೆ ಮೊದಲೇ ಒಂದು ರೀತಿ ಆತಂಕ ಮತ್ತು ಕುತೂಹಲವನ್ನು ನಿರ್ಮಾಣ ಮಾಡಿತ್ತು ಮತ್ತು ರಾಜ್ಯದ ಎಲ್ಲಾ ವಿಭಾಗದ ಜನರ ಗಮನ ಸೆಳೆಯಿತು. ಇದೇ ಹೊತ್ತಿನಲ್ಲಿ ನಮ್ಮ ಇಡೀ ಪಕ್ಷದಲ್ಲಿ ಇವೆಲ್ಲವನ್ನು ಎದುರಿಸೇ ತೀರುತ್ತೇವೆಂದು ದೃಢತೆಯು ಹೆಚ್ಚಾಯಿತು. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಈ ಹೋರಾಟಕ್ಕೆ ರಾಜ್ಯದ ಮತ್ತು ಇತರಡೆಗಳಲ್ಲಿರುವ ಎಲ್ಲಾ ಪ್ರಗತಿಪರರು ಜಾತ್ಯಾತೀತವಾದಿಗಳು, ಬರಹಗಾರರು, ಕವಿಗಳು, ದಲಿತ ಸಂಘಟನೆಗಳ ಮುಖಂಡರು ಇತರೆ ಸಂಘಟನೆಗಳು ನಮ್ಮ ನಿರೀಕ್ಷೆಗಿಂತಲೂ ಹೆಚ್ಚಿನ ರೀತಿಯಲ್ಲಿ ಬೆಂಬಲ ಮತ್ತು ಸೌಹಾರ್ಧತೆಯನ್ನು ಪ್ರಕಡಿಸಿದರು. ಇದು ನಮಗೆ ಇನ್ನಷ್ಟು ಸ್ಪೂರ್ತಿಯನ್ನು ನೀಡಿತು.

"ಹೇಗಾದರೂ ಮಾಡಿ ಕಾರ್ಯಕ್ರಮ ನಡೆಯಲು ಬಿಡಬಾರದು ಎಂದು ಸಂಘಪರಿವಾರದ ಶಕ್ತಿಗಳು, ನಡೆಸೇ ತೀರುತ್ತೇವೆ ಎಂದು ನಮ್ಮ ದೃಢ ತಿರ್ಮಾನ" ಇವೆರಡು ಅಂಶಗಳು ಇಡೀ ರಾಜ್ಯದ ಜನತೆಯ ಗಮನ ಸೆಳೆಯಿತು. ಇದೇ ಸಂದರ್ಭದಲ್ಲಿ ನಮ್ಮ ರ್‍ಯಾಲಿಯನ್ನು ನಿಲ್ಲಿಸಬೇಕೆಂದು ಹಿಂದಿನ ದಿವಸದಿಂದಲೇ ಬಸ್ಸುಗಳಿಗೆ ಕಲ್ಲು ಹೊಡೆಯುವುದು, ಬೆಂಕಿ ಹಾಕುವ ಕೆಲಸಗಳನ್ನು ಮಾಡಿದರು. ಒಟ್ಟಿನಲ್ಲಿ ಒಂದು ರೀತಿಯ ಭಯದ ವಾತವರಣವನ್ನು ನಿರ್ಮಾಣ ಮಾಡಲು ಸಂಘಪರಿವಾರದ ಶಕ್ತಿಗಳು ತನ್ನೆಲ್ಲಾ ಪ್ರಯತ್ನ ಮಾಡಿತು.

ಕಡೆಗೆ ಫೆಬ್ರವರಿ 25 ರಂದು ಬೆಲಿಗ್ಗೆ 10:35 ನಿಮಿಷಕ್ಕೆ ಸಂಗಾತಿ ಪಿನರಾಯಿ ವಿಜಯನ್ ಮಲಬಾರ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಕಂಕನಾಡಿ ರೈಲ್ವೇ ಸ್ಟೇಷನ್‌ನ ಪ್ಲಾಟ್‌ಫಾರಂನಲ್ಲಿ ಇಳಿದು ಮಂಗಳೂರಿಗೆ ಹೆಜ್ಜೆ ಇಟ್ಟರು. ಇಡೀ ಪಕ್ಷಕ್ಕೆ ಅದು ಪ್ರತಿಷ್ಠೆಯ ಪ್ರಶ್ನೆ ಆಗಿತ್ತು. ಅವರು ಕಾಲಿಟ್ಟಾಗ ರೋಮಾಂಚನವು ಆಗಿತ್ತು. ಪಿನರಾಯಿ ವಿಜಯನ್ ಅವರನ್ನು ರಸ್ತೆ ಮುಖಾಂತರ ಬಂದರೆ ರಸ್ತೆಯಲ್ಲಿ ತಡೆಯುತ್ತೇವೆ, ರೈಲಿನಲ್ಲಿ ಬಂದರೆ ರೈಲು ತಡೆಯುತ್ತೇವೆ ಮತ್ತು ವಿಮಾನದಲ್ಲಿ ಬಂದರೆ ನಿಲ್ದಾಣದಲ್ಲಿ ತಡೆಯುತ್ತೇವೆ ಎಂದು ಹಠ ತೊಟ್ಟಿದ್ದ ಆರ್.ಎಸ್.ಎಸ್. ಗೆ ಘೋರ ಪರಾಭವ ಆಯ್ತು. ಇದು ಸಿ.ಪಿ.ಐ.(ಎಂ) ಎಡ ಮತ್ತು ಜಾತ್ಯಾತೀತವಾದಿಗಳಿಗೆ ಹಾಗೂ ಕೋಮುವಾದವನ್ನು ವಿರೋಧಿಸುವ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಸಂದ ಜಯವೂ ಆಗಿತ್ತು.

ನಂತರ ಮಂಗಳೂರು ಹೃದಯ ಭಾಗದ ಜ್ಯೋತಿ ಚಿತ್ರಮಂದಿರದಿಂದ ಸಾವಿರಾರು ಜನ ನೆಹರು ಮೈದಾನದ ಮೆರವಣಿಗೆಯಲ್ಲಿ ಹೊರಟ ಜನರು ರಸ್ತೆ ಎರಡು ಕಡೆಗಳಲ್ಲಿ ಸಾಲುಗಟ್ಟಿ ಕುತೂಹಲದಿಂದ ನೋಡುತ್ತಿದ್ದ ದೃಶ್ಯ ಒಂದು ರೀತಿಯ ಭಾವನಾತ್ಮಕವಾಗಿತ್ತು. ಮೆರವಣಿಗೆ ನೆಹರು ಮೈದಾನ ತಲುಪಿದಾಗ ಅಲ್ಲಿ ಹಾಕಲಾಗಿದ್ದ ಕುರ್ಚಿಗಳು ಭರ್ತಿಯಾಗಿ–ತ್ತು. ಉರಿಬಿಸಿಲಿನಲ್ಲಿ ಮೆರವಣಿಗೆಯಲ್ಲಿ ಬಂದ ಜನಸಾಗರ ಬಿಸಿಲಿನಲ್ಲೇ ನಿಂತು ಬಹಿರಂಗ ಸಭೆಯನ್ನು ಯಶಸ್ವಿಗೊಳಿಸಿ ಕರ್ನಾಟಕದ ರಾಜಕೀಯ ಪುಟಗಳಲ್ಲಿ ಒಂದು ಮೈಲಿಗಲ್ಲನ್ನು ನೆಟ್ಟರು.

ಈ ಇಡೀ ಕಾರ್ಯಕ್ರಮ ಕೇವಲ ರಾಜ್ಯದ ಜನತೆಯ ಗಮನವನ್ನು ಸೆಳೆದಿದ್ದು ಮಾತ್ರವಲ್ಲ, ಎಡ ಪ್ರಜಾಸತ್ತಾತ್ಮಕ, ಪ್ರಗತಿಪರ ಮತ್ತು ಕೋಮುವಾದಿ ವಿರೋಧಿ ಶಕ್ತಿಗಳ ಧ್ರುವೀಕರಣಗೊಳ್ಳುವ ಸಾಧ್ಯತೆಗಳನ್ನು ಮುಂದಿಟ್ಟಿದೆ. ಕೋಮುವಾದಿ ಶಕ್ತಿಗಳನ್ನು ಎದುರಿಸಿ ನಿಲ್ಲಿಸುವ ರಾಜಕೀಯ ಪಕ್ಷವೊಂದಿದೆ ಎಂಬುದನ್ನು ದೃಢಪಡಿಸಿದೆ. ಅದೇ ಸಂದರ್ಭದಲ್ಲಿ ಸಿ.ಪಿ.ಐ.(ಎಂ) ನ ರಾಜಕೀಯ ಜವಾಬ್ದಾರಿಯು ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ನಮ್ಮ ಹೋರಾಟಕ್ಕೆ ಬೆಂಬಲ ಕೊಟ್ಟ ಎಲ್ಲರನ್ನು ಒಂದು ವೇದಿಕೆಗೆ ತಂದು ಕೋಮುವಾದಿ ಶಕ್ತಿಗಳ ವಿರುದ್ಧವಾದ ಒಂದು ವಿಶಾಲ ಹೋರಾಟದ ನೆಲೆಯನ್ನು ರೂಪಿಸಬೇಕಾಗಿದೆ. ಕಾರ್ಯಕ್ರಮದ ನಂತರ ಕೆಲವರು ಕೆಲವು ಪತ್ರಿಕೆಗಳಲ್ಲಿ ಈ ಕಾರ್ಯಕ್ರಮವನ್ನು ಪ್ರಶಂಸೆ ಮಾಡಿ ಲೇಖನಗಳನ್ನೂ ಬರೆದಿದ್ದಾರೆ. ಆ ಲೇಖನಗಳಲ್ಲಿ ನಮ್ಮ ಪಕ್ಷದ ಬಗ್ಗೆ ಕೆಲವು ಟೀಕೆಗಳನ್ನು ಮಾಡಿ, ಸಲಹೆಗಳನ್ನು ಕೊಟ್ಟಿದ್ದಾರೆ. ಅವರ ಸಲಹೆಗಳನ್ನು ನಮ್ಮ ಪಕ್ಷ ಪರಿಗಣಿಸಿ ಮುಂದಿನ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ಅದೇ ಸಂದರ್ಭದಲ್ಲಿ ಕೆಲವರು ಚಳುವಳಿಗೆಗಳ ಬಗ್ಗೆ ಸಿ.ಪಿ.ಐ.(ಎಂ) ಪಕ್ಷ ದೊಡ್ಡಣ್ಣನ ಭಾವನೆ ಹೊಂದಿದೆ ಎಂದು ಟೀಕಿಸಿದ್ದಾರೆ. ಆ ಗೆಳೆಯರಿಗೆ ಸಿ.ಪಿ.ಐ.(ಎಂ) ಪಕ್ಷ ಹೇಳಬಯಸುವುದಿಷ್ಟೆ. ಸಿ.ಪಿ.ಐ.(ಎಂ) ಸಮಸ್ಯೆಗಳ ಆಧಾರದಲ್ಲಿ ಎಲ್ಲರೂ ಒಟ್ಟಿಗೆ ಹೋರಾಟಗಳನ್ನು ನಡೆಸಲು ಸಿದ್ದವಾಗಿದ್ದೇವೆ. ಯಾವುದೇ ಕಾರಣಕ್ಕೂ ಯಾರನ್ನೂ ನಾವು ಕಡಿಮೆ ಅಂದಾಜು ಮಾಡುವುದಿಲ್ಲ ಅಥವ ನಗಣ್ಯ ಎಂದು ಭಾವಿಸುವುದಿಲ್ಲ. ಆದರೆ ಯಾರಾದರೂ ಅವರಿಷ್ಟಕ್ಕೆ ಅವರು ತೀರ್ಮಾನ ಮಾಡಿ ನಮ್ಮ ಜೊತೆಗೆ ಬನ್ನಿ ಎಂದರೆ ಅದಕ್ಕೆ ನಮ್ಮ ಒಪ್ಪಿಗೆಯಿಲ್ಲ. ಇಂತಹ ಅ–ಪ್ರಜಾಸತ್ತಾತ್ಮಕ ವಿಧಾನ ಸಿ.ಪಿ.ಐ.(ಎಂ) ಒಪ್ಪುವುದು ಕಷ್ಟವಾಗುತ್ತದೆ. ಜಂಟಿ ಕಾರ್ಯಕ್ರಮಗಳನ್ನು ಒಟ್ಟಿಗೆ ಕೂತು ಚರ್ಚೆ ಮಾಡಿ ತೀರ್ಮಾನಿಸಬೇಕು. ಆದರೂ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಇಟ್ಟುಕೊಂಡೇ ಇಂದು ದೇಶವನ್ನು, ರಾಜ್ಯವನ್ನು ಕಾಡುತ್ತಿರುವ ಎರಡು ಗಂಡಾಂತರಕಾರಿ ಶಕ್ತಿಗಳಾದ ನವಉದಾರಿವಾದ ಮತ್ತು ಕೋಮುವಾದವನ್ನು ಎದುರಿಸಲು ಎಡ, ಪ್ರಗತಿಪರ, ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಂದುಗೂಡಬೇಕಾದ ಅನಿವಾರ್ಯತೆಯಿದೆ. ಒಂದುಗೂಡಿಸುವ ಜವಾಬ್ದಾರಿಯನ್ನು ಸಿ.ಪಿ.ಐ.(ಎಂ) ಮಾಡಬೇಕಾಗಿದೆ. ಫೆಬ್ರವರಿ 25 ರ ಕಾರ್ಯಕ್ರಮ ನಮಗೆ ತೆರೆದಿಟ್ಟಿರುವ ಅವಕಾಶವನ್ನು ನಾವು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಬೇಕಾಗಿದೆ. ಚುನಾವಣೆಗಳು ಹತ್ತಿರ ಬರುತ್ತಿರುವ ಈ ಸಂದರ್ಭದಲ್ಲಿ ಹೆಚ್ಚು ವೇಗವಾಗಿ ಈ ಕೆಲಸವಾಗಬೇಕಾಗಿದೆ. ●



“ಗೂಂಡಾಗಿರಿ ಸಹಿಸುವುದಿಲ್ಲ, ವಿಶ್ವವಿದ್ಯಾಲಯ ನಮ್ಮದು, ಯಾರಪ್ಪನದ್ದೂ ಅಲ್ಲ”
ಎಬಿವಿಪಿ ವಿರುದ್ಧ ವಿರುದ್ಧ ದಿಲ್ಲಿ ವಿಶ್ವವಿದ್ಯಾಲಯದಲ್ಲಿ ಐತಿಹಾಸಿಕ ಪ್ರತಿಭಟನೆ

ಫೆಬ್ರುವರಿ 28 ರಂದು ದೇಶದ ರಾಜಧಾನಿ ಮತ್ತೊಂದು ಬೃಹತ್ ವಿದ್ಯಾರ್ಥಿ ಪ್ರತಿಭಟನೆಯನ್ನು ಕಂಡಿತು. ‘ಡಿಯು ಹಮಾರಾ ಆಪ್‌ಕಾ, ನಹೀ ಕಿಸೀಕೀ ಬಾಪ್‌ಕಾ’(ದಿಲ್ಲಿ ವಿವಿ ನಮ್ಮದು, ನಿಮ್ಮದು, ಯಾರಪ್ಪನದ್ದೂ ಅಲ್ಲ) ‘ಗೂಂಡಾಗರ್ದಿ ನಹೀ ಸಹೇಂಗೇ’(ಗೂಡಾಗಿರಿಯನ್ನು ಸಹಿಸುವುದಿಲ್ಲ. ಈ ಪ್ರತಿಭಟನೆ ನಿರ್ದಿಷ್ಟವಾಗಿ ಸಂಘ ಪರಿವಾರದ ವಿದ್ಯಾರ್ಥಿ ಸಂಘಟನೆ ಎಂದು ಹೇಳಿಕೊಳ್ಳುತ್ತಿರುವ ಎಬಿವಿಪಿಯ ಗೂಂಡಾಗಿರಿಗೆ ವಿರುದ್ಧವಾಗಿ ನಡೆದ ರ‍್ಯಾಲಿ. ದಿಲ್ಲಿ ವಿಶ್ವವಿದ್ಯಾಲಯದಲ್ಲಿ ದಶಕಗಳಲ್ಲಿ ಇಮತಹ ವಿದ್ಯಾರ್ಥಿ, ಅಧ್ಯಾಪಕರ ಪ್ರತಿಭಟನೆ ಕಂಡಿರಲಿಲ್ಲ ಎಮದು ಹೇಳಲಾಗಿದೆ.

ದಿಲ್ಲಿ ವಿವಿಗೆ ಸೇರಿದ ರಾಮ್ಜಸ್ ಕಾಲೇಜಿನಲ್ಲಿ ಒಂದು ವಿಚಾರಸಂಕಿರಣಕ್ಕೆ ಅಡ್ಡಿಪಡಿಸಿದ, ಅದರ ವಿರುದ್ಧ ವಿದ್ಯಾರ್ಥಿಗಳು ಪ್ರತಿಭಟಿಸಿದಾಗ ವಿದ್ಯಾರ್ಥಿಗಳ ಜತೆಗೆ ಅಧ್ಯಾಪಕರನ್ನು ಕೂಡ ಕೇಂದ್ರ ಸರಕಾರದ ಅಡಿಯಲ್ಲಿರುವ ದಿಲ್ಲಿ ಪೋಲಿಸ್ ಸಿಬ್ಬಂದಿಯ ಎದು-ರೇ ಥಳಿಸಿದ ಘಟನೆಯಿಂದ ರೊಚ್ಚಿಗೆದ್ದು ನಡೆದ ಪ್ರತಿಭಟನೆ ಇದಾಗಿತ್ತು.

ಇದರಲ್ಲಿ ಸಾಮಾನ್ಯವಾಗಿ ವಿದ್ಯಾರ್ಥಿ ಪ್ರತಿಭಟನೆಗಳಲ್ಲಿ ಭಾಗವಹಿಸದ ದಿಲ್ಲಿ ವಿವಿಯ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ ಎಂದು



ವರದಿಯಾಗಿದೆ. ದಿಲ್ಲಿಯಲ್ಲಿರುವ ಜೆಎನ್‌ಯು, ಜಾಮಿಯ ಮಿಲಿಯ ಮತ್ತು ಅಂಬೇಡ್ಕರ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೂ ಮತ್ತು ದಿಲ್ಲಿ ಮತ್ತು ಜೆಎನ್‌ಯು ವಿಶ್ವವಿದ್ಯಾಲಯಗಳ ಅಧ್ಯಾಪಕರ ಸಂಘಗಳ (ಡಿಯುಟಿಎ, ಜೆಎನ್‌ಯುಟಿಎ))ದ ಸದಸ್ಯರು ಮತ್ತು ಇತರ ಅಧ್ಯಾಪಕರುಗಳೂ ಇದರಲ್ಲಿ ಭಾಗವಹಿಸಿದರು.

ಎಡಪಕ್ಷಗಳಲ್ಲದೆ ಕಾಂಗ್ರೆಸ್, ಎಎಪಿ ಮತ್ತು ಆರ್‌ಜೆಡಿ ಮುಖಂಡರೂ ದಿಲ್ಲಿ ವಿವಿಯನ್ನು ವಿದ್ಯಾರ್ಥಿಗಳು ಎಂದು ಹೇಳಿಕೊಳ್ಳುವ ಗೂಂಡಾಗಳಿಂದ ಉಳಿಸಬೇಕೆನ್ನುವ ವಿದ್ಯಾರ್ಥಿಗಳ ಹೋರಾಟದೊಂದಿಗೆ ಸೌಹಾರ್ದ ವ್ಯಕ್ತಪಡಿಸಿದರು. ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರು ಮಾತಾಡುತ್ತ “ರಾಜಕೀಯ ನಮ್ಮ ಬದುಕಿನಲ್ಲಿ ಎಲ್ಲವನ್ನೂ ಅಲ್ಲದಿದ್ದರೂ ಮಹತ್ವದ ಸಂಗತಿಗಳನ್ನು ನಿರ್ಧರಿಸುತ್ತದೆ. ಆದ್ದರಿಂದ ನಮ್ಮ ರಾಜಕೀಯವನ್ನು ಜಾಣ್ಮೆಯಿಂದ ಆರಿಸಿಕೊಳ್ಳಬೇಕು. ಈ ವಿಷಯದಲ್ಲಿ ಈಗಿನ ಪೀಳಿಗೆ ಹಿಂದಿನ ನಮ್ಮ ಪೀಳಿಗೆಗಿಂತ ಹೆಚ್ಚು ಆತ್ಮವಿಶ್ವಾಸ ಹೊಂದಿದೆ ಎಂಬುದು ಸಂತೋಷದ ಸಂಗತಿ. ಇಂದು ಸಂಘ ಪರಿವಾರದವರು ನೀವು ಏನು ಧರಿಸಬೇಕು, ಏನನ್ನು ನೋಡಬೇಕು, ಏನು ತಿನ್ನಬೇಕು, ಯಾರೊಂದಿಗೆ ಗೆಳೆತನ ಮಾಡಬೇಕು, ಯಾರನ್ನು ಮದುವೆಯಾಗಬೇಕು ಎಂಬುದೆಲ್ಲವನ್ನೂ ತಾವೇ ನಿರ್ಧರಿಸಬೇಕೆನ್ನುತ್ತಾರೆ. ಇದಕ್ಕೆ ಅವಕಾಶ ಕೊಡಲು ಸಾಧ್ಯವಿಲ್ಲ. ನೂರಾರು ಹೂವುಗಳು ಅರಳಲಿ, ಸಾವಿರ ವಿಚಾರಗಳು ಸ್ಪರ್ಧಿಸಲಿ. ಸಂಘ ಪರಿವಾರದವರಿಗೆ ತಮ್ಮ ಬೌದ್ಧಿಕ ಸಾಮರ್ಥ್ಯದಿಂದ ಗೆಲ್ಲಲು ಸಾಧ್ಯವಿಲ್ಲವಾದ್ದರಿಂದ ಲಾಠಿ, ಗೂಂಡಾಗಿರಿಯನ್ನು ಬಳಸುತ್ತಿದ್ದಾರೆ” ಎಂದು ಹೇಳಿದರು.

ಇದು ನಮ್ಮ ಸಂವಿಧಾನಿಕ ಹಕ್ಕುಗಳನ್ನು ರಕ್ಷಿಸಿಕೊಳ್ಳುವ ಸಾಮೂಹಿಕ ಹೋರಾಟ ಎಂದು ಸಿಪಿಐ ಮುಖಂಡ ಡಿ.ರಾಜ ಹೇಳಿದರು.

ವಿದ್ಯಾರ್ಥಿ ಮತ್ತು ಅಧ್ಯಾಪಕರ ಸಂಘಟನೆಗಳ ಮುಖಂಡರು ಮಾತನಾಡಿದರು.

ಮಾರ್ಚ್ 4ರಂದು ಮಂಡಿ ಹೌಸ್‌ನಿಂದ ಸಂಸದ್ ಮಾರ್ಗ್ ವರೆಗೆ ‘ನಾಗರಿಕರ ಮೆರವಣೊಗೆ’ ನಡೆಸಲು ನಿರ್ಧರಿಸಲಾಯಿತು.

ಈ ಐತಿಹಾಸಿಕ ಪ್ರತಿಭಟನೆಯ ಕರೆಗೆ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ನಡುವೆ ಭಾರೀ ಸ್ಪಂದನೆಯನ್ನು ಗಮನಿಸಿದ ಎಬಿವಿಪಿ ಈ ಪ್ರತಿಭಟನೆಯ ಹಿಂದಿನ ದಿನ ಇದು ರಾಷ್ಟ್ರವಾದ ಮತ್ತು ರಾಷ್ಟ್ರ-ವಿರೋಧದ ನಡುವಿನ ಸಂಘರ್ಷ ಎಂದು ಬಿಂಬಿಸಲು ‘ತಿರಂಗಾ’ ಮೆರವಣಿಗೆ ನಡೆಸಿತ್ತು. ಇದರಲ್ಲಿ ಕೆಲವು ನೂರು ಎಬಿವಿಪಿ ಕಾರ್ಯಕರ್ತರು ಭಾಗವಹಿಸಿದ್ದರೆ, ಮರುದಿನದ ಮೆರವಣಿಗೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಭಾಗವಹಿಸಿದ್ದು ಇದು ಎರಡು ವಿದ್ಯಾರ್ಥಿ ಗುಂಪುಗಳ ನಡುವಿನ ಕಿತ್ತಾಟವಲ್ಲ ಎಂಬುದನ್ನು ಸಾಬೀತು ಮಾಡಿತು.

ಮೆರವಣಿಗೆ ಹೋಗುವ ದಾರಿಯಲ್ಲಿ ‘ಎಬಿವಿಪಿ ಕ್ಯಾಂಪಸ್ ಶಾಂತಿ ಬಯಸುತ್ತದೆ’ ಎಂದು ಕೆಲವರು ಫಲಕ ಹಿಡಿದು ನಿಂತದ್ದು ತಮಾಷೆಯಾಗಿ ಕಾಣುತ್ತಿತ್ತು ಎಂದು ಒಬ್ಬ ವೀಕ್ಷಕರು ಉದ್ಗರಿಸಿದರು.

ಮೆರವಣಿಗೆಯ ನಂತರ ಇಬ್ಬರು ಎಬಿವಿಪಿ ಮಂದಿ ತಮಗಿರುವ ಸಾಮಾನ್ಯ ನಿರ್ದೇಶನದಂತೆ ಪ್ರತಿಭಟನೆಯಲ್ಲಿ ಭಾಗವಹಿಸಿದವರನ್ನು ಪೋಲೀಸರ ಎದುರೇ ಥಳಿಸಿದಾಗ ಈ ಐತಿಹಾಸಿಕ ಪ್ರತಿಭಟನೆಯ ಹಿನ್ನೆಲೆಯಲ್ಲಿ ದಿಲ್ಲಿ ಪೋಲೀಸರೂ ನಿರ್ವಾಹವಿಲ್ಲದೆ ಅವರನ್ನು ಬಂಧಿಸಿ ಎಫ್‌ಐಆರ್ ದಾಖಲಿಸಿದ್ದಾರೆ, ಎಬಿವಿಪಿ ಅವರಿಬ್ಬರನ್ನೂ ‘ಅಮಾನತು’ ಮಾಡಿರುವುದಾಗಿ ಪ್ರಕಟಿಸಿದೆ!

ಅಮೆರಿಕಾದಲ್ಲಿ ದ್ವೇಷಕೃತ್ಯ–ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ
ಇದು ಮರುಕಳಿಸದಂತೆ ಭರವಸೆ ಪಡೆಯಲು ಭಾರತ ಸರಕಾರಕ್ಕೆ ಆಗ್ರಹ

ಅಮೆರಿಕ ಸಂಯುಕ್ತ ಸಂಸ್ಥಾನಗಳ ಕನ್ಸಾಸ್‌ನ ಒಲಥೆ ನಗರದಲ್ಲಿ ಒಬ್ಬ ಯುವ ಭಾರತೀಯನನ್ನು ಕೊಂದ ಮತ್ತು ಮತ್ತೊಬ್ಬನನ್ನು ಗಾಯಗೊಳಿಸಿರುವ ದ್ವೇಷಾಪರಾಧದ ಕೃತ್ಯದ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಕ್ರೋಶ ವ್ಯಕ್ತಪಡಿಸಿದೆ. ಪ್ರಾಣ ಕಳಕೊಂಡ ಶ್ರೀನಿವಾಸ ಕುಚಿಬೊತ್ಲ ಮತ್ತು ಗಾಯಗೊಂಡಿರುವ ಅಲೋಕ್ ಮದ್ಸಾನಿ ಇಬ್ಬರೂ ಕಾನೂನಬದ್ಧವಾಗಿ ಆ ದೇಶದಲ್ಲಿ ನೆಲೆಸಿದ್ದರು ಮತ್ತು ಕೆಲಸ ಮಾಡುತ್ತಿದ್ದರು.

ಈ ದ್ವೇಷ ಕೃತ್ಯ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಕೆಲಸ ಮಾಡುತ್ತಿರುವ ವಲಸಿಗರ ವಿರುದ್ಧ ಟ್ರಂಪ್ ಆಡಳಿತ ಅಧಿಕಾರ ವಹಿಸಿಕೊಂಡ ನಂತರ ಹೆಚ್ಚೆಚ್ಚು ವಿಷ ಕಾರುತ್ತಿರುವ ಹಿನ್ನೆಲೆಯಲ್ಲಿ ಬಂದಿದೆ. ಹಲವು ದೇಶಗಳಿಂದ ಈ ದೇಶಕ್ಕೆ ಪ್ರಯಾಣದ ಮೇಲೆ ನಿರ್ಬಂಧಗಳನ್ನು ಹೇರಿರುವುದು ಈಗ ‘ಹೊರಗಿನವರು’ ಎಂದು ಪರಿಗಣಿಸ ಲಾಗುತ್ತಿರುವವರ ಮೇಲೆ ಗುರಿಯಿಡುವುದಕ್ಕೆ ಪೋಷಣೆ ನೀಡಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಹಲ್ಲೆ ಅಮೆರಿಕಾದಲ್ಲಿ ನೆಲೆಸಿರುವ ಭಾರತೀಯ ಸಮುದಾಯದವರನ್ನು ನಡುಗಿಸಿ ಬಿಟ್ಟಿದೆ, ಭಾರತ ಸರಕಾರ ತಕ್ಷಣವೇ ಈ ಪ್ರಶ್ನೆಯನ್ನು ಅಮೆರಿಕನ್ ಸರಕಾರದೊಂದಿಗೆ ಎತ್ತಿಕೊಳ್ಳಬೇಕು, ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ಮಾಡಬೇಕು ಮತ್ತು ಇಂತಹ ಘಟನೆ ಮತ್ತೆ ನಡೆಯದಂತೆ ಭರವಸೆ ಪಡೆಯಬೇಕು ಎಂದು ಆಗ್ರಹಿಸಿದೆ.

ಶ್ರೀನಿವಾಸ್ ಅವರ ತಂದೆ–ತಾಯಿ ಮತ್ತು ಕುಟುಂಬದವರಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹಾರ್ದಿಕ ಸಂತಾಪಗಳನ್ನು ವ್ಯಕ್ತಪಡಿಸಿದೆ.

ಇಲ್ಲಿ ಯಾರೂ ವಿಜಯಿಗಳಿಲ್ಲ–ಯೆಚುರಿ

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಕೂಡ ಶ್ರೀನಿವಾಸ್ ಕುಚಿಬೊತ್ಲ ಅವರ ಕುಟುಂಬದವರಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹಾರ್ದಿಕ ಸಂತಾಪಗಳನ್ನು ವ್ಯಕ್ತಪಡಿಸುತ್ತ ಮತ್ತು ಅಲೋಕ್ ರೆಡ್ಡಿ ಮದ್ಸಾನಿ ಬೇಗನೇ ಗುಣಮುಖರಾಗಲಿ ಎಂದು ಹಾರೈಸುತ್ತ ‘ನನ್ನ ದೇಶದಿಂದ ಹೊರಟ್ಹೋಗಿ’ ಎಂದು ಹೇಳುತ್ತ ನಡೆದಿರುವ ಈ ದ್ವೇಷಾಪರಾಧ ಅತ್ಯಂತ ಖಂಡನೀಯವಾದ ಮತ್ತು ಬೇಸರದ ಸಂಗತಿ ಎಂದಿದ್ದಾರೆ.

ಇದು ಬೇಜವಾಬ್ದಾರಿ ಹಾಗೂ ಸಂಕುಚಿತ ದೃಷ್ಟಿಯ ರಾಜಕೀಯ ಉಂಟು ಮಾಡುವ ನೋವನ್ನು ಮತ್ತೊಮ್ಮೆ ಬೆಳಕಿಗೆ ತಂದಿದೆ. ಇಂತಹ ರಾಜಕೀಯ ಐಡೆಂಟಿಟಿ, ಮೈಬಣ್ಣ ಅಥವ ಮತೀಯ ನಂಬಿಕೆಗಳ ಆಧಾರದಲ್ಲಿ ಅಲ್ಪಸಂಖ್ಯಾತರು ಮತ್ತು ಸಣ್ಣ ಗುಂಪುಗಳ ಬೆನ್ನಟ್ಟುತ್ತದೆ.

ನಾವು ಈ ಹಿಂದೆ ಇದನ್ನು ದಾದ್ರಿಯಲ್ಲಿ ಅಖ್ಲಾಖ್ ವಿಷಯದಲ್ಲಿ ನೋಡಿದ್ದೇವೆ, ಲತೇಹಾರ್‌ನಲ್ಲಿ ಇಬ್ಬರು ದನದ ವ್ಯಾಪಾರಿಗಳನ್ನು ನೇಣಿಗೇರಿಸಿದ್ದರಲ್ಲಿ ನೋಡಿದ್ದೇವೆ, ಹೇಗೆ ಈ ಭಾವೋದ್ವೇಗವನ್ನು ಬಡಿದೆಬ್ಬಿಸಿದಾಗ ಜನಜಂಗುಳಿಗಳು ವ್ಯಕ್ತಿಗಳು ಕೊಲೆಗಳಿಗಿಳಿಯುತ್ತಾರೆ ಎಂಬುದನ್ನು ನೋಡಿದ್ದೇವೆ. ಇಲ್ಲಿ ಯಾರೂ ವಿಜಯಿಗಳಿಲ್ಲ ಎಂದಿರುವ ಯೆಚುರಿ ನಮ್ಮ ಸರಕಾರ ಅಮೆರಿಕ ಸಂಯುಕ್ತ ಸಂಸ್ಥಾನಗಳ ಆಡಳಿತಕ್ಕೆ ಸಂಬಂಧಪಟ್ಟವರು ಇಂತಹ ಘಟನೆಗಳು ಮತ್ತೆ ನಡೆಯದ ಹಾಗೆ ಆದಷ್ಟು ಬೇಗನೇ ಕ್ರಮ ಕೈಗೊಳ್ಳುವಂತೆ ಬಲವಾದ ಒತ್ತಡವನ್ನು ಹಾಕಬೇಕು ಎಂದು ಆಗ್ರಹಿಸಿದ್ದಾರೆ. ○

ಮತ್ತೊಂದು ಮಹಿಳಾ–ಪರ ಚಿತ್ರಕ್ಕೆ ಕತ್ತರಿ: ಸೆನ್ಸಾರ್ ಮಂಡಳಿ ಸಂಘ ಪರಿವಾರದ ಸಿದ್ಧಾಂತದ ಜಾರಿಯ ಸಂಸ್ಥೆಯಾಗಬಾರದು– ಎಐಡಿಡಬ್ಲ್ಯುಎ ಖಂಡನೆ

ಭಾರತದಲ್ಲಿ ಇಂದು ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅದರ ಅಡೆ–ತಡೆಗಳನ್ನು ಮೀರಿ ನಿಲ್ಲಲು ಮಹಿಳೆಯರು ನಡೆಸುತ್ತಿರುವ ಹೋರಾಟಗಳನ್ನು ಚಿತ್ರಿಸಿರುವ ಅಲಂಕೃತಾ ಶ್ರೀವಾಸ್ತವ ಮತ್ತು ಪ್ರಕಾಶ ಝಾ ಅವರ ಚಲನಚಿತ್ರ ‘ಲಿಪ್‌ಸ್ಟಿಕ್ ಅಂಡರ್ ಮೈ ಬುರ್ಖ’ಕ್ಕೆ ಪ್ರಮಾಣ ಪತ್ರ ನೀಡಲು ಸೆನ್ಸಾರ್ ಮಂಡಳಿ ನಿರಾಕರಿಸಿದೆ. ಇದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ.

ಈ ಚಿತ್ರ ಮುಂಬೈ ಚಿತ್ರೋತ್ಸವದಲ್ಲಿ ಮಹಿಳಾ ಸಮಾನತೆಯ ಅತ್ಯುತ್ತಮ ಚಿತ್ರ ಎಂಬ ಪ್ರಶಸ್ತಿಯನ್ನು ಪಡೆದಿದೆ ಮತ್ತು ಟೋಕಿಯಿ ಚಿತ್ರೋತ್ಸವದಲ್ಲಿ ‘ಸ್ಪಿರಿಟ್ ಆಫ್ ಏಶ್ಯ’ ಪ್ರಶಸ್ತಿಯನ್ನು ಪಡೆದಿದೆ. ಸೆನ್ಸಾರ್ ಮಂಡಳಿಯ ಈ ನಿರ್ಧಾರಕ್ಕೆ ಭಾರತ ಸರಕಾರದ ಬೆಂಬಲವಿದೆ ಎಂಬುದು ಸ್ವಯಂವೇದ್ಯ. ಈ ಮೂಲಕ ಅಭಿಪ್ರಾಯ ಬಹುತ್ವದ ಬಗ್ಗೆ ಮತ್ತು ಸಾಮಾಜಿಕ ವಾಸ್ತವತೆಗಳ ಸೃಜನಾತ್ಮಕ ಚಿತ್ರಣಕ್ಕೆ ತನ್ನ ಅಸಹಿಷ್ಣುತೆಯನ್ನು ಅದು ಮತ್ತೊಮ್ಮೆ ಪ್ರದರ್ಶಿಸಿದೆ ಎಂದು ಎಐಡಿಡಬ್ಲ್ಯುಎ ಹೇಳಿದೆ.

ಅದು ‘ಮಹಿಳೋನ್ಮುಖ’ವಾಗಿದೆ(!) ಮತ್ತು ಅದರಲ್ಲಿ ಬೈಗುಳ ಪದಗಳಿವೆ ಎಂಬುದು ಸೆನ್ಸಾರ್ ಮಂಡಳಿಯ ಆಕ್ಷೇಪ ಎಂದು ವರದಿಯಾಗಿದೆ. ಕೇಂದ್ರೀಯ ಸೆನ್ಸಾರ್ ಮಂಡಳಿಯ ಅಧ್ಯಕ್ಷ ನಿಹಲಾನಿ ಪ್ರಮಾಣ ಪತ್ರ ನಿರಾಕರಿಸುವುದಕ್ಕೆ ಈ ಎರಡು ಮತ್ತು ಇತರ ಕಾರಣಗಳನ್ನು ಕೊಟ್ಟಿರುವುದು ಒಂದು ಪಿತೃಪ್ರಧಾನ ಮತ್ತು ಸಂಪ್ರದಾಯಶರಣ ಮನೋಭಾವವನ್ನು ಪ್ರಕಟಪಡಿಸುತ್ತದೆ. ಈ ಮನೋಭಾವ ಮಹಿಳೆಯರು ಸಿದ್ಧಮಾದರಿಗಳನ್ನು ಮುರಿಯುವುದನ್ನು ಮತ್ತು ಹಳೆಯ ವ್ಯವಸ್ಥೆಗೆ ಸವಾಲು ಹಾಕುವದನ್ನು ಸ್ವೀಕರಿಸುವದಿಲ್ಲ. ಒಂದು ಪ್ರಜಾಸತ್ತಾತ್ಮಕ ಮತ್ತು ಲಿಂಗನ್ಯಾಯದ ಸಮಾಜದಲ್ಲಿ ಸಾಮಾಜಿಕ ರೂಢಿಗಳನ್ನು ಉಲ್ಲಂಘಿಸುವ ಧೈರ್ಯವನ್ನು ತೋರುವ ಮತ್ತು ಸಮಾನತೆಯ ಹುಡುಕಾಟದಲ್ಲಿ ತಮ್ಮ ಆಯ್ಕೆಯನ್ನು ಚಲಾಯಿಸುವ ಮಹಿಳೆಯರ ಚಿತ್ರಣವನ್ನು ವಾಸ್ತವವಾಗಿ ಸ್ವಾಗತಿಸಬೇಕು. ಇದರ ಬದಲಾಗಿ ಸೆನ್ಸಾರ್ ಮಂಡಳಿ ಅದಕ್ಕೆ ಸಾರ್ವಜನಿಕ ವೀಕ್ಷಣೆಗೆ ಅರ್ಹವೆನ್ನುವ ಪ್ರಮಾಣ ಪತ್ರವನ್ನು ನಿರಾಕರಿಸಿರುವುದು ಸಂಘ ಪರಿವಾರದ ತತ್ವವನ್ನು ಬಿಂಬಿಸುತ್ತದೆ. ಏಕೆಂದರೆ ಮಹಿಳೆಯರು ಪುರುಷರಿಗೆ ಅಧೀನರಾಗಿರಬೇಕು, ಸಮಾಜದಲ್ಲಿ ಮಹಿಳೆಯರ ಪಾತ್ರ ಪೂರಕವಷ್ಟೇ ಎಂಬುದು ಅವರ ಪರಿಕಲ್ಪನೆ.

ಈ ನಿರಾಕರಣೆಯ ಮೂಲಕ ಸೆನ್ಸಾರ್ ಮಂಡಳಿ ಚಿತ್ರ ತಯಾರಕರ ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನು ಉಲ್ಲಂಘಿಸುತ್ತದೆ ಮಾತ್ರವಲ್ಲ, ಭಾರತೀಯ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಮತ್ತು ರಕ್ಷಿಸುವ ಹೆಸರಿನಲ್ಲಿ ಒಂದು ಪ್ರತಿಗಾಮಿ ಮಹಿಳಾ–ವಿರೋಧಿ ಪಾತ್ರವನ್ನು ವಹಿಸಿದೆ, ಇದು ಅಸಂವಿಧಾನಿಕ ಎಂದು ಎಐಡಿಡಬ್ಲ್ಯುಎ ಹೇಳಿದೆ.

ಸೆನ್ಸಾರ್ ಮಂಡಳಿ ತಕ್ಷಣವೇ ಈ ಚಿತ್ರಕ್ಕೆ ಸಾರ್ವಜನಿಕ ವೀಕ್ಷಣೆಯ ಪ್ರಮಾಣ ಪತ್ರವನ್ನು ನೀಡಲು ಕ್ರಮಗಳನ್ನು ಕೈಗೊಳ್ಳಬೇಕು, ಸೃಜನಾತ್ಮಕ ಚಿತ್ರ ತಯಾರಕರ ಹಕ್ಕುಗಳಿಗೆ ರಕ್ಷಣೆ ನೀಡಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ. ಕೇಂದ್ರೀಯ ಸೆನ್ಸಾರ್ ಮಂಡಳಿ ಸಂಘ ಪರಿವಾರದ ಸಿದ್ಧಾಂತವನ್ನು ಜಾರಿ ಮಾಡುವ, ಆಮೂಲಕ ಒಂದು ಪ್ರಜಾಪ್ರಭುತ್ವ ಚೌಕಟ್ಟಿನಲ್ಲಿ ಮಹಿಳೆಯರ ವಿಮೋಚನೆ ಮತ್ತು ಸಮಾನತೆಯ ಹಕ್ಕನ್ನು ಬುಡಮೇಲು ಮಾಡುವ ಸಂಸ್ಥೆಯಾಗಬಾರದು ಎಂದು ಎಐಡಿಡಬ್ಲ್ಯುಎ ಹೇಳಿದೆ.

ಕೊರಗ ವಸತಿ ಸಮುಚ್ಚಯ ನಿರ್ಮಾಣ ಕಾಮಗಾರಿ ಉದ್ಘಾಟನೆ:

2009 ರಲ್ಲಿ ಮಂಗಳೂರಿನ ನಂತೂರು ಎಂಬಲ್ಲಿ ರಾಷ್ಟ್ರೀಯ ಹೆದ್ದಾರಿ ಬಳಿಯಲ್ಲಿ ವಾಸವಾಗಿದ್ದ 8 ಕೊರಗ ಕುಟುಂಬಗಳನ್ನು ಹೆದ್ದಾರಿ ವಿಸ್ತರಣೆಗಾಗಿ ಒಕ್ಕಲೆಬ್ಬಿಸಿ ನಿರ್ವಸಿತಗೊಳಿಸಲಾಗಿತ್ತು. ಇದನ್ನು ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಮತ್ತು ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಪ್ರತಿಭಟಿಸಿ, ಸಂತ್ರಸ್ತ ಆದಿವಾಸಿ ಕೊರಗ ಕುಟುಂಬಗಳಿಗೆ ಮನೆ ನಿವೇಶನ ಹಾಗೂ ಮನೆ ಒದಗಿಸುವವರೆಗೆ ಹೋರಾಟ ಮುನ್ನಡೆಸುವುದಾಗಿ ಜಿಲ್ಲಾಡಳಿತ, ಮಂಗಳೂರು ಮಹಾನಗರ ಪಾಲಿಕೆ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಎಚ್ಚರಿಸಲಾಗಿತ್ತು. ಜಿಲ್ಲಾಧಿಕಾರಿ ಕಚೇರಿ ಮತ್ತು ಪಾಲಿಕೆ ಕಚೇರಿ ಮುಂದೆ ಈ ಎಂಟೂ ವರ್ಷಗಳಲ್ಲಿ ಹಲವು ಪ್ರತಿಭಟನೆ, ಧರಣಿಗಳನ್ನು ನಡೆಸಲಾಗಿತ್ತು. ಇದರ ಪರಿಣಾಮವಾಗಿ ಮಧ್ಯಾವಧಿಯಲ್ಲಿ ಈ ಕುಟುಂಬಗಳು ವಾಸಿಸಿದ್ದ ಮನೆಗಳಿಗೆ ಬಾಡಿಗೆ ಒದಗಿಸುವುದು ಸಾಧ್ಯವಾಯಿತು. ಈಗ ಮಹಾನಗರ ಪಾಲಿಕೆಯಿಂದ ನಿವೇಶನ ಹಾಗೂ ಮನೆ ಮಂಜೂರಾಗಿದ್ದು, ನಿವೇಶನ ಗುರುತಿಸಿ ಕೊಡಿಸಲು ಹೋರಾಟ ಮಾಡಬೇಕಾಗಿ ಬಂದಿತ್ತು.

ಮಂಗಳೂರು ಕುಲಶೇಖರ ಕೋಟಿಮುರ ಎಂಬಲ್ಲಿ ಗುರುತಿಸಿಕೊಟ್ಟ ಜಾಗವನ್ನು ಸಮತಟ್ಟು ಮಾಡಿ ಪಾಲಿಕೆ ಒದಗಿಸಿದ ಮೇರೆಗೆ, ಫೆಬ್ರವರಿ 26 ರಂದು ಆದಿವಾಸಿ ಹಕ್ಕುಗಳ ವತಿಯಿಂದ ಕೋಟಿಮುರದಲ್ಲಿ ಕೊರಗ ವಸತಿ ಸಮುಚ್ಚಯ ನಿರ್ಮಾಣ ಕಾಮಗಾರಿ ಉದ್ಘಾಟನಾ ಸಮಾರಂಭ ಏರ್ಪಡಿಸಲಾಗಿತ್ತು. ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಹಾಗೂ ದಲಿತ ಹಿತೈಷಿ ರಾಯ್ ಕಾಸ್ಟೆಲಿನೋ ಅವರು ಕಾಮಗಾರಿ ಪರಿಕರಗಳನ್ನು ಕಾಮಗಾರಿ ಉಸ್ತುವಾರಿ ನಡೆಸಲಿರುವ ತಮ್ಮಯ್ಯ ಕೊಂಚಾಡಿ, ಪ್ರೇಮನಾಥ ಜಲ್ಲಿಗುಡ್ಡೆ, ಉಮಾಶಂಕರ್ ಬೋಳೂರು, ಕಿಶೋರ್ ಪೊರ್ಕೋಡಿ ಇವರಿಗೆ ಹಸ್ತಾಂತರಿಸುವ ಮೂಲಕ ಕಾಮಗಾರಿಯನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಮುಖಂಡರಾದ ಎಸ್. ವೈ.ಗುರುಶಾಂತ್, ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ, ಮಂಗಳೂರು ನಗರ ಉತ್ತರ ಕಾರ್ಯದರ್ಶಿ ಕೃಷ್ಣಪ್ಪ ಕೊಂಚಾಡಿ, ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ದಲಿತ ಹಕ್ಕುಗಳ ಸಮಿತಿ ಜಿಲ್ಲಾ ಸಂಚಾಲಕ ಲಿಂಗಪ್ಪ ನಂತೂರು ಮಾತನಾಡಿದರು. ಸಾಮಾಜಿಕ ಕಾರ್ಯಕರ್ತ ಸೀತಾರಾಮ ಎಸ್.ಕೋಡಿಕಲ್, ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ನಗರ ಅಧ್ಯಕ್ಷ ಶಾಂತ ನಾಯ್ಕ್, ಕಾರ್ಯದರ್ಶಿ ಶಶಿಕಲಾ ನಂತೂರು ವೇದಿಕೆಯಲ್ಲಿದ್ದರು. ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಜಯಕುಮಾರ್ ಸ್ವಾಗತಿಸಿದರು. ಸಂತೋಷ್ ಶಕ್ತಿನಗರ ವಂದಿಸಿದರು.

ಮಹಾನಗರ ಪಾಲಿಕೆಯಿಂದ ಮನೆ ನಿರ್ಮಾಣಕ್ಕೆ ತಲಾ ವೆಚ್ಚ ರೂ.2 ಲಕ್ಷ ಮಂಜೂರಾಗಿದ್ದರೂ, ರಾಯ್ ಕಾಸ್ಟೆಲಿನೋ, ಸೀತಾರಾಮ್ ಕೋಡಿಕಲ್ ಮೊದಲಾದ ದಾನಿಗಳ ಸಹಾಯದಿಂದ ಸರ್ಕಾರಿ ಯೋಜನೆಗಳಿಗಿಂತ ಗುಣಮಟ್ಟದ ವಸತಿಗಳನ್ನು 8 ಕೊರಗ ಕುಟುಂಬಗಳಿಗೆ ಕಟ್ಟಿಸಿಕೊಡಲು ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ತೀರ್ಮಾನಿಸಿದೆ.

ವರದಿ: ವಾಸುದೇವ ಉಚ್ಚಿಲ

ಬೆಳ್ಮದಲ್ಲಿ ನಿವೇಶನ ರಹಿತರ ಅನಿರ್ದಿಷ್ಟಾವಧಿ ಧರಣಿ:

ಉಳ್ಳಾಲ ಪ್ರದೇಶದ ಬೆಳ್ಮ ಗ್ರಾಮ ಪಂಚಾಯತಿಯಲ್ಲಿ ಸುಮಾರು 400ಕ್ಕೂ ಹೆಚ್ಚು ನಿವೇಶನ ರಹಿತರು ನಿವೇಶನಕ್ಕಾಗಿ ಅರ್ಜಿ ನೀಡಿದ್ದರೂ, ಯಾವ ಭರವಸೆಯೂ ಸಿಕ್ಕಿರಲಿಲ್ಲ. ಫೆಬ್ರವರಿ 27ರಂದು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ದಲಿತ ಹಕ್ಕುಗಳ ಸಮಿತಿ ನೇತೃತ್ವದಲ್ಲಿ ನಿವೇಶನ ರಹಿತರು ಗ್ರಾಮ ಪಂಚಾಯತಿ ಎದುರು ಅನಿರ್ದಿಷ್ಟಾವಧಿ ಧರಣಿ ಪ್ರಾರಂಭಿಸಿದರು.

ನಿವೇಶನ ರಹಿತರಿಗೆ ನಿವೇಶ, ಸರಕಾರಿ ಜಾಗದಲ್ಲಿ ವಾಸ ಇದ್ದವರಿಗೆ ಹಕ್ಕುಪತ್ರ, ಡಿ.ಸಿ.ಮನ್ನಾ ಜಾಗದ ಪತ್ತೆ ಇತ್ಯಾದಿ ಬೇಡಿಕೆ ಈಡೇರಿಸುವಂತೆ ಆಗ್ರಹಿಸಲಾಯಿತು. ಪ್ರಾಂತ ರೈತ ಸಂಘದ ಉಳ್ಳಾಲ ವಲಯ ಕಾರ್ಯದರ್ಶಿ ಜಯಂತ ಅಂಬ್ಲಮೊಗರು, ದಲಿತ ಹಕ್ಕುಗಳ ಸಮಿತಿಯ ಜಿಲ್ಲಾ ಸಂಚಾಲಕ ಲಿಂಗಪ್ಪ ನಂತೂರು, ಉಳ್ಳಾಲ ವಲಯ ಅ ಧ್ಯಕ್ಷ ನಾರಾಯಣ ತಲಪಾಡಿ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.



ಕಾಂ. ಎಸ್.ವರಲಕ್ಷ್ಮಿ ಯವರಿಗೆ "ಶಕ್ತಿಶ್ರೀ" ಪ್ರಶಸ್ತಿ ಪ್ರಧಾನ

ನಿಡುಮಾಮಿಡಿ ಮಹಾಸಂಸ್ಥಾನಮಠ ಹಾಗೂ ಮಾನವ ಧರ್ಮಪೀಠ ದ ವತಿಯಿಂದ ಮಹಿಳಾ ದಿನಾಚರಣೆ ಮತ್ತು "ಶಕ್ತಿಶ್ರೀ" ಪ್ರಶಸ್ತಿ ಪ್ರಧಾನ ಸಮಾರಂಭ, ಇದೇ ಮಾರ್ಚ್ 8 ರಂದು ನಿಡುಮಾಮಿಡಿ ಮಠದಲ್ಲಿ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಶ್ರೀ ವೀರಭದ್ರ ಚನ್ನಮಲ್ಲ ಸ್ವಾಮೀಜಿ, ಸಂಸ್ಕೃತಿ ಚಿಂತಕರಾದ ಡಾ.ಕೆ ಮರುಳಸಿದ್ದಪ್ಪ ಅಧ್ಯಕ್ಷತೆ ವಹಿಸಲಿದ್ದು, ಕರ್ನಾಟಕ ಪೋಲೀಸ್ ಅಕಾಡೆಮಿ ಉಪನಿರ್ದೇಶಕರಾದ ಡಾ. ಧರಣಿದೇವಿ ಮಾಲಗತ್ತಿ ಉದ್ಘಾಟಿಸಲಿದ್ದಾರೆ.

CITU ರಾಜ್ಯಾಧ್ಯಕ್ಷರಾದ ಕಾಂ. ಎಸ್.ವರಲಕ್ಷ್ಮಿ ಯವರಿಗೆ ಅಭಿನಂದನೆಗಳು.

RTE ಶುಲ್ಕ ಹೆಚ್ಚಳಕ್ಕೆ SFI ವಿರೋಧ

ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುದಾನ ರಹಿತ ಶಾಲೆಗಳಲ್ಲಿ ಪ್ರವೇಶ ಪಡೆಯುವ ಖಖಇ ಮಕ್ಕಳ ಶುಲ್ಕವನ್ನು 16,000ರೂ ಗಳಿಗೆ ಹೆಚ್ಚಳ ಮಾಡಿರುವುದನ್ನು ಭಾರತ ವಿದ್ಯಾರ್ಥಿ ಫೇಡರೇಷನ್ (SFI) ಕರ್ನಾಟಕ ರಾಜ್ಯ ಸಮಿತಿಯು ಸರಕಾರದ ನಡೆಯನ್ನು ವಿರೋಧಿಸುತ್ತದೆ.

ಈ ಮೊದಲು RTE ಮಕ್ಕಳಿಗೆ ಕರ್ನಾಟಕ ರಾಜ್ಯ ಸರಕಾರ 11,848ರೂ ನೀಡಲಾಗುತ್ತಿತ್ತು. ಇದೆ ಹೆಚ್ಚು ಹಣ ವಾಗುತ್ತದೆ ಎಂದು SFI ಆರೋಪಿಸುತ್ತಾ ಬಂದಿತ್ತು. ಆದರೆ ಖಾಸಗಿ ಶಿಕ್ಷಣ ಸಂಸ್ಥೆಗಳ ತಾಳಕ್ಕೆ ಕುಣಿಯುತ್ತಿರುವ ರಾಜ್ಯ ಸರಕಾರ 4152 ರೂ. ಹೆಚ್ಚಳ ಮಾಡುವ ಮೂಲಕ 16,000ರೂ. ನಿಗದಿ ಮಾಡಿವೆ. ಕೆಲ ಖಾಸಗಿ ಶಿಕ್ಷಣ ಸಂಸ್ಥೆಗಳು ಇದಕ್ಕಿಂದ ಕಡಿಮೆ ಶುಲ್ಕ ಪಡೆಯುತ್ತಿದ್ದವು. ಸರಕಾರದ ಈ ನಡೆಯಿಂದ ರೆಕ್ಕೆ ಬಿಚ್ಚಿದ ಹಕ್ಕಿಗಳದಾಂತಾಗಿವೆ. ಸರಕಾರವೇ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪೋಷಕನಂತೆ ನಿಂತಿರುವುದು ಖಂಡನೀಯ.

ಪಶ್ಚಿಮ ಬಂಗಾಳದ ಸರಕಾರ 3282 ರೂ, ಮದ್ಯಪ್ರದೇಶ 4423 ರೂ, ಬಿಹಾರ 4705 ರೂ, ಗುಜರಾತ 3949, ಕೇರಳ ಮತ್ತು ತಮಿಳುನಾಡಿನಲ್ಲಿ 2 ಸಾವಿರ ರೂ ಗಿಂತ ಕಡಿಮೆ ಹಣವನ್ನು RTE ಮಕ್ಕಳಿಗೆ ನೀಡಲಾಗುತ್ತಿದೆ. ಆದರೆ ಕರ್ನಾಟಕ ರಾಜ್ಯ ಸರಕಾರ ಮಾತ್ರ ಅತೀ ಹೆಚ್ಚು ಹಣವನ್ನು ನೀಡುವ ಮೂಲಕ ಖಾಸಗಿ ಶಾಲೆಗಳ ಕೈಗೊಂಬೆಯಾಗಿದೆ.

ಕೂಡಲೆ ಈ ಶುಲ್ಕವನ್ನು ಇಳಿಸದಿದ್ದಲ್ಲಿ SFI ನಿಂದ ರಾಜ್ಯವ್ಯಾಪಿ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಲಾಗಿದೆ.



EPCL ಕೆಮಿಕಲ್ ಡಾಂಬರು ಕಾರ್ಖಾನೆಯನ್ನು ಸ್ಥಗಿತಗೊಳಿಸಿ, ವರ್ಗಾಹಿಸಲು ಒತ್ತಾಯಿಸಿ, ಗಾಯಗೊಂಡ ಕಾರ್ಮಿಕರಿಗೆ ಸೂಕ್ತ ಪರಿಹಾರಕ್ಕೆ ಆಗ್ರಹಿಸಿ #CITU ಬಳ್ಳಾರಿ ಜಿಲ್ಲಾ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು. #CPIM ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಭಾಗವಹಿಸಿದ್ದರು.

JNU ಕುಲಪತಿ ಆಗಮನಕ್ಕೆ SFI ವಿರೋಧ



ದೆಹಲಿಯ JNU ವಿದ್ಯಾರ್ಥಿಗಳ ಹೋರಾಟವನ್ನು ಹತ್ತಿಕ್ಕಿದ ವಿದ್ಯಾರ್ಥಿ ಚಳವಳಿಯ ವಿರೋಧಿಯೂ, ದಲಿತ ವಿರೋಧಿ, ನಜೀಬರನ್ನು ಪತ್ತೆಹಚ್ಚುವಲ್ಲಿ ನಿರ್ಲಕ್ಷ ತೆ- ೂರಿದ ವ್ಯಕ್ತಿ, ಪ್ರಗತಿಪರ ವಿಚಾರಗಳ ವಿರೋಧಿಯಾದ JNU ಕುಲಪತಿ ಡಾ.ಎಂ. ಜಗದೀಶ ಕುಮಾರ ಅವರನ್ನು ಕರ್ನಾಟಕ ವಿವಿಯ 67 ಘಟಿಕೋತ್ಸವಕ್ಕೆ ಆಹ್ವಾನಿಸಲಾಗಿದೆ. ಒಂದು ಮೂಲಭೂತವಾದಿ ವಿದ್ಯಾರ್ಥಿ ಸಂಘಟನೆ ಹಾಗು ಪಕ್ಷದ ಏಜೆಂಟ್ ರಂತೆ ವರ್ತಿಸುವ ಜಗದೇಶಕುಮಾರ ಆಗಮನವನ್ನು SFI ವಿರೋಧಿಸಿದೆ.

ಧಾರವಾಡ ಘಟಿಕೋತ್ಸವ ಕಾರ್ಯಕ್ರಮಕ್ಕೆ JNU VC ಡಾ। ಜಗದೀಶ ಕುಮಾರ್ ಆಗಮನಕ್ಕೆ SFI, AIDSO, KPRS ಮತ್ತು ಇತ- ರೆ ಪ್ರಗತಿಪರ ಸಂಘಟನೆಗಳು ಹಾಗೂ ಪ್ರಗತಿಪರ ಸಾಹಿತಿಗಳು ವಿರೋಧ ವ್ಯಕ್ತ ಪಡಿಸಿದ ಹಿನ್ನೆಲೆಯಲ್ಲಿ ಘಟಿಕೋತ್ಸವವನ್ನು ಮುಂದೂಡಲಾಗಿದೆ. ಇದು ಹೋರಾಟಕ್ಕೆ ಸಿಕ್ಕ ಮೊದಲ ಜಯವಾಗಿದೆ.

ಮಾರ್ಚ್ 6 ರಂದು ಪಂಚಾಯತ್ ನೌಕರರ ಪ್ರತಿಭಟನೆ

ಗ್ರಾಮ ಪಂಚಾಯಿತಿ ನೌಕರರಿಗೆ 6 ತಿಂಗಳು, ವರ್ಷಗಟ್ಟಲೇ ಸಂಬಳ ಸಿಗದೇ ಇರುವುದರ ಬಗ್ಗೆ ಹಾಗೂ ಸರ್ಕಾರ ನಿಗದಿಪಡಿಸಿರುವ ಕನಿಷ್ಠ ವೇತನ ಜಾರಿಯಾಗದೇ ಇರುವುದರ ಬಗ್ಗೆ ಗ್ರಾಮ ಪಂಚಾಯತ ನೌಕರರ ಸಂಘ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಒತ್ತಾಯಿಸಿದೆ.

ರಾಜ್ಯದ 6022 ಗ್ರಾಮ ಪಂಚಾಯಿತಿಯಲ್ಲಿ ಸುಮಾರು 50 ಸಾವಿರ ಜನ ನೌಕರರು ದುಡಿಯುತ್ತಿದ್ದಾರೆ, 12000 ಜನ ಕಸ ಗುಡಿಸುವವರು, 26000 ಜನ ಪಂಪ್ ಆಪರೇಟರ್‌ಗಳು, 6000 ಜನ ಬಿಲ್ ಕಲೆಕ್ಟರ್‌ಗಳು, 6000 ಜನ ಜವಾನರು, 5000 ಕಂಪ್ಯೂಟರ್ ಆಪರೇಟರ್‌ಗಳು ಕೆಲಸ ನಿರ್ವಹಿಸುತ್ತಿದ್ದಾರೆ. ಗ್ರಾಮ ಪಂಚಾಯಿತಿ ಸಿಬ್ಬಂದಿಯಲ್ಲಿ ಕಳೆದ 1 ವರ್ಷದಿಂದ ಸಂಬಳ ಸಿಕ್ಕಿಲ್ಲ. ದಿನಾಂಕ: 04.08.2016ರಂದು ಕಾರ್ಮಿಕ ಇಲಾಖೆ ಕನಿಷ್ಠ ವೇತನ ನಿಗದಿಪಡಿಸಿ ಆದೇಶ ಹೊರಡಿಸಿದೆ. ಆದರೆ ಕನಿಷ್ಠ ವೇತನವನ್ನು ಜಾರಿ ಮಾಡಲು ಸಾಧ್ಯವಾಗುತ್ತಿಲ್ಲ.

3ನೇ ಹಣಕಾಸು ಆಯೋಗವು ಕನಿಷ್ಠ ವೇತನಕ್ಕೆ ಬೇಕಾಗುವ ಹಣವನ್ನು ಸರ್ಕಾರವೇ ಭರಿಸಬೇಕೆಂದು ಶಿಫಾರಸ್ಸು ಮಾಡಿದೆ. ಈಗಾಗಲೆ 2ನೇ ಹಣಕಾಸು ಆಯೋಗ ಶಿಫಾರಸ್ಸಿನಂತೆ ನಗರಾಭಿವೃದ್ಧಿ ಇಲಾಖೆಯಲ್ಲಿ ವೇತನಕ್ಕೆ ಬೇಕಾಗುವ ಅನುಧಾನವನ್ನು ಸರ್ಕಾರವೇ ಭರಿಸುತ್ತಿದೆ.

ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ವೇತನಕ್ಕೆ ಬೇಕಾಗುವ ಅನುಧಾನ ಪೂರ್ತಿಯಾಗಿ ನೀಡಲಾಗುತ್ತಿಲ್ಲ. ಇತ್ತೀಚೆಗೆ ಪುರಸಭೆ ಪಟ್ಟಣ ಪಂಚಾಯಿತಿಗಳಿರುವ, ಬಿಬಿಎಂಪಿ ಮತ್ತು ಮಹಾನಗರ ಪಾಲಿಕೆಗಳಲ್ಲಿ ಸಿಬ್ಬಂದಿಗಳಿಗೆ ಶೇಕಡಾ 75 ರಷ್ಟು ವೇತನವನ್ನು ಸರ್ಕಾರವೇ ನೀಡಲು ತಮ್ಮ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ತೀರ್ಮಾನಿಸಲಾಗಿದೆ.

ನಗರ ಸ್ಥಳೀಯ ಸಂಸ್ಥೆಗಳಿಗಿಂತಲು ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಆದಾಯ ಕಡಿಮೆ ಇದ್ದು ಹಣಕಾಸು ಬಿಕ್ಕಟ್ಟು ಎದುರಿಸುತ್ತಿರುವಾಗ, ಗ್ರಾಮೀಣ ಸ್ಥಳೀಯ ಸಂಸ್ಥೆಗಳು 3ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಹಣ ಬಿಡುಗಡೆ ಮಾಡಬೇಕೆಂದು ಮುಖ್ಯಮಂತ್ರಿಗಳನ್ನು ಕೋರಿದೆ. ಕಸ ಗುಡಿಸುವವರು, ನೀರು ಬಿಡುವವರು, ಜವಾನರು ತುಳಿತಕ್ಕೊಳಪಟ್ಟ ಜನಸಮುದಾಯವಾಗಿದೆ. ಉತ್ತಮ ಬದುಕು ನಿರ್ವಹಿಸಲು ವೇತನ ಭದ್ರತೆ ನೀಡಬೇಕೆಂದು ಕೋರಲಾಗಿದೆ.

ಮಾರ್ಚ್ ತಿಂಗಳಲ್ಲಿ ರಾಜ್ಯದ ಬಜೆಟ್ ಮಂಡಿಸಲಾಗುತ್ತಿದೆ. ಗ್ರಾಮ ಪಂಚಾಯತ್ ನೌಕರರ ವೇತನಕ್ಕಾಗಿ ಪ್ರತ್ಯೇಕ ಅನುದಾನ ಬಿಡುಗಡೆ ಮಾಡಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಲು ಮಾರ್ಚ್ 6 ರಂದು ಬೆಂಗಳೂರಿನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಮಸಣ ಕಾರ್ಮಿಕರ ಪ್ಯಾಕೇಜ್ ಘೋಷಿಸಲು ಒತ್ತಾಯ

2017–18ರ ರಾಜ್ಯ ಬಜೆಟ್‌ನಲ್ಲಿ, ಮಸಣ ಕಾರ್ಮಿಕರನ್ನು ಸ್ಥಳೀಯ ಸಂಸ್ಥೆಗಳ ನೌಕರರನ್ನಾಗಿಸಲು ಹಾಗೂ ಮತ್ತಿತರೇ ನೆರವಿಗಾಗಿ ಮಸಣ ಕಾರ್ಮಿಕರ ಪ್ಯಾಕೇಜ್ ಘೋಷಿಸಲು ಕರ್ನಾಟಕ ರಾಜ್ಯ ಮಸಣ ಕಾರ್ಮಿಕರ ಸಂಘದ ಬಳ್ಳಾರಿ ಜಿಲ್ಲಾ ಘಟಕ, , ಬಳ್ಳಾರಿ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ ಒತ್ತಾಯಿಸಿದೆ.

ಸಾವಿರಾರು ವರ್ಷಗಳಿಂದ ಪಾರಂಪರಿಕವಾಗಿ ಸಾರ್ವಜನಿಕ ಮಸಣಗಳಲ್ಲಿ ಕೆಲಸದಲ್ಲಿ ತೊಡಗಿಸಿಕೊಂಡ ಬಹುತೇಕ ದಲಿತ ಜನವಿಭಾಗಕ್ಕೆ ಸೇರಿದ ರಾಜ್ಯದ ಸುಮಾರು 25 ಸಾವಿರಕ್ಕೂ ಅಧಿಕ ಮಸಣಗಳಲ್ಲಿ ಕಾರ್ಯ ನಿರ್ವಹಿಸುವ ಕುಟುಂಬಗಳ ಸಂಖ್ಯೆ ಸುಮಾರು 10–15 ಲಕ್ಷ ಸಂಖ್ಯೆಯಲ್ಲಿದೆ. ಅವರ ಪ್ರತಿದಿನದ ತಲಾ ಆಧಾಯ ಬಹುತೇಕ 10ರೂಗಳಿಗಿಂತಲೂ ಕಡಿಮೆಯಾಗಿದೆ. ಎಲ್ಲರಂತೆ ಜಾತಿ ದೌರ್ಜನ್ಯಕ್ಕೆ ಮತ್ತು ಅಸ್ಪೃಶ್ಯಾಚರಣೆಗೆ ತುತ್ತಾಗಿದ್ದಾರೆ. ಅವರ ಸಂಕಷ್ಟಗಳನ್ನು ಪರಿಹರಿಸಲು ಕನಿಷ್ಠ ಊರಿಗೊಬ್ಬರಂತೆ ಗ್ರಾಮ ಪಂಚಾಯ್ತಿ ಅಥವಾ ನಗರ ಮತ್ತು ಪಟ್ಟಣಗಳ ಸ್ಥಳೀಯ ಸಂಸ್ಥೆಗಳ ನೌಕರರೆಂದು ನೇಮಿಸಿಕೊಳ್ಳಲು ಮತ್ತು ಕುಣಿ ಅಗೆಯುವ ಕೆಲಸವನ್ನು ಉದ್ಯೋಗ ಖಾತ್ರಿ ಕೆಲಸವೆಂದು ಪರಿಗಣಿಸಿ ವೇತನ ನೀಡಲು ಮತ್ತು ಇತರೇ ಹಕ್ಕೊತ್ತಾಯಗಳನ್ನು 2017–18ರ ಬಜೆಟ್‌ನಲ್ಲಿ ಪರಿಹರಿಸಬೇಕೆಂದು ಸಂಘ ಒತ್ತಾಯಿಸಿದೆ.

ಮಸಣ ಕಾರ್ಮಿಕರಿಗೆ ಮಸಣದಲ್ಲಿ ಕಾರ್ಯನಿರ್ವಹಿಸಲು ಅಗತ್ಯ ಸುರಕ್ಷತಾ ಕ್ರಮಗಳನ್ನು ಮತ್ತು ಅಗತ್ಯ ಪರಿಕರಗಳನ್ನು ಸ್ಥಳೀಯ ಸಂಸ್ಥೆಗಳ ಮೂಲಕ ಒದಗಿಸಬೇಕು. ಎಲ್ಲಾ ಮಸಣಗಳನ್ನು ಜನಸ್ನೇಹಿ ನಂದನವನಗಳನ್ನಾಗಿಸಲು ಸೂಕ್ತ ಯೋಜನೆಯನ್ನು ರೂಪಿಸಿ ಜಾರಿಗೊಳಿಸಬೇಕು. ಮಸಣ ಕಾರ್ಮಿಕರಿಗೆ ಭವಿಷ್ಯನಿಧಿ, ಜೀವವಿಮೆ, ಉಚಿತ ಆರೋಗ್ಯ ಸೇವೆಗೆ ಆರೋಗ್ಯ ಕಾರ್ಡ, ಪಿಂಚಣಿ ಮುಂತಾದ ವ್ಯವಸ್ಥೆಗಳನ್ನು ಜಾರಿಗೊಳಿಸಬೇಕೆಂದೂ ಸಂಘ ಒತ್ತಾಯಿಸಿದೆ.



ನೋಟು ನಿಷೇಧದಿಂದ ಗ್ರಾಮೀಣ ಆರ್ಥಿಕತೆ ನಿರ್ನಾಮಃ ವಿ.ಶ್ರೀಧರ್

ಕೇಂದ್ರ ಸರಕಾರದ ನೋಟು ನಿಷೇಧ ಕ್ರಮವು ದೇಶವು ಗ್ರಾಮೀಣ ಭಾಗದ ಆರ್ಥಿಕತೆಯನ್ನು ನಿರ್ನಾಮ ಮಾಡುವ ಮೂಲಕ ಬಂಡವಾಳಶಾಹಿಗಳು ತಮ್ಮ ಪ್ರಾಬಲ್ಯವನ್ನು ಮತ್ತಷ್ಟು ವಿಸ್ತರಿಸಿಕೊಳ್ಳಲು ಸಾಧ್ಯಮಾಡಿ ಕೊಟ್ಟಿದೆ ಎಂದು ಫ್ರಂಟ್ ಲೈನ್ ಪತ್ರಿಕೆಯ ಹಿರಿಯ ಉಪ ಸಂಪಾದಕ ವಿ. ಶ್ರೀಧರ್ ಅಭಿಪ್ರಾಯಿಸಿದ್ದಾರೆ.

28 ಫೆಬ್ರವರಿ 2017 ರಂದು ನಗರದ ಎಸ್‌ಸಿಎಂ ಸಭಾಂಗಣದಲ್ಲಿ ಅಖಿಲ ಭಾರತ ಕೃಷಿ ಕೂಲಿ ಕಾರ್ಮಿಕರ ಸಂಘಟನೆ ಆಯೋಜಿಸಿದ್ದ 'ಬರ ಬಾಧಿತ ಬಡವರಿಗೆ ನೋಟು ನಿಷೇಧದ ಬರೆ' ವಿಷಯ ಕುರಿತು ಮಾತನಾಡಿದ ಅವರು, ಬಡವರಲ್ಲಿದ್ದ ಚೂರು ಪಾರು ಹಣಕಾಸನ್ನು ಕಿತ್ತು ಬಂಡವಾಳಶಾಹಿಗಳ ಕೈಗಿಡುವ ದುರುದ್ದೇಶದಿಂದ ಕೇಂದ್ರ ಸರಕಾರ 500 ಹಾಗೂ 1000 ರೂ. ಮುಖ ಬೆಲೆಯ ನೋಟುಗಳನ್ನು ನಿಷೇಧಿಸಿತು ಎಂದು ಆಪಾದಿಸಿದರು.

ಸಾವಿರಾರು ವರ್ಷಗಳಿಂದಲೂ ಗ್ರಾಮೀಣ ಭಾಗದ ಜನತೆ ತಮ್ಮದೇ ರೀತಿಯಲ್ಲಿ ಆರ್ಥಿಕ ವ್ಯವಸ್ಥೆಯನ್ನು ರೂಢಿಸಿಕೊಂಡಿದ್ದರು ತಮ್ಮ ದುಡಿಮೆಯ ಸ್ವಲ್ಪ ಭಾಗವನ್ನು ಭವಿಷ್ಯದ ಕಷ್ಟಗಳಿಗಾಗಿ ಕೂಡಿಡುವ ಮೂಲಕ ಸ್ವಾಭಿಮಾನದ ಬದುಕನ್ನು ನಡೆಸುತ್ತಿದ್ದರು. ಆದರೆ, ಕೇಂದ್ರ ಸರಕಾರ ದಿಢೀರನೆ ನೋಟ ನಿಷೇಧವನ್ನು ಜಾರಿ ಮಾಡುವ ಮೂಲಕ ಗ್ರಾಮೀಣ ಜನತೆ ಕೂಡಿಟ್ಟಿದ್ದ ಹಣವನ್ನು ಕೂಡಲೇ ಬ್ಯಾಂಕ್‌ಗೆ ಹಾಕಬೇಕು. ಇಲ್ಲದಿದ್ದರೆ ಆ ಹಣವು ಅಮಾನ್ಯಗೊಳ್ಳತ್ತದೆ ಎಂದು ಆದೇಶಿಸಿತು. ಇಂತಹ ಆದೇಶದ ಮೂಲಕ ಕೇಂದ್ರ ಸರಕಾರ ತನ್ನ ಬಡವರ ವಿರೋಧಿ ನೀತಿಯನ್ನು ಬಹಿರಂಗವಾಗಿ ಪ್ರದರ್ಶಿಸಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ದೇಶದಲ್ಲಿ ಶೇ.85 ಕ್ಕಿಂತ ಹೆಚ್ಚು ಚಲಾವಣೆಯಲ್ಲಿದ್ದ 500 ಹಾಗೂ 1000ರೂ. ಮುಖ ಬೆಲೆಯ ನೋಟಗಳನ್ನು ಏಕಾಏಕಿ ನಿಷೇಧಿಸಿತು. ಇದರಿಂದ ದೇಶದ ಕೆಲವು ಉದ್ಯಮಿಗಳನ್ನು ಹೊರತು ಪಡಿಸಿದರೆ ಕಾರ್ಮಿಕರು, ರೈತರು, ಕೂಲಿ ಕಾರ್ಮಿಕರು ದಿನ ನಿತ್ಯದ ಬದುಕು ಯಾತನಮಯವಾಗಿದೆ. ಕೂಲಿ ಕಾರ್ಮಿಕರು ತಮ್ಮ ಕೆಲಸಗಳನ್ನು ಕಳೆದುಕೊಂಡರೆ, ರೈತರು ಲಕ್ಷಾಂತರ ರೂ.ಸಾಲ ಮಾಡಿ ಬೆಳೆದ ಬೆಳೆಗಳಿಗೆ ನಯಾಪೈಸೆಯ ಬೆಲೆ ಇಲ್ಲವಾಯಿತು. ಇಂತಹ ಸಂದರ್ಭಗಳನ್ನು ನೋಡಿಯೂ ಕೇಂದ್ರ ಸರಕಾರ ನೋಟು ನಿಷೇಧದ ತನ್ನ ನಿರ್ಧಾರವನ್ನು ಸಮರ್ಥಿಸಿಕೊಳ್ಳುವ ಕೀಳುಮಟ್ಟಕ್ಕಿಳಿಯಿತು ಎಂದು ಅವರು ಆಶ್ಚರ್ಯವ್ಯಕ್ತಪಡಿಸಿದರು.

ಕೇಂದ್ರ ಸರಕಾರ ದೇಶದ ಇಡೀ ಆರ್ಥಿಕ ವ್ಯವಸ್ಥೆಯನ್ನು ಡಿಜಿಟಲೀಕರಣ ಮಾಡಲು ಹೊರಟಿದೆ. ದೇಶದ ಬಹುತೇಕ ಭಾಗಗಳಲ್ಲಿ ಬ್ಯಾಂಕ್‌ಗಳಿಲ್ಲ, ಬ್ಯಾಂಕ್ ಅಕೌಂಟ್ ಇಲ್ಲ ಹಾಗೂ ಡಿಜಿಟಲೀಕರಣಕ್ಕೆ ಹೊಂದಿಕೊಳ್ಳುವಂತ ಸಾಮಾಜಿಕ, ಆರ್ಥಿಕ ಸ್ಥಿತಿ ದೇಶದ ಜನಕ್ಕಿಲ್ಲ. ಇದ್ಯಾವುದರ ಬಗೆಗೂ ಕಿಂಚಿತ್ತೂ ಯೋಚಿಸದೆ ಏಕಾಏಕಿ ನೋಟುಗಳನ್ನು ನಿಷೇಧಿಸಲು ಹೊರಟಿರುವುದು ಮೂರ್ಖತನದ ಪರಮಾವಧಿ ಎಂದು ಅವರು ಲೇವಡಿ ಮಾಡಿದರು.

ಅಖಿಲ ಭಾರತ ಕೃಷಿ ಕೂಲಿ ಕಾರ್ಮಿಕರ ಸಂಘಟನೆಯ ಕಾರ್ಯದರ್ಶಿ ವಿಜಯ ರಾಘವನ್ ಮಾತನಾಡಿ, ರೈತರು ತಾವು ಬೆಳೆದ ಬೆಳಗಳಿಗೆ ಸೂಕ್ತ ಬೆಲೆಯಿಲ್ಲದೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ದೇಶದ ಹಲವು ಪ್ರದೇಶಗಳು ಬರಗಾಲಕ್ಕೆ ತುತ್ತಾಗಿ ತುತ್ತು ಅನ್ನಕ್ಕೂ ಹಾಹಾಕಾರ ಎದ್ದಿದೆ. ಇಂತಹ ಹೊತ್ತಲ್ಲಿ ಶೇ.85 ರಷ್ಟು ಚಲಾವಣೆಯಲ್ಲಿದ್ದದ ನೋಟುಗಳನ್ನು ನಿಷೇಧಿಸುವ ಮೂಲಕ ಕೇಂದ್ರ ಸರಕಾರ ಅತ್ಯಂತ ಕ್ರೂರ ನೀತಿಯನ್ನು ಅನುಸರಿಸುತ್ತದೆ ಎಂದು ಅಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಅಖಿಲ ಭಾರತ ಕೃಷಿ ಕೂಲಿ ಕಾರ್ಮಿಕರ ಸಂಘಟನೆಯ ರಾಜ್ಯಾ ಧ್ಯಕ್ಷ ನಿತ್ಯಾನಂದಸ್ವಾಮಿ, ಸಿಪಿಐ(ಎಂ) ಮುಖಂಡ ಉಮೇಶ್ ಜಿ.ಎನ್.ನಾಗರಾಜ್ ಮತ್ತಿತರರಿದ್ದರು.



ಸಹೋದರ ಮುರುಳಿ ಕುಟುಂಬಕ್ಕೆ ನ್ಯಾಯ ಸಿಗಲೆಬೇಕು.

ಗುಡಿ ಬಂಡೆಯಲ್ಲಿ ಹತ್ಯೆಯಾದ ದಲಿತ ವಿದ್ಯಾರ್ಥಿ ಮುರುಳಿ ಮನೆಗೆ ಭೇಟಿ ನೀಡಿದ ಕರ್ನಾಟಕ ರಾಜ್ಯ ದಲಿತ ಹಕ್ಕುಗಳ ಸಮಿತಿ #DHS ನಿಯೋಗ. ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿ, ಕಾರ್ಮಿಕ ಮುಖಂಡರಾದ ಮುನಿವೆಂಕಟಪ್ಪ, ಜಿಲ್ಲಾ ಸಂಚಾಲಕರಾದ ನಾಗರಾಜ ಮತ್ತು ತಂಡದವರು ಭೇಟಿ ಮಾಡಿ ಪಾಲಕರಿಗೆ ಸಾಂತ್ವಾನ ಹೇಳಿದರು

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಆರ್.ಎಸ್.ಎಸ್. ಹಾಗೂ ಸರ್ಕಾರದ ನೇರವಾದ ಆದೇಶದೊಂದಿಗೆ ಬಲಪಂಥೀಯ ವಿದ್ಯಾರ್ಥಿ ಸಂಘಟನೆಯು ಈಗ ಮುಕ್ತವಾದ ಹಿಂಸಾಚಾರವೂ ತೊಡಗಿದೆ. ಯಾವ ಮುಚ್ಚುಮರೆ ಇಲ್ಲದೆ ವಿದ್ಯಾರ್ಥಿಗಳನ್ನು ಮಾತ್ರವಲ್ಲ ವಿದ್ಯಾರ್ಥಿನಿಯರನ್ನು ಹಾಗೂ ಶಿಕ್ಷಕರನ್ನು ಅದು ಥಳಿಸುತ್ತದೆ. ಈ ಹಿಂಸೆ ಹಾಗೂ ಅಸಹನೆಗಳ ಮಧ್ಯೆ ಒಂದು ಬೆಳಕಿನ ಕಿರಣವೆಂದರೆ ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಸೈನಿಕರೊಬ್ಬರ ಮಗಳಾದ ಗುರ್‌ಮೆಹರ್ ಕೌರ್ ಎನ್ನುವ್ ವಿದ್ಯಾರ್ಥಿನಿಯು ಮಾಡಿದ ಪ್ರತಿಭಟನೆ. ನಾಲ್ಕು ವರ್ಷಗಳಿಂದ ಸಾಹಿತ್ಯವನ್ನು ಕಲಿಸುತ್ತ ಬಂದಿರುವ ನನಗೆ ಯುದ್ಧದ ವಿರುದ್ಧ, ಶಾಂತಿಯ ಪರವಾಗಿ ಹೀಗೆ ಮನಕಲುಕುವ ಮಾತುಗಳು, ಅದೂ ಅಪ್ಪನನ್ನೂ ಕಳೆದುಕೊಂಡ ಮಗಳಿಂದ ಬಂದಿರುವ ಇನ್ನೊಂದು ಉದಾಹರಣೆ ನೆನಪಾಗುತ್ತಿಲ್ಲ. ಅವಳು ತೋರಿಸುವ ವಿಡಿಯೋವನ್ನು ದೇಶದ ಯುವ ಮನಸ್ಸುಗಳು ನೋಡಲೇಬೇಕು.

ಫ್ಯಾಸಿಸಂನ ನೈಜ ಮುಖ ಅನಾವರಣ

ಮತ್ತೆ ಭಾರತದ ವಿಶ್ವವಿದ್ಯಾಲಯ, ಕಾಲೇಜುಗಳು ಪ್ರಕ್ಷುಬ್ಧಗೊಂಡಿವೆ. ಅಧಿಕಾರದಲ್ಲಿರುವ ಬಲಪಂಥೀಯ ಸರ್ಕಾರವು ಮತ್ತು ಪಕ್ಷದ ಸಂಘಟನೆಗಳು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಖಂಡನೆ ಹಾಗೂ ವೈಚಾರಿಕತೆಗಳ ವಿರುದ್ಧ ತಮ್ಮ ಜಿಹಾದ್ ಅನ್ನು ಮುಂದುವರೆಸಿವೆ. ಮತ್ತೆ ಅದೇ ದೇಶದ್ರೋಹದ ನೆಪದ ಮೇಲೆ ಪ್ರಗತಿ ಪರ ಚಿಂತಕರು ಮಾತನಾಡದ ಹಾಗೆ ಕಾರ್ಯಕ್ರಮಗಳನ್ನು ನಿಲ್ಲಿಸಲಾಗುತ್ತಿದೆ. ಅವರನ್ನು ಆಹ್ವಾನಿಸುವ ಅಥವಾ ಬೆಂಬಲಿಸುವವರನ್ನು ಪೀಡಿಸಲಾಗುತ್ತಿದೆ. ಫ್ಯಾಸಿಸಂನ ನೈಜ ಮುಖವು ಅನಾವರಣಗೊಂಡಿದೆ. ಆರ್.ಎಸ್.ಎಸ್. ಹಾಗೂ ಸರ್ಕಾರದ ನೇರವಾದ ಆದೇಶದೊಂದಿಗೆ ಬಲಪಂಥೀಯ ವಿದ್ಯಾರ್ಥಿ ಸಂಘಟನೆಯು ಈಗ ಮುಕ್ತವಾದ ಹಿಂಸಾಚಾರದಲ್ಲಿ ತೊಡಗಿದೆ. ಯಾವ ಮುಚ್ಚುಮರೆ ಇಲ್ಲದೆ ವಿದ್ಯಾರ್ಥಿಗಳನ್ನು ಮಾತ್ರವಲ್ಲ ವಿದ್ಯಾರ್ಥಿನಿಯರನ್ನು ಹಾಗೂ ಶಿಕ್ಷಕರನ್ನು ಅದು ಥಳಿಸುತ್ತದೆ. 'ದಿ ವೈರ್' ಎನ್ನುವ ವೆಬ್ ಪತ್ರಿಕೆಯಲ್ಲಿ ಈ ಸಂಘಟನೆಯ ಬೆಂಬಲಿಗ ವಿದ್ಯಾರ್ಥಿಯೊಬ್ಬನು ತಾವು ಶಿಕ್ಷಕರನ್ನು ಹಿಡಿದು ಥಳಿಸಿದ ಬಗ್ಗೆ ಗೆಳೆಯರೊಂದಿಗೆ ಕೊಚ್ಚಿಕೊಂಡ ಸಂಭಾಷಣೆಯನ್ನು ಮೊಬೈಲ್ ಮೂಲಕ ಧ್ವನಿಮುದ್ರಣ ಮಾಡಿಕೊಂಡು ಅದರ ಲಿಖಿತ ವರದಿಯನ್ನು ಇಂಗ್ಲಿಷ್ ಅನುವಾದದ ಜೊತೆಗೆ ಪ್ರಕಟಿಸಲಾಗಿದೆ. ಇದನ್ನು ಕರ್ನಾಟಕದ ಪ್ರತಿಯೊಬ್ಬ ವಿದ್ಯಾರ್ಥಿ ವಿದ್ಯಾರ್ಥಿನಿಯರು ಓದಲೇಬೇಕು. ಹುಸಿ ರಾಷ್ಟ್ರಪ್ರೇಮದ ಹೆಸರಿನಲ್ಲಿ ಹಿಂಸೆಯನ್ನು ಹೇಗೆ ಬಳಸಿಕೊಳ್ಳಲಾಗುತ್ತಿದೆ ಎಂಬುದನ್ನು ಅರಿಯಬೇಕಾಗಿದೆ. ಈ ಸಂಭಾಷಣೆಯಲ್ಲಿ ತಾವುಗಳು ಹಿಂಸೆಯಲ್ಲಿ ತೊಡಗಿದಾಗ, ಮಾಧ್ಯಮದವರು ಇಲ್ಲದಿದ್ದರೆ ಪೊಲೀಸರು ತಮಗೆ ಮುಕ್ತ ಅವಕಾಶಗಳನ್ನು ಕೊಡುತ್ತಾರೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಲಾಗಿದೆ.

ಇದೆಲ್ಲ ನಡೆದದ್ದು ದೆಹಲಿ ವಿಶ್ವವಿದ್ಯಾಲಯದ ರಾಮಜಸ ಕಾಲೇಜಿನಲ್ಲಿ, ಜೆ.ಎನ್.ಯು.ನ ಇಬ್ಬರು ವಿದ್ಯಾರ್ಥಿ ಧುರೀಣರನ್ನು ಕಾಲೇಜಿನ ಇಂಗ್ಲಿಷ್ ವಿಭಾಗವು ಒಂದು ವಿಚಾರ ಸಂಕಿರಣಕ್ಕೆ ಆಹ್ವಾನಿಸುವ ಕಾರಣಕ್ಕಾಗಿ ದೊಂಬಿ, ಗಲಾಟೆ ಮಾಡಿ ಅದನ್ನು ನಿಲ್ಲಿಸಲಾಯಿತು. ಇದನ್ನು ವಿರೋಧಿಸಿದ ವಿದ್ಯಾರ್ಥಿ ಹಾಗೂ ಶಿಕ್ಷಕರನ್ನು ಥಳಿಸಲಾಯಿತು. ಬೂಟುಗಾಲಿನಲ್ಲಿ ಇಂಗ್ಲಿಷ್ ವಿಭಾಗದ ಶಿಕ್ಷಕರೊಬ್ಬರ ಹೊಟ್ಟೆಗೆ ಒದ್ದಿದ್ದರಿಂದ ಅವರು ಪಜ್ಞೆ ತಪ್ಪಿ ಬೀಳುವಂತಾಯಿತು. ಎನ್ನುವುದನ್ನು 'ದಿ ಹಿಂದೂ' ಪತ್ರಿಕೆಯು ವರದಿಮಾಡಿದೆ. ಮಹಿಳೆಯರನ್ನೂ ಥಳಿಸಿರುವ ವೀಡಿಯೋಗಳನ್ನು ಯಾರಾದರೂ ಸಾಮಾಜಿಕ ತಾಣದಲ್ಲಿ ನೋಡಬಹುದಾಗಿದೆ.

ಇವರು ಮೊದಲು ರಾಜಸ್ಥಾನದ ಜೋಧಪುರದ ಜೈ ನಾರಾಯಣ್ ವ್ಯಾಸ್ ವಿಶ್ವವಿದ್ಯಾಲಯದಲ್ಲಿ ಜೆ.ಎನ್.ಯು. ನ ಪ್ರಸಿದ್ಧ ಚಿಂತಕಿ ನಿವೇದಿತಾ ಮೆನನ್ ದೇಶದ್ರೋಹದ ಮಾತುಗಳನ್ನು ಆಡಿದರು ಎನ್ನುವ ಸುಳ್ಳು ಆರೋಪದ ಮೇಲೆ ಅವರನ್ನು ಆಹ್ವಾನಿಸಿದ ರಾಜಶ್ರೀ ರಣವತ್ ಎನ್ನುವ ಶಿಕ್ಷಕಿಯನ್ನು ಕೆಲಸದಿಂದ ಸಸ್ಪೆಂಡ್ ಮಾಡಲಾಯಿತು. ಕಾರಣವೆಂದರೆ ಇದೇ ವಿದ್ಯಾರ್ಥಿ ಸಂಘಟನೆಯು ದೂರನ್ನು ಸಲ್ಲಿಸಿತ್ತು. ಆ ಶಿಕ್ಷಕಿಯ ವಿರುದ್ಧ ಮಾನಭಂಗ ಮಾಡುವ, ಹೊಡೆಯುವ ಬೆದರಿಕೆ ಸಂದೇಶಗಳನ್ನು ಕಳುಹಿಸಿತು. ಎಂದಿನಂತೆ ನಮ್ಮ ಪುರುಷ ಕೇಸರಿಗಳು, ಮರಿಸಿಂಹಗಳು, ಹೆಂಗಸರನ್ನು ಬೆದರಿಸಿ ತಮ್ಮ ಅದ್ವಿತೀಯ ಶೌರ್ಯವನ್ನು ಸಾಮಾಜಿಕ ತಾಣದಲ್ಲಿ ಮೆರೆದಿವೆ. ವಿಶೇಷವೆಂದರೆ ಹೀಗೆ ಬೆದರಿಕೆ ಸಂದೇಶ ಕಳಿಸಿದ ಜಾಲತಾಣಗಳಲ್ಲಿ ನಂ. 2, ಟ್ವೀಟರ್‌ಗಳನ್ನು ಫಾಲೋ ಮಾಡುವವರು ದೇಶದ ಅತ್ಯುನ್ನತ ಪದವಿಯಲ್ಲಿದ್ದಾರೆಂದು ಹೇಳಲಾಗುತ್ತಿದೆ. ಇದು ಮಾಹಿತಿ ತಂತ್ರಜ್ಞಾನದ ಯುಗವಾಗಿದ್ದರಿಂದ ಈ ಮಾತನ್ನೂ ಪರಿಶೀಲಿಸಿ ಅದರ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಬಹುದಾಗಿದೆ.

ಈ ಹಿಂಸೆ ಹಾಗೂ ಅಸಹನೆಗಳ ಮಧ್ಯೆ ಒಂದು ಬೆಳಕಿನ ಕಿರಣವೆಂದರೆ ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಸೈನಿಕರೊಬ್ಬರ ಮಗಳಾದ ಗುರ್‌ಮೆಹರ್ ಕೌರ್ ಎನ್ನುವ್ ವಿದ್ಯಾರ್ಥಿನಿಯು ಮಾಡಿದ ಪ್ರತಿಭಟನೆ. ಎಂದಿನಂತೆ ಅವಳ ಮನಕಲಕುವ ಅದ್ಭುತವಾದ ಮಾತುಗಳನ್ನು ರಾಜಕೀಯದ ಕೆಸರಾಟದಲ್ಲಿ ಮುಳುಗಿಸಿ ಬಿಡಲಾಗಿದೆ. ಮಾತಿಲ್ಲದೇ, ತಾನೂ ಬರೆದಿರುವ ಅದ್ಭುತವಾದ ಮಾತುಗಳನ್ನು ಅವಳು ತೋರಿಸುವ ವಿಡಿಯೋವನ್ನು ದೇಶದ ಯುವ ಮನಸ್ಸುಗಳು ನೋಡಲೇಬೇಕು. ಬಲಪಂಥೀಯ ವಿದ್ಯಾರ್ಥಿ ಸಂಘಟನೆಯ ವಿರುದ್ಧ ಪ್ರತಿಭಟನೆಯ ವಿಡಿಯೋ ಇದಲ್ಲ, ಬದಲಾಗಿ ಕಾರ್ಗಿಲ್ ಯುದ್ಧದಲ್ಲಿ ತನ್ನ ಅಪ್ಪನನ್ನು ಕಳೆದುಕೊಂಡು ಬೆಳೆದ

ಪುಟ 13 ಕ್ಕೆ

'ನನ್ನ ತಂದೆಯನ್ನು ಕೊಂದದ್ದು ಯುದ್ಧವೇ ಹೊರತು ಪಾಕಿಸ್ತಾನವಲ್ಲ' ಆ ಹುಡುಗಿ ನಿಜವಾಗಿಯೂ ಹೇಳಲು ಹೊರಟಿದ್ದು ಇಷ್ಟೇ

ಈಗ ಚರ್ಚೆಗೆ ಗ್ರಾಸವಾಗಿರುವ ಆ ಒಂದು ಚಿತ್ರ ಸುಮಾರು 4.20 ನಿಮಿಷಗಳಿಷ್ಟಿರುವ ವಿಡಿಯೋ ಒಂದರ ತುಣುಕು ಮಾತ್ರ. ಯುದ್ಧದ ಕೆಡುಕನ್ನು ಸಾರುವ ಒಂದು ಸಂದೇಶವುಳ್ಳ ವಿಡಿಯೋ ಇದಾಗಿದ್ದು ತಾನು ಎರಡು ವರ್ಷ ಪ್ರಾಯದ ಹಸುಳೆಯಾಗಿದ್ದಾಗಲೇ ಯುದ್ಧದದಲ್ಲಿ ತನ್ನ ತಂದೆಯನ್ನು ಕಳೆದುಕೊಂಡ ನೋವನ್ನು ಮೌನವಾಗಿ ಪೋಸ್ಟರ್ ಬರಹಗಳ ಮೂಲಕ ಈ ವಿಡಿಯೋದುದ್ದಕ್ಕೂ ಕೌರ್ ಪ್ರದರ್ಶಿಸುತ್ತಾ ಹೋಗುತ್ತಾಳೆ.

ಈ ವಿಡಿಯೋವನ್ನು ಈ ಯೂ ಟ್ಯೂಬ್ ತಾಣದಲ್ಲಿ ನೋಡಬಹುದು.

https://www.youtube.com/watch?v=edkYYQLMC8M

ಗುರ್ ಮೆಹರ್ ಕೌರ್ ಭಾವನೆಗಳ ಕನ್ನಡಾನುವಾದ...

– ಹಾಯ್
– ನನ್ನ ಹೆಸರು ಗುರ್ ಮೆಹರ್ ಕೌರ್
– ನಾನು ಭಾರತದ ಜಲಂಧರ್ ನವಳು
– ಇವರು ನನ್ನ ತಂದೆ ಕ್ಯಾಮನ್ದೀಪ್ ಸಿಂಗ್ (ತಂದೆಯ ಭಾವಚಿತ್ರವನ್ನು ತೋರಿಸುತ್ತಾಳೆ)
– ಇವರು 1999ರ ಕಾರ್ಗಿಲ್ ಯುದ್ಧದಲ್ಲಿ ಕೊಲ್ಲಲ್ಪಟ್ಟರು (ಪೋಸ್ಟರ್‌ನಲ್ಲಿ ಆಕೆ Killed ಎಂಬ ಶಬ್ದವನ್ನೇ ಬಳಸಿದ್ದಾಳೆ)
– ಅವರು ಸಾಯುವ ಸಂದರ್ಭದಲ್ಲಿ ನಾನು ಎರಡು ವರ್ಷ ಪ್ರಾಯದವಳಾಗಿದ್ದೆ. ಅವರ ಕುರಿತಾಗಿ ನನ್ನ ನೆನಪು ತುಂಬಾ ಕ್ಷೀಣವಾಗಿದೆ.
– ಆದರೆ ತಂದೆಯೇ ಇಲ್ಲದಿರುವ ನೋವಿಗೆ ಸಂಬಂಧಿಸಿದಂತೆ ನನ್ನಲ್ಲಿ ಸಾಕಷ್ಟು ನೆನಪುಗಳಿವೆ!
– ನನ್ನ ತಂದೆಯನ್ನು ಕೊಂದವರು ಎಂಬ ಕಾರಣಕ್ಕಾಗಿ ನಾನು ಪಾಕಿಸ್ತಾನವನ್ನು ಹಾಗೂ ಪಾಕಿಸ್ತಾನೀಯರನ್ನು ನಾನೆಷ್ಟು ದ್ವೇಷಿಸುತ್ತಿದ್ದೆ ಎಂಬುದೂ ಸಹ ನನಗೆ ಚೆನ್ನಾಗಿ ನೆನಪಿದೆ.
– ಮಾತ್ರವಲ್ಲದೆ ನಾನು ಮುಸ್ಲಿಂರನ್ನೂ ಸಹದ್ವೇಷಿಸುತ್ತಿದ್ದೆ ಯಾಕೆಂದರೆ ಎಲ್ಲಾ ಮುಸ್ಲಿಂರು ಪಾಕಿಸ್ತಾನೀಯರೆಂದೇ ನಾನು ತಿಳಿದಿದ್ದೇ.
– ನಾನು 6 ವರ್ಷ ಪ್ರಾಯದವಳಿದ್ದಾಗ ಬುರ್ಖಾ ಧರಿಸಿ ಓಡಾಡುತ್ತಿದ್ದ ಓರ್ವ ಮಹಿಳೆಯನ್ನು ನಾನು ಇರಿಯಲು ಪ್ರಯತ್ನಿಸಿದ್ದೇ!
– ಯಾಕೆಂದರೆ ಕೆಲವೊಂದು ವಿಚಿತ್ರ ಕಾರಣಗಳಿಗಾಗಿ ಆಕೆ ನನ್ನ ತಂದೆಯ ಸಾವಿಗೆ ಕಾರಣಳು ಎಂದು ನಾನು ಭಾವಿಸಿದ್ದೆ.
– ಆಗ ನನ್ನ ತಾಯಿ ನನ್ನನ್ನು ತಡೆದು, ಪಾಕಿಸ್ತಾನ ನನ್ನ ತಂದೆಯನ್ನು ಕೊಲ್ಲಲಿಲ್ಲ, ಯುದ್ಧ ಅವರನ್ನು ಕೊಂದಿತು ಎಂಬ ವಿಷಯ ನನಗೆ ಅರ್ಥವಾಗುವಂತೆ ಮಾಡಿದರು.
– ಆದರೆ ಇದು ಅರ್ಥವಾಗಲು ನನಗೆ ಸ್ವಲ್ಪ ಸಮಯ ಹಿಡಿಯಿತು, ಆದರೆ ಇವತ್ತು ನನ್ನ ಮನಸ್ಸಿನಲ್ಲಿದ್ದ ದ್ವೇಷ ಭಾವನೆಯನ್ನು ನಾನು ಹೋಗಲಾಡಿಸಿದ್ದೇನೆ.
– ಈ ರೀತಿ ಯೋಚಿಸುವುದು ಸುಲಭವಲ್ಲ ಆದರೆ ಇದು ಕಷ್ಟಕರವೂ ಅಲ್ಲ
– ನಾನು ಹೀಗೆ ಮಾಡಬಹುದು ಎಂದಾದರೆ, ನೀವು ಸಹ ಹೀಗೆ ಮಾಡಬಹುದು.
– ಇವತ್ತು, ನಾನು ನನ್ನ ತಂದೆಯ ಹಾಗೆಯೇ ಓರ್ವ ಯೋಧಳಾಗಿದ್ದೇನೆ.
– ಭಾರತ ಮತ್ತು ಪಾಕಿಸ್ತಾನದ ನಡುವೆ ಶಾಂತಿಗಾಗಿ ನಾನು ಹೋರಾಡುತ್ತಿದ್ದೇನೆ.



– ಯಾಕೆಂದರೆ, ಒಂದುವೇಳೆ ನಮ್ಮ ನಡುವೆ ಯುದ್ಧ ನಡೆಯದೇ ಇರುತ್ತಿದ್ದಲ್ಲಿ ಇವತ್ತು ನನ್ನ ತಂದೆ ಬದುಕಿರುತ್ತಿದ್ದರು!
– ನಾನು ಈ ವಿಡಿಯೋವನ್ನು ಮಾಡುತ್ತಿರುವ ಉದ್ದೇಶವೇನೆಂದರೆ ಎರಡೂ ದೇಶಗಳ ಸರಕಾರಗಳು ನಟನೆಯನ್ನು ನಿಲ್ಲಿಸಬೇಕು...
– ಮತ್ತು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು.
– 2 ವಿಶ್ವಯುದ್ಧಗಳ ಬಳಿಕ ಫ್ರಾನ್ಸ್ ಮತ್ತು ಜರ್ಮನಿ ಮಿತ್ರರಾಷ್ಟ್ರಗಳಾಗಲು ಸಾಧ್ಯವೆಂದಾದರೆ...
– ಜಪಾನ್ ಮತ್ತು ಅಮೇರಿಕಾ ತಮ್ಮ ನಡುವಿನ ದ್ವೇಷವನ್ನು ಮರೆತು ಪ್ರಗತಿಗಾಗಿ ಒಗ್ಗೂಡಲು ಸಾಧ್ಯವಿದೆಯೆಂದಾದರೆ...
– ನಾವ್ಯಾಕೆ ಒಂದಾಗಲು ಸಾಧ್ಯವಿಲ್ಲ...??
– ಭಾರತ ಮತ್ತು ಪಾಕಿಸ್ತಾನದ ಸಾಮಾನ್ಯ ಪ್ರಜೆಗಳು ಶಾಂತಿಯನ್ನು ಬಯಸುತ್ತಾರೆ... ಯುದ್ಧವನ್ನಲ್ಲ.
– ಎರಡೂ ರಾಷ್ಟ್ರಗಳ ರಾಜಕೀಯ ನಾಯಕತ್ವದ ಇಚ್ಛಾಶಕ್ತಿಯನ್ನು ನಾನು ಪ್ರಶ್ನಿಸುತ್ತಿದ್ದೇನೆ.
– ತೃತೀಯ ದರ್ಜೆಯ ನಾಯಕತ್ವದಡಿಯಲ್ಲಿ ವಿಶ್ವದ ಬಲಿಷ್ಠ ರಾಷ್ಟ್ರವಾಗುವ ಕನಸನ್ನು ನಾವು ಕಾಣುವುದಕ್ಕೆ ಸಾಧ್ಯವಿಲ್ಲ.
– ದಯವಿಟ್ಟು ಇಚ್ಛಾಶಕ್ತಿಯನ್ನು ಪ್ರದರ್ಶಿಸಿ ಪರಿಣಾಮಕಾರಿ ಮಾತುಕತೆಯಲ್ಲಿ ತೊಡಗಿಸಿಕೊಳ್ಳಿ ಮತ್ತು ಸಮಸ್ಯೆಯನ್ನು ಪರಿಹರಿಸಿ
– ಸರಕಾರಿ ಪ್ರಾಯೋಜಿತ ಭಯೋತ್ಪಾದನೆ ಕೊನೆಗೊಳ್ಳಲಿ...
– ಸರಕಾರಿ ಪ್ರಾಯೋಜಿತ ಗೂಢಚಾರಿಕೆ ನಿಲ್ಲಲಿ...
– ಸರಕಾರಿ ಪ್ರಾಯೋಜಿತ ದ್ವೇಷ ಅಂತ್ಯವಾಗಲಿ...
– ಎರಡೂ ಕಡೆಯ ಗಡಿಗಳಲ್ಲಿ ಜನರು ಸಾಯುವುದು ಇನ್ನು ಸಾಕು.
– ಎಲ್ಲವೂ ಕೊನೆಯಾಗಲಿ...!
– ತನ್ನ ತಂದೆಯನ್ನು ಕಳೆದುಕೊಂಡ ಇನಷ್ಟು ಗುರ್ ಮೆಹರ್ ಕೌರ್ ಇಲ್ಲದ ಜಗತ್ತಿನಲ್ಲಿ ನಾನು ವಾಸಿಸಲು ಬಯಸುತ್ತಿದ್ದೇನೆ.
– ಇದು ನನ್ನೊಬ್ಬಳ ನೋವಿನ ಕಥೆಯಲ್ಲ ; ನನ್ನಂತೆ ಅನೇಕರು ಇದೇ ರೀತಿಯ ನೋವನ್ನು ಅನುಭವಿಸುತ್ತಿದ್ದಾರೆ.
– ಶಾಂತಿಗಾಗಿ ಧ್ವನಿಗೂಡಿಸೋಣ ; ಒಂದಾಗೋಣ...
– ನೀವೂ ಶಾಂತಿಯನ್ನು ಬಯಸುವವರಾಗಿದ್ದಲ್ಲಿ ಈ ವಿಡಿಯೋವನ್ನು ಶೇರ್ ಮಾಡಿ...

... ಎಂಬಲ್ಲಿಗೆ ಈ ವಿಡಿಯೋ ಮುಕ್ತಾಯ ಗೊಳ್ಳುತ್ತದೆ.

ಈ ಪ್ರಕರಣದಲ್ಲಿ ಗುರ್ ಮೆಹರ್ ಕೌರ್ ಮಾಡಿದ ತಪ್ಪಾದರೂ ಏನು ಎಂಬುದನ್ನು ನಾಡಿನ ಪ್ರಜ್ಞಾವಂತ ನಾಗರಿಕರೇ ನಿರ್ಧರಿಸಬೇಕಷ್ಟೇ...!

ಎರಡು ಘಟನೆಗಳು – ಒಂದೇ ಸಂದೇಶ ಆರ್‌ಎಸ್‌ಎಸ್ ಬೆದರಿಕೆಗಳಿಗೆ ದಿಟ್ಟ ಉತ್ತರ



ಪ್ರಕಾಶ್ ಕಾರಟ್

ಫೆಬ್ರವರಿ 25ರಂದು ಮಂಗಳೂರಿನಲ್ಲಿ ಆರೆಸ್ಸೆಸ್ ಬೆದರಿಕೆಗಳನ್ನು ಧಿಕ್ಕರಿಸಿ ಕೋಮುಸೌಹಾರ್ದಕ್ಕಾಗಿ ಒಂದು ಬೃಹತ್ ರ‍್ಯಾಲಿ ನಡೆಯಿತು. ಫೆಬ್ರವರಿ 28ರಂದು ಅಲ್ಲಿಂದ 2000 ಕಿ.ಮೀ. ದೂರದ ದಿಲ್ಲಿಯಲ್ಲಿ ಸಾವಿರಾರು ವಿದ್ಯಾರ್ಥಿಗಳಿದ್ದ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಿತು.ಇವರೆಡರ ಸಂದೇಶ ಒಂದೇ–ಆರ್‌ಎಸ್‌ಎಸ್‌ನ ಬೆದರಿಕೆಗಳನ್ನು ನಾವು ಒಗ್ಗಟ್ಟಿನಿಂದ ಹಾಗೂ ದಿಟ್ಟತನದಿಂದ ಎದುರಿಸುತ್ತೇವೆ.

2000 ಕಿಮೀಟರ್‌ಗಳ ಅಂತರದಲ್ಲಿರುವ ಎರಡು ಸ್ಥಳಗಳಲ್ಲಿ ಕಳೆದ ವಾರ ನಡೆದ ಎರಡು ಘಟನೆಗಳು ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆ ಮೇಲಿನ ಆರ್‌ಎಸ್‌ಎಸ್ ದಾಳಿಗಳನ್ನು ಪ್ರತಿರೋಧಿಸುವ ಸಂದೇಶ ಸಾರಿದವು. ಮೊದಲನೆಯದು ದೇಶದ ರಾಜಧಾನಿಯ ದೆಹಲಿ ವಿಶ್ವವಿದ್ಯಾನಿಲಯ ಹಾಗೂ ಎರಡನೆಯದು ಕರ್ನಾಟಕದ ಮಂಗಳೂರು ನಗರ.

ದೆಹಲಿಯಲ್ಲಿ ಆರ್‌ಎಸ್‌ಎಸ್‌ನ ವಿದ್ಯಾರ್ಥಿ ವಿಭಾಗವಾದ ಎಬಿವಿಪಿ ರಾಮ್‌ಜಾಸ್ ಕಾಲೇಜಿನಲ್ಲಿ ನಡೆಯುತ್ತಿದ್ದ ವಿಚಾರಸಂಕಿರಣವೊಂದರ ಮೇಲೆ ದಾಳಿ ಮಾಡಿದರು. ದೇಶ–ವಿರೋಧಿ ವ್ಯಕ್ತಿಗಳನ್ನು ಸಂಕಿರಣದಲ್ಲಿ ಮಾತನಾಡಲು ಆಹ್ವಾನಿಸಲಾಗಿದೆ ಎನ್ನುವುದು ದಾಳಿಗೆ ಎಬಿವಿಪಿ ನೀಡಿದ ನೆವ. ಜೆಎನ್‌ಯುನ ಸಂಶೋಧನಾ ವಿದ್ಯಾರ್ಥಿ ಉಮರ್ ಖಾಲಿದ್ ಸಂಕಿರಣಕ್ಕೆ ಹಾಜರಾಗದಿದ್ದರೂ ಎಬಿವಿಪಿ ವಿದ್ಯಾರ್ಥಿಗಳು ಸಂಕಿರಣವನ್ನು ಉಧ್ವಸ್ತಗೊಳಿಸಿದರು. ಅವರು ಕೆಲವು ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಮೇಲೆ ಹಲ್ಲೆಯನ್ನೂ ಮಾಡಿದರು.

ಈ ಗೂಂಡಾಗಿರಿಯ ವಿರುದ್ಧ ಫೆಬ್ರವರಿ 22ರಂದು ವಿದ್ಯಾರ್ಥಿಗಳು ಒಂದು ಮೆರವಣಿಗೆಯನ್ನು ನಡೆಸಿದರು. ಈ ಮೆರವಣಿಗೆ ಮೇಲೆ ಕೂಡ ಎಬಿವಿಪಿ ಗೂಂಡಾಗಳು ದಾಳಿ ಮಾಡಿದರು. ವಿದ್ಯಾರ್ಥಿಗಳಿಗೆ ಸೌಹಾರ್ದ ವ್ಯಕ್ತಪಡಿಸಲು ನೆರೆದಿದ್ದ ಶಿಕ್ಷಕರು ಮತ್ತು ಪ್ರೊಫೆಸರ್‌ಗಳೂ ಸೇರಿದಂತೆ ಅನೇಕರನ್ನು ಹೊಡೆದರು. ಅವರ ಪೈಕಿ ಒಬ್ಬ ಪ್ರೊಫೆಸರ್‌ಅನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಬೇಕಾಯಿತು. ಎಬಿವಿಪಿಯವರು ಈ ಪರಿಯ ಗೂಂಡಾಗಿರಿ ನಡೆಸುತ್ತಿದ್ದರೂ ಅಲ್ಲಿ ದೊಡ್ಡ ಸಂಖ್ಯೆಯಲ್ಲಿ ಹಾಜರಿದ್ದ ದೆಹಲಿ ಪೊಲೀಸರು ಏನನ್ನೂ ಮಾಡದೆ ಸುಮ್ಮನೆ ನಿಂತುಕೊಂಡಿದ್ದರು. ಮಧ್ಯಪ್ರವೇಶ ಮಾಡಲು ಅವರು ನಿರಾಕರಿಸಿದರು. ಆನಂತರ, ಈ ಗೂಂಡಾಗಳ ವಿರುದ್ಧ ಕ್ರಮಕ್ಕೈಗೊಳ್ಳುವಂತೆ ಒತ್ತಾಯಿಸಿ ಸ್ಥಳೀಯ ಪೊಲೀಸ್ ಠಾಣೆ ಮುಂದೆ ವಿದ್ಯಾರ್ಥಿಗಳು ನೆರೆದಾಗ ಪೊಲೀಸರು ನ್ಯಾಯ ಕೇಳಿದ ವಿದ್ಯಾರ್ಥಿಗಳ ಮೇಲೆಯೇ ಲಾಠಿ ಪ್ರಹಾರ ಮಾಡಿದರು.

ರಾಮ್‌ಜಾಸ್ ಘಟನೆ ಮತ್ತು ದೆಹಲಿ ವಿವಿ ವಿದ್ಯಾರ್ಥಿಗಳು ಹಾಗೂ ಬೋಧಕರ ಮೇಲೆ ನಡೆದ ದಾಳಿಯು ವಿವಿಧ ವಿಶ್ವವಿದ್ಯಾನಿಲಯ ಕ್ಯಾಂಪಸ್‌ಗಳಲ್ಲಿ ಹಿಂದೂತ್ವ ಸಿದ್ಧಾಂತ ಮತ್ತು ತಮ್ಮ ಮಾದರಿಯ ಹಿಂದೂ ರಾಷ್ಟ್ರೀಯವಾದದ ಹೇರಿಕೆಗೆ ವಿರುದ್ಧವಾಗಿರುವವರನ್ನು ಬೆದರಿಸುವ ಎಬಿವಿಪಿಯ ಆಕ್ರಮಣಾತ್ಮಕ ಪ್ರಯತ್ನಗಳ ಭಾಗವಾಗಿದೆ.

ಎಬಿವಿಪಿ ಗೂಂಡಾಗಿರಿ ಮತ್ತು ದೆಹಲಿ ಪೊಲೀಸರು ಅವರೊಂದಿಗೆ ಶಾಮೀಲಾಗಿರುವುದಕ್ಕೆ ವ್ಯಾಪಕ ಆಕ್ರೋಶ ಹಾಗೂ ಪ್ರತಿಭಟನೆ ವ್ಯಕ್ತವಾಗಿದೆ. ವಿವಿ ಕ್ಯಾಂಪಸ್ ಆಚೆಗಿನ ಕಾಲೇಜೊಂದರಲ್ಲಿ ಕಲಿಯುತ್ತಿರುವ 20 ವರ್ಷ ಪ್ರಾಯದ ವಿದ್ಯಾರ್ಥಿನಿ ಗುರುಮೆಹರ್ ಕೌರ್ ಈ ಆಕ್ರೋಶ ಮತ್ತು ಎಬಿವಿಪಿ ಹಾಗೂ ಆರ್‌ಎಸ್‌ಎಸ್‌ನ ಹಿಂಸಾತ್ಮಕ ದಬ್ಬಾಳಿಕೆಗೆ ಜಗ್ಗದಿರುವ ಮನೋಭಾವಕ್ಕೆ ಸಂಕೇತವಾಗಿ ಹೊರಹೊಮ್ಮಿದ್ದಾರೆ.

ಗುರ್‌ಮೆಹರ್ ಕೌರ್ ತಮ್ಮ ಫೇಸ್‌ಬುಕ್ ಪ್ರೊಫೈಲ್ ಚಿತ್ರವನ್ನು ಬದಲಾಯಿಸಿ 'ನಾನು ದೆಹಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿ' ಎಂದು ಘೋಷಿಸುವ ಫಲಕ ಹಿಡಿದುಕೊಂಡಿರುವ ಫೋ–ಟೋ ಅಪ್‌ಲೋಡ್ ಮಾಡಿದರು. "ನಾನು ಎಬಿವಿಪಿಗೆ ಹೆದರುವುದಿಲ್ಲ. ನಾನು ಏಕಾಂಗಿಯಲ್ಲ. ಭಾರತದ ಪ್ರತಿಯೊಬ್ಬ ವಿದ್ಯಾರ್ಥಿ ನನ್ನ ಜೊತೆ–ಗಿದ್ದಾರೆ" ಎಂದೂ ಅವರು ಅದರಲ್ಲಿ ಬರೆದಿದ್ದಾರೆ. ಗುರ್‍ಮೆಹರ್ ಕೌರ್‌ರ ಈ ಪೋಸ್ಟ್‌ಗೆ ದೇಶದೆಲ್ಲೆಡೆಯ ವಿದ್ಯಾರ್ಥಿಗಳು ಮತ್ತು ಯುವಜನರ ವ್ಯಾಪಕ ಸ್ಪಂದನೆ ದೊರಕಿತು. ಇದಕ್ಕೆ ಪ್ರತಿಯಾಗಿ ಆಕೆಗೆ ದ್ವೇಷಕಾರುವ ಮೇಲ್‌ಗಳು ಬರಲಾರಂಭಿಸಿದವು. ಅಲ್ಲದೆ ಅವರನ್ನು ಬೆನ್ನಟ್ಟಲಾಯಿತು ಕೂಡ. ಕೌರ್ ಮೇಲೆ ಅತ್ಯಾಚಾರ ನಡೆಸುವ ಬೆದರಿಕೆಯನ್ನೂ ಹಾಕಲಾಯಿತು. ಗುರುಮೆಹರ್ ಕಾರ್ಗಿಲ್ ಕಾರ್ಯಾಚರಣೆ ವೇಳೆ ಮೃತರಾದ ಸೇನಾ ಕ್ಯಾಪ್ಟನ್ ಒಬ್ಬರ ಮಗಳು.

ಸಂಘ ಪರಿವಾರವು ಭಾರತೀಯ ಸೇನೆಯ 'ಹುತಾತ್ಮರನ್ನು' ಗೌರವಿಸುತ್ತದಂತೆ. ಆದರೆ ಗುರ್‌ಮೆಹರ್ ಒಂದು ದ್ವೇಷದ ಪ್ರಚಾರದ ಗು–ರಿಯಾದರು. ಯಾಕೆಂದರೆ ಆಕೆ ಈ ಮುನ್ನ ಪಾಕಿಸ್ತಾನವನ್ನು ಮತ್ತು ಮುಸ್ಲಿಮರನ್ನು ತಾನು ದ್ವೇಷಿಸುವುದಿಲ್ಲ ಎಂದಿದ್ದರು. ಅಲ್ಲದೆ ಭಾರತ ಮತ್ತು ಪಾಕಿಸ್ತಾನದ ನಡುವೆ ಶಾಂತಿ ನೆಲೆಸಬೇಕೆಂದು ಪ್ರತಿಪಾದಿಸಿದ್ದರು. ಕೇಂದ್ರ ಸಚಿವರಾದ ಕಿರಣ್ ರಿಜ್ಜು ಮತ್ತು ವೆಂಕಯ್ಯ ನಾಯ್ಡು ಕೂಡ ಟ್ವಿಟರ್‌ನಲ್ಲಿ ಕೌರ್ ವಿರುದ್ಧದ ದ್ವೇಷದ ಪ್ರಚಾರದಲ್ಲಿ ಕೈಜೋಡಿಸಿದರು.

ಗುರ್‌ಮೆಹರ್ ವಿರುದ್ಧದ ದುಷ್ಟ ಪ್ರಚಾರವು ಸಂಘ ಪರಿವಾರ ಪ್ರತಿಪಾದಿಸುವ ರಾಷ್ಟ್ರೀಯವಾದದ ನಿಜವಾದ ಮುಖವನ್ನು ಬಯಲುಗೊಳಿಸಿದೆ. ಆರ್‌ಎಸ್‌ಎಸ್ ಮತ್ತು ಅದರ ಎಬಿವಿಪಿಯಂಥ ಸಂಘಟನೆಗಳ ಕೋಮುವಾದ ಮತ್ತು ಸಂಕುಚಿತ ದೇಶಭಕ್ತಿಯನ್ನು ಎದುರಿಸಿ ನಿಲ್ಲುವ ಒಬ್ಬ ದಿಟ್ಟ ಯುವತಿಯಾಗಿ ಕೌರ್ ನಮ್ಮ ಮುಂದಿದ್ದಾರೆ.

ದೆಹಲಿ ವಿವಿ ವಿದ್ಯಾರ್ಥಿ ಸಂಘದ ನಿಯಂತ್ರಣ ಹೊಂದಿರುವ ಎಬಿವಿಪಿ ನಾಯಕರು ಕಮ್ಯೂನಿಸ್ಟರು ಹಾಗೂ ದೇಶ–ವಿರೋಧಿಗಳನ್ನು ಕ್ಯಾಂಪಸ್‌ನೊಳಗೆ ಬಿಡುವುದಿಲ್ಲ ಎಂದು ಬೆದರಿಸಿದ್ದಾರೆ. ಆದರೆ ಎಡ, ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆಗಳ ಬೆಂಬಲ ಹೊಂದಿರುವ ಸಾಮಾನ್ಯ ವಿದ್ಯಾರ್ಥಿಗಳು ಎಬಿವಿಪಿ ಗೂಂಡಾಗಿರಿ ವಿರುದ್ಧ ಪ್ರತಿಭಟನೆಗಳನ್ನು ಮುಂದುವರಿಸಲು ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ತಮ್ಮ ಹಕ್ಕನ್ನು ಪ್ರತಿಪಾದಿಸಲು ಪಣತೊಟ್ಟಿದ್ದಾರೆ. ಸಾವಿರಾರು ವಿದ್ಯಾರ್ಥಿಗಳಿದ್ದ ಬೃಹತ್ ಪ್ರತಿಭಟನೆ ಮೆರವಣಿಗೆಯೊಂದು ಫೆಬ್ರವರಿ 28ರಂದು ನಡೆಯಿತು. ನಗರದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಇತರ ಪ್ರಜಾಸತ್ತಾತ್ಮಕ ಜನವಿಭಾಗಗಳ ಪ್ರತಿಭಟನೆಗಳು ನಡೆಯಲಿವೆ.

ಫೆಬ್ರವರಿ 25ರಂದು ಮಂಗಳೂರಿನಲ್ಲಿ ಕೋಮುಸೌಹಾರ್ದಕ್ಕಾಗಿ ನಡೆದ ರ‍್ಯಾಲಿ ಇಲ್ಲಿ ಪ್ರಸ್ತಾವಿಸಲಾಗಿರುವ ಇನ್ನೊಂದು ಪ್ರಕರಣವಾಗಿದೆ. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅದನ್ನು ಉದ್ಘಾಟಿಸಲು ನಿರ್ಧಾರವಾಗಿತ್ತು. ವಿಜಯನ್ ರ‍್ಯಾಲಿಯಲ್ಲಿ ಮಾತನಾಡಲು ಹಾಗೂ ರ‍್ಯಾಲಿಯೇ ನಡೆಯಲು ಬಿಡುವುದಿಲ್ಲ ಎಂದು ಆರ್‌ಎಸ್‌ಎಸ್ ಮತ್ತು ವಿವಿಧ ಹಿಂದೂತ್ವವಾದಿ ಸಂಘಟನೆಗಳು ಘೋಷಿಸಿದ್ದವು. ರ‍್ಯಾಲಿಯ ದಿನ ಬಂದ್‌ಗೆ ಕರೆ ಕೊಟ್ಟ ಆ ಸಂಘಟನೆಗಳು ಅನೇಕ ಬೆದರಿಕೆಗಳನ್ನೂ ಒಡ್ಡಿದ್ದವು. ಉಳ್ಳಾಲದಲ್ಲಿನ ಸಿಪಿಐ (ಎಂ) ಕಚೇರಿಗೆ ಬೆಂಕಿ ಹಾಕಿ ಪೀಠೋಪಕರಣ ಮತ್ತಿತರ ವಸ್ತುಗಳನ್ನು ಸುಟ್ಟು ಹಾಕಿದರು.

ಆದರೆ ಈ ಎಲ್ಲಾ ಬೆದರಿಕೆ, ಪ್ರಯತ್ನಗಳ ಹೊರತಾಗಿಯೂ ನಿಗದಿತ ರ‍್ಯಾಲಿ ನಡೆಯಿತು; ಅದನ್ನು ಪಿಣರಾಯಿ ವಿಜಯನ್ ಉದ್ಘಾಟಿಸಿದರು. ಆರ್‌ಎಸ್‌ಎಸ್ ಗೂಂಡಾಗಳ ಬೆದರಿಕೆಗಳ ಹೊರತಾಗಿಯೂ ರ‍್ಯಾಲಿಗೆ ಬೃಹತ್ ಸಂಖ್ಯೆಯಲ್ಲಿ ಜನರು ಬಂದದ್ದು ಹಾಗೂ ಆರ್‌ಎಸ್‌ಎಸ್‌ನ ನಿಜಸ್ವರೂಪವನ್ನು ಬಯಲಿಗೆಳೆಯುವ ರೀತಿಯಲ್ಲಿ ವಿಜಯನ್ ಮಾಡಿದ ಅದ್ಭುತ ಭಾಷಣ ಇಡೀ ದೇಶದ ಗಮನ ಸೆಳೆಯಿತು.

ದೆಹಲಿ ವಿವಿ ಮತ್ತು ಮಂಗಳೂರಿನ ಸಂದೇಶ ಒಂದೇ: ಆರ್‌ಎಸ್‌ಎಸ್‌ನ ಬೆದರಿಕೆಗಳನ್ನು ನಾವು ಒಗ್ಗಟ್ಟಿನಿಂದ ಹಾಗೂ ದಿಟ್ಟತನದಿಂದ ಎದುರಿಸುತ್ತೇವೆ.

ಅನು: ವಿಶ್ವ

ಮಗಳಿಗೆ ಕಲಿಸಿ ಎಂದವರು, ಕಲಿತ ಮಗಳ ಬಾಯಿ ಮುಚ್ಚಿಸಿದರು

ಒಬ್ಬ ಮಗಳ ಬಾಯಿ ಮುಚ್ಚಿಸಿದರು, ಬಿಜೆಪಿ ಯಾವ ರೀತಿಯ ಭಾರತವನ್ನು ಕಟ್ಟ ಬಯಸುತ್ತಿದೆ?– ಇದು ಒಬ್ಬ ಪತ್ರಕರ್ತರ ಪ್ರಶ್ನೆ(ಓಂ ಥನ್ವಿ, ನಿವೃತ್ತ ಸಂಪಾದಕರು, ಜನಸತ್ತಾ). ಕಳೆದ ವಾರದ ನಂತರ ಇದು ಬಹಳಷ್ಟು ಭಾರತೀಯರ ಮನದಲ್ಲಿ ಎದ್ದಿರುವ ಪ್ರಶ್ನೆ. ಪ್ರಧಾನಿಗಳು 'ಬೇಟಿ ಬಚಾವೊ, ಬೇಟಿ ಪಢಾವೊ'(ಮಗಳನ್ನು ಉಳಿಸಿ, ಮಗಳಿಗೆ ಕಲಿಸಿ) ಎಂದರು. ಆದರೆ ಅವರ 'ಪರಿವಾರ' ಹಾಗೆ ಕಲಿತ ಮಗಳ ಬಾಯಿ ಮುಚ್ಚಿಸಿದರು, ಅವಳು 'ಮನದ ಮಾತು' ಹೇಳಿದರೆ ಸಾಯಿಸುತ್ತೇವೆ, ಮಾನಭಂಗ ಮಾಡುತ್ತೇವೆ ಎಂದು ಬೆದರಿಸಿದರು. 'ಮನ ಕೀ ಬಾತ್' ಈ ದೇಶದಲ್ಲಿ ಕೇವಲ ಪ್ರಧಾನ ಮಂತ್ರಿಗಳಿಗೆ ಮಾತ್ರ ಮೀಸಲಾಗಿರುವ ಹಕ್ಕೇ ಎಂಬ ಪ್ರಶ್ನೆಯನ್ನೂ ಅವರು ಎತ್ತಿದ್ದಾರೆ.

ದಿಲ್ಲಿಯ ಲೇಡಿ ಶ್ರೀರಾಮ್ ಕಾಲೇಜಿನ ವಿದ್ಯಾರ್ಥಿನಿ 20 ವರ್ಷದ ಗುರ್‌ಮೆಹರ್ ಕೌರ್‌ಳ **" ನಾನು ಎಬಿವಿಪಿಗೆ ಹೆದರುವುದಿಲ್ಲ"** ವೀಡಿಯೋ ಪ್ರಜಾಪ್ರಭುತ್ವ ಮನೋಭಾವದ ವಿದ್ಯಾರ್ಥಿಗಳಲ್ಲಿ ಮಾತ್ರವಲ್ಲ, ಇತರೆಲ್ಲರಲ್ಲೂ ಹೊಸ ಹುರುಪು ಮೂಡಿಸಿದ್ದರೆ, ಅದಕ್ಕೆ 'ಸಂಘ ಪರಿವಾರ'ದ ಪ್ರತಿಕ್ರಿಯೆಗಳು ಅವರ ನಿಜ 'ಸಂಸ್ಕೃತಿ'ಯನ್ನು ದೇಶದ ಮುಂದೆ ಮತ್ತೊಮ್ಮೆ ಬಯಲಿಗೆ ತಂದಿವೆ.

ಎಬಿವಿಪಿ ಮತ್ತು ಇತರ ಕೇಸರಿ ಟ್ವೀಟ್‌ಪಡೆಗಳ ಹೊಲಸು ಪ್ರತಿಕ್ರಿಯೆಗಳು, ಬೆದರಿಕೆಗಳು ಈಗ ಎರಡೂವರೆ ವರ್ಷಗಳ ಅನುಭವಗಳ ನಂತರ ಬಹಳ ಮಂದಿಗೆ ಅನಿರೀಕ್ಷಿತವಾಗಿರಲ್ಲಿಲ್ಲ. ಆದರೆ ಅಂತಹ ಹೊಲಸು ಪ್ರತಿಕ್ರಿಯೆಗಳಿಗೆ ಆಳುವ ಪಕ್ಷದ ಮುಖಂಡರುಗಳಿಂದ ದೊರೆತ ಪೋಷಣೆ ಇನ್ನೂ ಹಲವರಲ್ಲಿ ಉಳಿದಿದ್ದ ಭ್ರಮೆಯನ್ನೂ ಹರಿಸಿದಂತೆ ಕಾಣುತ್ತದೆ.

ಒಬ್ಬ ಯುವತಿಗೆ ಮಾನಭಂಗದ ಬೆದರಿ–ಕೆ ಒಡ್ಡಿದಾಗಲೂ ಆ ಬಗ್ಗೆ ತುಟಿಪಿಟಕ್ಕೆನ್ನದೆ ಆಕೆಯನ್ನು ಅಪಹಾಸ್ಯ ಮಾಡುವ ಮಟ್ಟಕ್ಕೆ ಕೇಂದ್ರದ ಜವಾಬ್ದಾರಿಯುತ ಮಂತ್ರಿಗಳು ಮತ್ತು ಕರ್ನಾಟಕದ ಒಬ್ಬ ಎಂಪಿ ಮಹಾಶಯ ಇಳಿದದ್ದು ಅವರೇ ಈ 'ಸಂಸ್ಕೃತಿ'ಯ ಪ್ರತಿಪಾದಕರು ಎಂಬುದನ್ನು ಸಾಬೀತು ಮಾಡಿದೆ ಎಂಬ ಭಾವನೆ ಉಂಟಾಗುವಂತೆ ಮಾಡಿದ್ದರೆ ಆಶ್ಚರ್ಯವೇನು?


ಸ್ವತಃ ಕಾರ್ಗಿಲ್ ಕಾಳಗದಲ್ಲಿ ಹುತಾತ್ಮರಾದ ಸೈನ್ಯಾಧಿಕಾರಿಯ ಮಗಳಾದ ಗುರ್‌ಮೆಹರ್ ಕೌರ್ ಒಂದು ವರ್ಷದ ಹಿಂದೆ ಭಾರತ–ಪಾಕಿಸ್ತಾನದ ನಡುವೆ ವೈಷಮ್ಯ ಬೇಡ, ಮೈತ್ರಿ ಬೆಳೆಯಲಿ ಎಂದು ಸಾಮಾಜಿಕ ಮಾಧಯಮದಲ್ಲಿ ಅಪ್‌ಲೋಡ್‌ಮಾಡಿದ ವೀಡಿಯೋವನ್ನು ಈಗ ಬಳಸಿರುವುದು ಈ ಪಡೆಗಳ ನಿಜ ಚಾರಿತ್ರ್ಯವನ್ನು ಎತ್ತಿ ತೋರಿದೆ ಎಂಬದೀಗ ಸಾಮಾನ್ಯವಾಗಿ ಎಲ್ಲರೂ ಸ್ವೀಕರಿಸಿರುವ ವಿಶ್ಲೇಷಣೆ.



(ಈ ವಿಡಿಯೋದ ಪೂರ್ಣ ಪಾಟವನ್ನು ಈ ಸಂಚಿ–ಕೆಯ ಪುಟ 7ರಲ್ಲಿ ನೋಡಿ)

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಈ ಗಂಭೀರ ವಿಡಿಯೋ ಸರಣಿಯಲ್ಲಿ ಈ 'ಪರಿವಾರದ' ಮಂದಿಗೆ ಕಾಣಿಸುವುದು "ನನ್ನ ತಂದೆಯನ್ನು ಕೊಂದದ್ದು ಪಾಕಿಸ್ತಾನ ಅಲ್ಲ,, ಯುದ್ಧ ಅವರನ್ನು ಕೊಂದದ್ದು" ಎಂಬ ವಾಕ್ಯ ಮಾತ್ರ. ಇದು ಅವರ 'ರಾಷ್ಟ್ರಪ್ರೇಮ'ದ ನಿರೂಪಣೆಯ ಪ್ರಕಾರ ಮಹಾಪರಾಧ ತಾನೇ?

ಕೇಂದ್ರ ಗೃಹ ರಾಜ್ಯಮಂತ್ರಿ ಯಾರು ಈ ಹುಡುಗಿಯ ತಲೆ ಕೆಡಿಸಿರುವವರು ಎಂದು ಪ್ರತಿಕ್ರಿಯಿಸಿದರು. ಪ್ರಖ್ಯಾತ ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್ "ಎರಡು ಟ್ರಿಪಲ್ ಸೆಂಚುರಿ ಹೊಡದದ್ದು ನಾನಲ್ಲ, ನನ್ನ ಬ್ಯಾಟ್" ಎಂದು ಅಪಹಾಸ್ಯ ಮಾಡಿ ತಮ್ಮ ಜಾಣ್ಮೆ ಮೆರೆದರು. ಬಾಲಿವುಡ್ ನಟನೊಬ್ಬ "ಈ ಬಡಹುಡುಗಿ ದಾಳವಾಗಿದ್ದಾಳೆ' ಎಂದು ತನ್ನ ರಾಜಕೀಯ ಜ್ಞಾನ ಪ್ರದರ್ಶಿಸಿದರು. ನಮ್ಮ ರಾಜ್ಯದ ಎಂಪಿಯಂತೂ ಆಕೆಯನ್ನು ದಾವೂದ್ ಇಬ್ರಾಹಿಂನೊಂದಿಗೆ ಹೋಲಿಸಿ ಸಂಭ್ರಮಿಸಿದ್ದಾರೆ.



ವ್ಯಂಗ್ಯ ಚಿತ್ರ: ಸುರೇಂದ್ರನ್, ದಿ ಹಿಂದು

ನಮ್ಮ ದೇಶ ಇಂತಹ ಮಟ್ಟಕ್ಕೆ ಬಂದಿದೆಯೇ ಎಂದು ಎನ್‌ಡಿಟಿವಿಯ ಕಾರ್ಯಕಾರಿ ಸಂಪಾದಕಿ ಮತ್ತು ಒಂದು ಪ್ರಮುಖ ಕಾರ್ಯಕ್ರಮವನ್ನು ನಡೆಸಿ ಕೊಡುತ್ತಿರುವ ಪ್ರಖ್ಯಾತ ಪತ್ರಕರ್ತೆ ನಿಧಿ ರಜ್ದಾನ್ ಬೇಸರದಿಂದ ಹೇಳುತ್ತಾರೆ. ಒಬ್ಬ 20ವರ್ಷದ ಹುಡುಗಿಯ ಅಭಿಪ್ರಾಯ ಆಕೆಯ ಇಮ್ಮಡಿಗಿಂತಲೂ ಹೆಚ್ಚು ವಯಸ್ಸಾಗಿರುವ ಈ ಪುರುಷರನ್ನು ಇಷ್ಟೊಂದು ಅಲುಗಾಡಿಸಿದೆಯೇ, ಒಂದು ಕಾಲೇಜು ಹುಡುಗಿಯ ಅಭಿಪ್ರಾಯದ ಮೇಲೆ ದ್ವೇಷದ ಸುರಿಮಳೆ ಸುರಿಸಬೇಕಾಗಿರುವಷ್ಟು ಭಾರತ ನಾಜೂಕು ಸ್ಥಿತಿಯಲ್ಲಿದೆಯೇ ಎಂದು ಪ್ರಶ್ನಿಸಿರುವ ಅವರು ಈ ಇಡೀ ಚರ್ಚೆ ಭಾರತೀಯ ಪುರುಷನ ಮನೋಭಾವದ ಬಗ್ಗೆ ಬಹಳಷ್ಟು ಹೇಳುತ್ತದೆ ಎನ್ನುತ್ತಾರೆ.

ಪುಟ 15 ನೋಡಿ





ಹರತಾಳದ ಮಧ್ಯೆ ಪಿಣರಾಯಿ ಆಗಮನ ಭದ್ರಕೋಟೆಯಲ್ಲೇ ಆರೆಸ್ಸೆಸ್ಸಿಗೆ ಸವಾಲು

ವಾಸುದೇವ ಉಚ್ಚಿಲ

ಕರಾವಳಿ ಸೌಹಾರ್ದ ರ್‍ಯಾಲಿಗೆಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಫೆಬ್ರವರಿ 25 ರಂದು ಮಂಗಳೂರಿಗೆ ಭೇಟಿ ನೀಡಿ ರ್‍ಯಾಲಿಯಲ್ಲಿ ಮಾತನಾಡಿದಾಗ ಮಂಗಳೂರಿನಲ್ಲಿ ಸಾಮಾನ್ಯ ಜನಜೀವನ ಅಸ್ಯವ್ಯಸ್ತಗೊಂಡಿತ್ತು.

ಪಿಣರಾಯಿ ವಿಜಯನ್ ತಮ್ಮ ರಾಜ್ಯದಲ್ಲಿ ತಮ್ಮ ಚಟುವಟಿಕೆಗಳಿಗೆ ತಡೆಯೊಡ್ಡುವಂತೆ ಹಿಂಸೆಯನ್ನು ಪ್ರಚೋದಿಸುತ್ತಿದ್ದಾರೆ ಎಂದು ಆರೋಪಿಸಿ, ಆರೆಸ್ಸೆಸ್ ಮತ್ತು ಅದರ ಪರಿವಾರ ಸಂಘಟನೆಗಳಾದ ವಿಶ್ವಹಿಂದೂ ಪರಿಷತ್ತು, ಹಿಂದೂ ಜಾಗರಣಾ ವೇದಿಕೆ, ಭಜರಂಗದಳ ಮತ್ತು ಭಾರತೀಯ ಜನತಾಪಕ್ಷ ಅವರು ಮಂಗಳೂರಿಗೆ ಭೇಟಿ ನೀಡುವ ಫೆಬ್ರವರಿ 25 ರಂದು ದ.ಕ.ಜಿಲ್ಲಾದ್ಯಂತ ಹರತಾಳಕ್ಕೆ ಕರೆ ನೀಡಿತ್ತು. ದ.ಕ.ಜಿಲ್ಲೆಯು ಸಂಘಪರಿವಾರದ ಭದ್ರಕೋಟೆಯಾಗಿರುವುದರಿಂದ ತಮ್ಮ ಹರತಾಳ ಕರೆಯಿಂದಾಗಿ ಸೌಹಾರ್ದ ರ್‍ಯಾಲಿಯು ಸಂಪೂರ್ಣ ಸೋಲಪ್ಪುವುದೆಂದು ಅವು ನಿರೀಕ್ಷಿಸಿದ್ದವು. ತಮ್ಮ ಬೆದರಿಕೆ ಮತ್ತು ನಿರ್ದೇಶನಗಳಿಗೆ ಜಿಲ್ಲೆಯ ಬಸ್ಸು ಮಾಲೀಕರು ಮತ್ತು ಅಂಗಡಿ ವ್ಯಾಪಾರಿಗಳು ಬಗ್ಗಿ ನಡೆಯುವರೆಂದು ಅವರಿಗೆ ಗೊತ್ತಿತ್ತು. ಹಾಗಿದ್ದರೂ ಕರಾವಳಿ ಜಿಲ್ಲೆಗಳ ಜನತೆ ಹಾಗೂ ಸಿಪಿಐ(ಎಂ) ಕಾರ್ಯಕರ್ತರು ಅದಕ್ಕೆ ದಿಟ್ಟ ಉತ್ತರ ನೀಡಿ, ರ್‍ಯಾಲಿಯನ್ನು ಯಶಸ್ವಿಗೊಳಿಸಿಯೇ ತೀರುತ್ತೇವೆ ಎಂದು ನಿರ್ಧರಿಸಿದ್ದರು. ರಾಜ್ಯದ ಗೃಹ ಇಲಾಖೆಯ ಬೆಂಬಲವನ್ನು ಖಾತ್ರಿಪಪಡಿಸಿ, ಪಕ್ಷದ ಕಾರ್ಯಕರ್ತರು 30 ಬಸ್ಸುಗಳಲ್ಲದೆ ಇನ್ನೂ ಇತರ ಸಾರಿಗೆ ವಾಹನಗಳನ್ನು ಸಜ್ಜುಗೊಳಿಸಲು ಸಾಧ್ಯವಾಯಿತು. ಮಂಗಳೂರಿನ ಸುತ್ತಮುತ್ತಲಿನ ಕಾರ್ಯಕರ್ತರು ಅಂತೆ-ಯೇ ಜನತೆ, ನಡೆದು ಬಂದೇ ಮೆರವಣಿಗೆಯನ್ನು ಸೇರಿಕೊಳ್ಳುವುದೆಂದು ತೀರ್ಮಾನಿಸಿದ್ದರು. ಅದರಲ್ಲೂ ಫೆಬ್ರವರಿ 23ರ ಮುಂಜಾನೆ ತೊಕ್ಕೊಟ್ಟಿನಲ್ಲಿರುವ ಸಿಪಿಐ(ಎಂ) ಉಳ್ಳಾಲ ವಲಯ ಕಚೇರಿಗೆ ಸಂಘಪರಿವಾರ ಪ್ರಚೋದಿತ ದುಷ್ಕರ್ಮಿಗಳು ನುಗ್ಗಿ ಬ್ಯಾನ್ನರು, ಪೋಸ್ಟರು, ಪೀಠೋಪಕರಣಗಳಿಗೆ ಬೆಂಕಿ ಹಚ್ಚಿದ ವೃತ್ತಾಂತ ಕೇಳಿದ ಮೇಲಂತೂ, ಅವರ ನಿರ್ಧಾರ ಇನ್ನಷ್ಟು ದೃಢವಾಯಿತು. ರ್‍ಯಾಲಿಯ ದಿನ "ಜಿಲ್ಲಾ ಹರತಾಳ'ಕ್ಕೆ ಸಂಘ ಪರಿವಾರ ಕರೆ ನೀಡಿದುದರಿಂದ ತೊಕ್ಕೊಟಿನ ಕಿಚ್ಚು ಹಚ್ಚುವ ಘಟನೆಗಳು ಜನತೆಯಲ್ಲಿ 'ಭೀತಿ ಮನೋಭಾವ' ಹುಟ್ಟಿಸಲು ಅದು ಕೈಗೊಂಡ ಕೃತ್ಯ ಎಂಬುದು ಸ್ಪಷ್ಟವಾಯಿತು.

ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಈ ದುಷ್ಕೃತ್ಯವನ್ನು ಖಂಡಿಸಿದರಲ್ಲದೆ, ಈ ಕೃತ್ಯದ ಹಿಂದೆ ಸಂಘ ಪರಿವಾರ ಇದೆ ಎಂದು ಆರೋಪಿಸಿದರು. ಈ ಬಗ್ಗೆ ಪೋಲೀಸ್ ಠಾಣೆಯಲ್ಲೂ ದೂರು ನೀಡಲಾಗಿದೆ.

ಸೌಹಾರ್ದ ರ್‍ಯಾಲಿಗೆ ಅನಿರೀಕ್ಷಿತ ಬೆಂಬಲ:

ಈ ರ್‍ಯಾಲಿಯಲ್ಲಿ ಸರಿಸುಮಾರು 10 ಸಾವಿರಕ್ಕೂ ಹೆಚ್ಚು ಜನ ಒಗ್ಗೂಡಿದ್ದರು. ಇತ್ತೀಚೆಗಿನ ವರ್ಷಗಳಲ್ಲಿ ಮಂಗಳೂರಿನಲ್ಲಿ ನಡೆದ ಸಿಪಿಐ(ಎಂ) ರ್‍ಯಾಲಿಗಳಲ್ಲಿ ಇಷ್ಟೊಂದು ಜನ ಸೇರಿರಲಿಲ್ಲ ಮತ್ತು ಈ ಜನಭಾಗಿತ್ವ ಅನಿರೀಕ್ಷಿತವಾಗಿತ್ತು ಕೂಡಾ. ಸಾಮಾನ್ಯವಾಗಿ ಕಮ್ಯೂನಿಸ್ಟರ ಸಭೆ ರ್‍ಯಾಲಿಗಳಿಂದ ದೂರವಿರುವ ಜನ, ವಿಶೇಷವಾಗಿ ಮುಸ್ಲಿಮರು ಹೆಚ್ಚಿಗೆ ಒಳಗೊಂಡ ಅಲ್ಪಸಂಖ್ಯಾತ ಜನ, ತಮ್ಮ ಯುವವಯಸ್ಸಿನಲ್ಲಿ ಎಡಸಂಘಟನೆಗಳಲ್ಲಿದ್ದು, ಈಚೆಗಿನ ವರ್ಷಗಳಲ್ಲಿ ಎಡಪಂಥೀಯರ ಸಭೆಗಳೆಡೆಗೆ ಇಣುಕಿನೋಡದೆ ದೂರವಿರುವ ಮಧ್ಯಪ್ರಾಯದ ಜನ-ಹೀಗೆ ಹಲವು ಬಗೆಯ ಜನತೆ ರ್‍ಯಾಲಿ ಹಾಗೂ ಬಹಿರಂಗ ಸಭೆಯಲ್ಲಿ ಭಾಗವಹಿಸಿದ್ದರು. ಬೆಂಗಳೂರು, ಚಿಕ್ಕಬಳ್ಳಾಪುರ, ಕೋಲಾರ, ಚಿಕ್ಕಮಗಳೂರು, ಬಳ್ಳಾರಿ, ಧಾರವಾಡ ಜಿಲ್ಲೆಗಳಿಂದಲೂ ನೂರಾರು ಪಕ್ಷದ ಕಾರ್ಯಕರ್ತರು ಬೆಳಿಗ್ಗೆಯೇ ಮಂಗಳೂರು ತಲುಪಿ ಮಂಗಳೂರಿನ ನೆಹರೂ ಮೈದಾನದಲ್ಲಿ ಸಾರ್ವಜನಿಕ ಸಭೆಗಾಗಿ ಹಾಕಲಾಗಿದ್ದ ಪೆಂಡಾಲಿನಲ್ಲಿ ಆಶ್ರಯ ಪಡೆದಿದ್ದರು. ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ಉಡುಪಿ, ದ.ಕ. ಮತ್ತು ಕೇರಳದ ಕಾಸರಗೋಡು ಜಿಲ್ಲೆಗಳಿಂದ ಜನ ಹೇಗೂ ಸಾವಿರ ಸಂಖ್ಯೆಯಲ್ಲಿ ಬಂದಿದ್ದರಷ್ಟೆ. ಕಾರ್ಯಕರ್ತರೊಂದಿಗೆ ಜನತೆಯೂ ದುಷ್ಕರ್ಮಿಗಳಿಗೆ ಸವಾಲು ಒಡ್ಡಲು ಮುಂದಾಗಿದ್ದುದು ಕಂಡು ಬಂತು.

ಹಿಂದೂತ್ವ ಸಂಘಟನೆಗಳಿಗೆ ಇದು ತಕ್ಕ ಪ್ರತ್ಯುತ್ತರವಾಗಿತ್ತು. ಸಂಘಪರಿವಾರವು ದ.ಕ.ಜಿಲ್ಲೆಯಲ್ಲಿ ಖಾಸಗಿ ಬಸ್ಸು ಸಂಚಾರವನ್ನು ನಿಲ್ಲಿಸಲು ಸಮರ್ಥವಾಯಿತು. ಜಿಲ್ಲೆಯ ಪಟ್ಟಣಗಳಲ್ಲೂ ಹೆಚ್ಚಿನ ಅಂಗಡಿ ಮುಗ್ಗಟ್ಟುಗಳು ಮುಚ್ಚಲ್ಪಟ್ಟಿದ್ದುವು. ಸರಕಾರಿ ಬಸ್ಸುಗಳು ರಸ್ತೆಯಲ್ಲಿ ಸಂಚರಿಸಲು ಜಿಲ್ಲಾಡಳಿತ ತನ್ನೆಲ್ಲಾ ಪ್ರಯತ್ನಗಳನ್ನು ಮಾಡಿತ್ತು. ರ್‍ಯಾಲಿಯು ನಿರಾಳವಾಗಿ ನಡೆಯಲು ಬೇಕಾದ ಭದ್ರತಾ ವ್ಯವಸ್ಥೆಗಳನ್ನು ಮಾಡುವ ಬಗ್ಗೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿಯವರು ಮುಖ್ಯಮಂತ್ರಿ, ಗೃಹಮಂತ್ರಿ ಮತ್ತು ದ.ಕ.ಜಿಲ್ಲಾ ಉಸ್ತುವಾರಿ ಮಂತ್ರಿಗಳ ಮೇಲೆ ಸಂಪೂರ್ಣ ಒತ್ತಡ ಹಾಕಿದ್ದರು.

ಹರತಾಳದ ತಮ್ಮ ಅಜೆಂಡಾವನ್ನು ಜಾರಿಗೊಳಿಸುವಲ್ಲಿ ಸಂಘಪರಿವಾರವು ಯಶಸ್ವಿಯಾದರೂ, ಅವರು ಸೌಹಾರ್ದ ರ್‍ಯಾಲಿಯಾಗುವುದನ್ನು ತಡೆಯುವುದರಲ್ಲಿ ವಿಫಲರಾದರು. ಅಲ್ಲದೆ ಅವರ ಗುರಿಯಾಗಿದ್ದ ಪಿಣರಾಯಿ ವಿಜಯನ್ ಆಗಮನವನ್ನು ತಡೆಯುವಲ್ಲಿ ಸೋಲುಂಡರು.

ಮಂಗಳೂರಿನ ನೆಹರೂ ಮೈದಾನಿನ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಪಿಣರಾಯಿ ವಿಜಯನ್ ಒಂದು ಗಂಟೆ ಮಾತನಾಡಿದರು. ಸಿಪಿಐ(ಎಂ) ರಾಜ್ಯ ಸಮಿತಿಯ ಹಿರಿಯ ಮುಖಂಡರಾದ ವಿ.ಜೆ.ಕೆ.ನಾಯರ್ ಅವರು ವಿಜಯನ್ ಮಾತುಗಳನ್ನು ಭಾಷಾಂತರಿಸಿದರು. ಬಳಿಕ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಭಾಷಣ ಮಾಡಿದರು. (ಈ ಎರಡೂ ಭಾಷಣಗಳ ಪಠ್ಯ ಇದೇ ಸಂಚಿಕೆಯಲ್ಲಿ ಬೇರೆಡೆ ಇದೆ.) ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಲಿ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಮಂಡಲಿ ಸದಸ್ಯರಾದ ಜಿ.ಎನ್.ನಾಗರಾಜ್, ನಿತ್ಯಾನಂದ ಸ್ವಾಮಿ, ಕೆ.ಶಂಕರ್, ಯು.ಬಸವರಾಜ್, ಎಸ್. ವರಲಕ್ಷ್ಮಿ, ಕರಾವಳಿ ಜಿಲ್ಲೆಗಳ ಸಿಪಿಐ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿಗಳು, ಕಾಸರಗೋಡು ಜಿಲ್ಲೆಯ ಸಿಪಿಐ(ಎಂ) ಮುಖಂಡರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ ಸ್ವಾಗತಿಸಿದರು. ರಾಜ್ಯ ಸಮಿತಿ ಸದಸ್ಯ ಯಾದವ ಶೆಟ್ಟಿ ವಂದಿಸಿದರು.

ಕರಾವಳಿ ಸೌಹಾರ್ದ ರ್‍ಯಾಲಿಯ ಅನಿರೀಕ್ಷಿತ ಯಶಸ್ಸಿನಿಂದ ಪಕ್ಷದ ಕಾರ್ಯಕರ್ತರು ರೋಮಾಂಚಿತರಾಗಿದ್ದು, ಮುಂದೆಯೂ ಕೋಮುಶಕ್ತಿಗಳ ಅಬ್ಬರವನ್ನು ಎದುರಿಸುವ ಆತ್ಮವಿಶ್ವಾಸವನ್ನು ವ್ಯಕ್ತಪಡಿಸುತ್ತಿದ್ದಾರೆ. •





ಸೌಹಾರ್ದ ರ್‍ಯಾಲಿಗೆ ದುಡಿದ ಕೆಲವರ ಅನಿಸಿಕೆಗಳು

ಸೌಹಾರ್ದ ರ್‍ಯಾಲಿಯ ಗೆಲುವು ಕೋಮುವಾದ ವಿರೋಧಿ ಹೋರಾಟದ ಒಂದು ನಿರ್ಣಾಯಕ ತಿರುವು. ಕರಾವಳಿ ಇತಿಹಾಸದ ಹೆಗ್ಗುರುತುಗಳಲ್ಲಿ ಒಂದು. ಪರ್ಯಾಯ ಸರಕಾರ ಪೆಟ್ರೋಲ್, ಬೆಂಕಿ ಹಿಡಿದು ನಿಂತು ಅಬ್ಬರಿಸುತ್ತಿದ್ದಾಗಲೂ ನಿರ್ಜನ ಬೀದಿಗಳಿಂದ ಒಬ್ಬಬ್ಬರಾಗಿಯೇ ಎದ್ದು ಬಂದು ಜನಸಾಗರವಾದ ಅವಿಭಜಿತ ಜಿಲ್ಲೆಯ ಜನ ಅಧ್ಭುತವಾದದ್ದನ್ನು ಸಾಧಿಸಿದ್ದಾರೆ. ಇದು ಮುಂದಕ್ಕೆ ನಡೆಯಲು ಹೆಬ್ಬಾಗಿಲನ್ನು ತೆರೆದುಕೊಟ್ಟಿದೆ. ಇದು ಅಂತಿಮವಾಗಿ ಕೇವಲ ಸಿಪಿಐ(ಎಂ) ಕಾರ್ಯಕ್ರಮವಾಗಿ ಉಳಿಯಲಿಲ್ಲ. ಇಲ್ಲಿ ಪಿಣರಾಯಿ ವಿಜಯನ್ ಆಗಮನ ಒಂದು ನೆಪವಷ್ಟೆ. ಇದು ಇಲ್ಲಿನ ಜನಸಾಮಾನ್ಯರ ಎದೆಯೊಳಗೆ ಬಹುಕಾಲದಿಂದ ಮಡುಗಟ್ಟಿದ್ದ ಭಾವನೆಗಳ ಅಭಿವ್ಯಕ್ತಿ. ಸಮಾವೇಶ, ಮೆರವಣಿಗೆಯಲ್ಲಿ ಜನ ಪಕ್ಷಾತೀತವಾಗಿ ಪಾಲ್ಗೊಂಡಿದ್ದಾರೆ.

ಕಾಂಗ್ರೆಸ್, ಜೆಡಿಎಸ್ ಮುಖಂಡರು, ಸದಸ್ಯರು ಜನರ ನಡುವೆ ಕೂತು ಸಾಲಿಡಾರಿಟಿ ವ್ಯಕ್ತಪಡಿಸಿದ್ದಾರೆ. ನಮ್ಮ ಜೊತೆ ಸದಾ ಇರುವ ದಲಿತ, ಪ್ರಗತಿಪರ ಸಂಘಟನೆಯವರು ಎಂದಿನಂತೆ ಜೊತೆನಿಂತರು. ಅಲ್ಪಸಂಖ್ಯಾತ ಸಮುದಾಯದ ಲಿಬರಲ್ ಸಂಘಟನೆಗಳ ಪ್ರಮುಖರು ಜೊತೆಗೆ ಹೆಜ್ಜೆ ಹಾಕಿದರು. ಒಟ್ಟು ಭಾಗವಹಿಸುವಿಕೆಯಲ್ಲಿ ದ ಕ, ಉಡುಪಿಯವರೇ ಶೇಕಡಾ ಎಂಬತ್ತೈದರಷ್ಟು ಇದ್ದರು ಎಂಬುದು ಇದರ ಮಹತ್ವವನ್ನು ಎತ್ತಿಹಿಡಿಯುತ್ತದೆ.

ಒಟ್ಟಾರೆ ಇಂತಹಾ ಒಂದು ಮಹಾನ್ ಯಶಸ್ಸಿಗೆ ಇವರೆಲ್ಲರೂ ಕಾರಣಕರ್ತರು. ಇದು ಇವರೆಲ್ಲರ ಸಂಘಟಿತ ಯಶಸ್ಸು. ನಿಜ ಅರ್ಥದ ಐಕ್ಯತಾ ಸಮಾವೇಶ. ಇಂತಹ ಒಂದು ನಿರ್ಣಾಯಕ ಘಟ್ಟದ ಮಹತ್ವವನ್ನು ಅರ್ಥ ಮಾಡಿಕೊಂಡು ಯಾವ ಅಂಜಿಕೆ, ಮುಜುಗರ ಇಲ್ಲದೆ ಜೊತೆ ನಿಂತ ಇವರೆಲ್ಲರಿಗೂ ಅನಂತ ದನ್ಯವಾದಗಳು. ಮುಂದಕ್ಕೂ ಈ ಐಕ್ಯತೆಯೊಂದಿಗೆ ಮುನ್ನಡೆಯುವ.

– **ಮುನೀರ್ ಕಾಟಿಪಳ್ಳ**

ಕರಾವಳಿ ಜಿಲ್ಲೆಗಳಲ್ಲಿ ಸೌಹಾರ್ದತೆಯನ್ನು
ಮರು ಸ್ಥಾಪಿಸಲು ಹಮ್ಮಿಕೊಂಡ
ಕರಾವಳಿ ಸೌಹಾರ್ದ ರ್‍ಯಾಲಿಗೆ
ಹಲವಾರು ಅಡೆತಡೆಗಳು ಬಂದರೂ,
ವಿಕೃತ ಮನಸ್ಸುಗಳು ತೊಂದರೆಗಳನ್ನು
ನೀಡಿದರೂ ಎದೆಗುಂದದ
ಸೌಹಾರ್ದಪ್ರಿಯ ಮನಸ್ಸುಗಳು ಛಲ
ಬಿಡದೆ ನಿರಂತರವಾಗಿ ಶ್ರಮ ವಹಿಸಿದ
ಫಲವಾಗಿ ರ್‍ಯಾಲಿ ಯಶಸ್ವಿ ಕಂಡಿತು..
ಸೌಹಾರ್ದ ಮನಸ್ಸುಗಳು ಒಂದಾದವು...
ಯಾವತ್ತೂ ಭಯ, ಅಭದ್ರತೆ ಕಾಡುವ
ಮಂಗಳೂರಿನಲ್ಲಿ ಸೌಹಾರ್ದತೆಯ
ಬೆಳಕೊಂದು ಮೂಡಿದೆ...

– **ಸುನೀಲ್ ಕುಮಾರ್ ಬಜಾಲ್**

ಕಾ। ಪಿಣರಾಯಿ ವಿಜಯನ್ ಮಂಗಳೂರಿನ ಸೌಹಾರ್ದ ರ್‍ಯಾಲಿಯಲ್ಲಿ ಫೆಬ್ರುವರಿ 25, 2017 ರಂದು ಮಾಡಿದ ಭಾಷಣದ ಕನ್ನಡ ಅನುವಾದ

ಅನುವಾದ : ಬಿ.ಎಂ. ಮಾಧವ



ಆರೆಸ್ಸೆಸ್ ನ ಲಾಠಿ, ಖಡ್ಗಗಳ ಝಳಪಿಸುವಿಕೆಯ ಮಧ್ಯದಲ್ಲೇ ಓಡಾಡಿದ್ದೇನೆ

ಆಗ ನನಗೆ ಏನೂ ಮಾಡಲಾಗದವರು ಈಗೇನು ಮಾಡುತ್ತೀರಿ?: ಪಿಣರಾಯಿ

ಸಂಗಾತಿಗಳೇ ಹಾಗೂ ಪ್ರೀತಿಯ ಸಹೋದರ, ಸಹೋದರಿಯರೇ,

ಮಂಗಳೂರಿನಲ್ಲಿ ನಡೆದ ಈ ಐತಿಹಾಸಿಕ ಸೌಹಾರ್ದ ರ್‍ಯಾಲಿಗೆ ಬಂದು ಭಾಗವಹಿಸಲು ನನಗೆ ಸಂತೋಷವಾಗುತ್ತದೆ.

ದೇಶದಲ್ಲಿ, ರಾಜ್ಯಗಳಲ್ಲಿ ಮತೀಯ ಸೌಹಾರ್ದತೆಯನ್ನು ರಕ್ಷಿಸಬೇಕಾಗಿದೆ. ದೇಶದ ವಿವಿದ ಭಾಗಗಳಲ್ಲಿ ಈ ಸೌಹಾರ್ದತೆಗೆ ಅಪಾಯ ಸಂಭವಿಸಿದೆ ಹಾಗೂ ಜನತೆಯ ಐಕ್ಯತೆಯನ್ನು ನಾಶಮಾಡುವ ಪ್ರಕರಣಗಳು ತಲೆ ಎತ್ತುತ್ತಿವೆ.. ಈ ಐಕ್ಯತೆಯನ್ನು ಒಡೆಯುವ ಶಕ್ತಿಗಳೇ ಇಂದು ಕೇಂದ್ರದಲ್ಲಿ ಅಧಿಕಾರ ಚಲಾಯಿಸುತಿವೆ. ಸೌಹಾರ್ಧತೆಯನ್ನು, ಐಕ್ಯತೆಯನ್ನು ಬಯಸದೇ ಇರುವ ಶಕ್ತಿಗಳೇ ಇಂದು ಕೇಂದ್ರದಲ್ಲಿ ಅಧಿಕಾರವನ್ನು ಚಲಾಯಿಸಲು ನಿರ್ದೇಶನ ನೀಡುತ್ತಿವೆ. ಈ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರೆಸ್ಸೆಸ್) ಯಾವತ್ತೂ ಸಮಾಜದಲ್ಲಿ ಸಾಮರಸ್ಯವನ್ನು ಬಯಸುವವರಲ್ಲ. ಬದಲಾಗಿ ಜನಗಳ ಮಧ್ಯೆ ಬಿರುಕು ಸೃಷ್ಟಿಸಿ. ಸಮಾಜವನ್ನು ಒಡೆದು ತಮ್ಮ ಮತೀಯ ದ್ವೇಷವನ್ನು ಸಾಧಿಸಲು ಇರುವ ಸಂಘಟನೆ. ಈ ಆರೆಸ್ಸೆಸ್ ಸಂಘಟನೆಯ ಆದೇಶವನ್ನೇ ಸರಕಾರ ಪಾಲಿಸುತ್ತಿರುವುದು ನಾವು ನೋಡುತ್ತಿದ್ದೇವೆ.

1925 ರಲ್ಲಿ ಆರೆಸ್ಸೆಸ್ ಸಂಘಟನೆ ಹುಟ್ಟಿದೆ. ಭಾರತದ ಸ್ವಾತಂತ್ರ್ಯ ಚಳುವಳಿ ನಡೆಯುತ್ತಿರುವ ಸಂದರ್ಭದಲ್ಲೂ ಆರ್‌ಎಸ್‌ಎಸ್ ಸಂಘಟನೆ ದೇಶದಲ್ಲಿ ಕೆಲಸ ಮಾಡುತ್ತಿತ್ತು. ನಂತರದ 22 ವರ್ಷಗಳಲ್ಲಿ ದೇಶದ ಸ್ವಾತಂತ್ರ್ಯ ಹೋರಾಟ ಬಹಳ ತೀವ್ರವಾಗಿರುವ ಸಂದರ್ಭದಲ್ಲೂ ಈ ಆರೆಸ್ಸೆಸ್ ಸಂಘಟನೆ ಸ್ವಾತಂತ್ರ್ಯ ಹೋರಾಟದಲ್ಲಿ ಯಾವುದೇ ಪಾತ್ರವನ್ನು ವಹಿಸಲಿಲ್ಲ.

ಆರೆಸ್ಸೆಸ್ ಸಂಘಟನೆ ಸ್ವಾತಂತ್ರ್ಯ ಹೋರಾಟಗಳಲ್ಲಿ ಯಾವ ಪಾತ್ರ ವಹಿಸದಿದ್ದರೂ, ಅವರು ಅವರದೇ ಪಾತ್ರವನ್ನು ನೆರವೇರಿಸಿರುತ್ತಾರೆ. ಸ್ವಾತಂತ್ರ್ಯ ಹೋರಾಟಗಳಲ್ಲಿ ಬ್ರಿಟಿಷರು ಭಾರತ ಬಿಟ್ಟು ಹೋಗಿ ಎಂಬ ಘೋಷಣೆ ಎಲ್ಲಾ ಸಂಘಟನೆಗಳಿಂದಲೂ ಬಂದ ಸಮಯ. ಕೆಲವು ವಿಷಯಗಳಲ್ಲಿ ಕೆಲವೊಂದು ಭಿನ್ನಾಭಿಪ್ರಾಯಗಳಿದ್ದರೂ ಎಲ್ಲರ ಅಂತಿಮ ಗುರಿ ಸ್ವಾತಂತ್ರ್ಯ ಪಡೆಯುವುದಾಗಿತ್ತು.

ಈ ಸಂದರ್ಭದಲ್ಲಿ ಆರೆಸ್ಸೆಸ್ ನವರು ಬ್ರಿಟಿಷರು ಭಾರತದಿಂದ ತೊಲಗಬೇಕೆಂಬ ಘೋಷಣೆ ಮಾಡಲು ತಯಾರಾಗಲಿಲ್ಲ. ಬದಲಾಗಿ ಬ್ರಿಟಿಷರಿಗೆ ಸಹಕರಿಸುವ ಕೆಲಸವನ್ನು ಮಾಡಿದರು. ಆರೆಸ್ಸೆಸ್ ನ ಮುಖಂಡರಾದ ಸಾರ್ವಕರ್ ಬ್ರಿಟಿಷ್ ವೈಸ್‌ರ್‍ಯಾಯ್‌ರನ್ನು ಭೇಟಿ ಮಾಡಿ ತಮ್ಮಲ್ಲಿ ನಮಗೆ ಬಹಳ ಹೊಂದಾಣಿಕೆ ಇದೆ. ನಮ್ಮಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಬ್ರಿಟಿಷರ ಆಳ್ವಿಕೆಗೆ ತಮ್ಮ ವಿರೋಧವಿಲ್ಲ ಎಂಬ ಆರೆಸ್ಸೆಸ್ ನ ನಿಲುವನ್ನು ಪ್ರಕಟಿಸಿದರು. ಈ ರೀತಿಯಲ್ಲಿ ದೇಶಕ್ಕೆ ಮೋಸ ಮಾಡಿದ ಸಂಘಟನೆ ಆರೆಸ್ಸೆಸ್. ನಮ್ಮ ದೇಶವನ್ನು, ನಮ್ಮ ಜನರನ್ನು ಒಂದಾಗಿ ಕಾಣಲು ಆರೆಸ್ಸೆಸ್ ತಯಾರಾಗಲಿಲ್ಲ. ಅವರನ್ನು ಜಾತಿಗಳ, ಧರ್ಮಗಳ ಹೆಸರಲ್ಲಿ ವಿಭಜನೆ ಮಾಡಬೇಕೆಂಬುದೇ ಆರೆಸ್ಸೆಸ್ ನ ತಂತ್ರವಾಗಿತ್ತು. ಅದರ ಭಾಗವಾಗಿ ದೇಶದ ವಿವಿಧ ಭಾಗಗಳಲ್ಲಿ ಜರುಗಿದ ಎಲ್ಲಾ ಮತೀಯ ಗಲಭೆಗಳ ನೇತೃತ್ವವನ್ನು ವಹಿಸಿದ್ದು ಆರೆಸ್ಸೆಸ್. ಜನರ ಐಕ್ಯತೆಯನ್ನೂ ಸಾಮಾಜಿಕ ಸಾಮರಸ್ಯವನ್ನು ಆರೆಸ್ಸೆಸ್ ಎಂದೂ ಬಯಸಲಿಲ್ಲ.

ರಾಷ್ಟ್ರಪಿತ ಮಹಾತ್ಮಾಗಾಂಧಿಯನ್ನು ಯಾಕಾಗಿ ಕೊಂದರು ಎಂಬ ಪ್ರಶ್ನೆ ನಮ್ಮ ಮುಂದಿದೆ. ಗಾಂಧೀಜಿಯವರು ಯಾರಿಗೂ ಅನ್ಯಾಯ ಮಾಡಿದವರಲ್ಲ, ಅವರನ್ನು ಕೊಲ್ಲಲು ಆರೆಸ್ಸೆಸ್ ನವರು ತುಂಬಾ ದಿನಗಳಿಂದ ತಯಾರಿ ನಡೆಸಿದ್ದರು. ಗೋಡ್ಸೆ ಮಹಾತ್ಮಾಗಾಂಧಿಯನ್ನು ತಮ್ಮ ಪಿಸ್ತೂಲು ಆಯುಧದಿಂದ ಕೊಂದ–ರೆ, ಆರೆಸ್ಸೆಸ್ ನವರು ಗೋಡ್ಸೆಯನ್ನೇ ತಮ್ಮ ಆಯುದವನ್ನಾಗಿ ಗಾಂಧೀಜಿಯವರ ಹತ್ಯೆಮಾಡಲು ಉಪಯೋಗಿಸಿದರು. ಗಾಂಧೀಜಿಯವರ ಕೊಲೆಯಾದಾಗ ಆರ್‌ಎಸ್‌ಎಸ್ ಘಟಕಗಳಲ್ಲಿ ಸಿಹಿಯನ್ನು ಹಂಚಲಾಯಿತು. ಗಾಂಧೀಜಿಯ ಕೊಲೆಯಿಂದಾಗಿ ಜನರ ರೋಷ ಕೆರಳಿತು. ಆರೆಸ್ಸೆಸ್ ನ್ನು ನಿಷೇದಿಸಬೇಕೆಂಬ ಬೇಡಿಕೆ ರೋಷಗೊಂಡ ಜನರಿಂದ ಬಂದಾಗ ಆರೆಸ್ಸೆಸ್ ನ್ನು ನಿಷೇದಿಸಲಾದರೂ, ಕೆಲವೇ ಸಮಯದ ನಂತರ ಅಂದಿನ ಅಧಿಕಾರದಲ್ಲಿರುವ ನಾಯಕತ್ವಕ್ಕೆ ಒತ್ತಡ ಹಾಗೂ ಬೆದರಿಕೆಯೊಡ್ಡಿ ಆರೆಸ್ಸೆಸ್ ನ ನಿಷೇದವನ್ನು ರದ್ದುಗೊಳಿಸಿದರು. ನಿಷೇದ ರದ್ದುಗೊಂಡರೂ ಅವರ ಬಣ್ಣ ಬದಲಾಗಲಿಲ್ಲ. ಅವರ ತಂತ್ರಗಾರಿಕೆ ಬದಲಾಗಲಿಲ್ಲ.



ಆರೆಸ್ಸೆಸ್ ನ ತಾತ್ವಿಕತೆಯೇನು ಎಂಬುದನ್ನು ನಾವು ತಿಳಿದುಕೊಳ್ಳಬೇಕು. 1925 ರಲ್ಲಿ ಈ ಸಂಘಟನೆ ಹುಟ್ಟಿದೆ. ಐದು ವರ್ಷ ನಂತರ ಸಂಘಟನೆಯ ಮುಖಂಡರಲ್ಲೊಬ್ಬರಾದ ಬಿ.ಎಸ್.ಮುಂಜೆ ಯವರು ಕೆಲವು ಅಂತರ್‍ರಾಷ್ಟ್ರೀಯ ನಾಯಕರನ್ನು ಭೇಟಿಯಾದರು. ಅವರು ಆರೆಸ್ಸೆಸ್ ಗೆ ಮಾದರಿ ಆಗಬಹುದಾದ ಸಂಘಟನೆಗಳ ಹುಡುಕಾಟದಲ್ಲಿ ಇದ್ದರು. ಮುಖ್ಯವಾಗಿ ಅವರು ಭೇಟಿಯಾದುದು ಇಟೆಲಿ ದೇಶದ ಮುಸ್ಸೊಲಿನಿಯವರನ್ನು. ಅಲ್ಲಿ ಅವರು ಮುಸ್ಸೊಲಿನಿಯ ಫ್ಯಾಸಿಸ್ಟ್ ಸಂಘಟನೆಯ ತರಬೇತಿ ಕೇಂದ್ರಗಳಿಂದ ಉತ್ತೇಜಿತರಾಗುತ್ತಾರೆ. ಆ ರೀತಿಯ ತರಬೇತಿ ತಂತ್ರಗಳ ವಿವರಗಳ ಬಗ್ಗೆ ಮತ್ತು ಭಾರತದಲ್ಲಿ ಅವನ್ನು ಹೇಗೆ ಅಳವಡಿಸಬಹುದೆಂದು ಮುಸ್ಸೊಲಿನಿಯೊಡನೆ ಚರ್ಚೆ ನಡೆಸುತ್ತಾರೆ. ಈ ಫ್ಯಾಸಿಸ್ಟ್ ಸಂಘಟನಾ ತತ್ವವನ್ನು ಆರೆಸ್ಸೆಸ್ ಭಾರತದಲ್ಲಿ ಪ್ರಯೋಗಿಸಲು ಪ್ರಾರಂಭಿಸಿತು. ಇಂದಿಗೂ ಆರೆಸ್ಸೆಸ್ ಮುಸ್ಸೊಲಿನಿಯವರ ಫ್ಯಾಸಿಸ್ಟ್ ಸಂಘಟನಾ ಸ್ವರೂಪವನ್ನೇ ಅನುಸರಿಸುತ್ತಿದೆ.

ಆರೆಸ್ಸೆಸ್ ತನ್ನ ಸಿದ್ಧಾಂತವನ್ನು ಹಿಟ್ಲರ್ ಜರ್ಮನಿಯ ನಾಜೀವಾದದಿಂದ ಪಡೆಯಿತು. ಹಿಟ್ಲರನು ಜರ್ಮನಿಯಲ್ಲಿರುವ ಯೆಹೂದಿ ಮತ್ತಿತರ ಅಲ್ಪಸಂಖ್ಯಾತ ಜನರನ್ನು ನಾಶಪಡಿಸಲು ರೂಪಿಸಿದ ತಂತ್ರಗಳನ್ನು ವಿಶ್ವದ ಎಲ್ಲಾ ಸಂಘಟನೆಗಳು ವಿರೋಧಿಸಿ ಖಂಡಿಸಿದ್ದವು. ಆರೆಸ್ಸೆಸ್ ಮಾತ್ರ ಹಿಟ್ಲರನ ಈ ನೀತಿಯನ್ನು ಸ್ವಾಗತಿಸಿ ಬೆಂಬಲ ನೀಡಿತು. ಹಿಟ್ಲರನ ಈ ನೀತಿಯಿಂದ ಅದಕ್ಕೆ ಪರಮಾನಂದವಾಗಿತ್ತು. ದೇಶದ ನೀತಿ ನಿರೂಪಣೆಗೆ ಜರ್ಮನಿ ಮಾಡೆಲ್ ಎಂದು ಆರೆಸ್ಸೆಸ್ ಸಾರ್ವಜನಿಕವಾಗಿಯೇ ಹೇಳಿತು. ಜರ್ಮನಿಯ ಯೆಹೂದಿಯರನ್ನು ನಾಶಮಾಡಲು ಹಿಟ್ಲರ್ ನಡೆಸಿದ ಕ್ರೂರ ದಮನತಂತ್ರಗಳನ್ನು ಆರೆಸ್ಸೆಸ್ ನವರು ಬಾರತದಲ್ಲಿ ಪ್ರಯೋಗಿಸಿ ಇಲ್ಲಿರುವ ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸುತ್ತಾರೆ. ಹಿಟ್ಲರನ ಈ ನರಮೇಧದ ನೀತಿಯನ್ನು ಭಾರತದಲ್ಲಿ ಆರೆಸ್ಸೆಸ್ ನವರು ಬಳಸಬೇಕೆಂದು ಗೋಲ್ವಾಲ್ಕರ್ ಕೂಡಾ ಬರೆದಿರುತ್ತಾರೆ. ಹಿಟ್ಲರನಿಗೆ ಜರ್ಮನಿಯ ಅಲ್ಪಸಂಖ್ಯಾತರು ಯಹೂದಿಯರು. ಕಮ್ಯೂನಿಸ್ಟರನ್ನು "ಬೋಲ್ಸೆವಿಕ್ಸ್" ಎಂದು ಕರೆದ. ಯಹೂದಿಯರು ಮತ್ತು ಕಮ್ಯುನಿಸ್ಟರನ್ನು ದೇಶದ ಆಂತರಿಕ ಶತ್ರುಗಳೆಂದು ಕರೆದ. ಭಾರತದಲ್ಲಿ ಆರೆಸ್ಸೆಸ್ – ಮುಸಲ್ಮಾನ, ಕ್ರೈಸ್ತರು ಮತ್ತು ಕಮ್ಯೂನಿಸ್ಟರನ್ನು



ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮಂಗಳೂರಿಗೆ ಬರುತ್ತಿರುವುದು ಸೌಹಾರ್ದ ರ್‍ಯಾಲಿಗಾಗಿ. ಸೌಹಾರ್ದ ರ್‍ಯಾಲಿಗೆ ಜಗತ್ತಿನ ಯಾವ ಮೂಲೆಯಿಂದ ಬಂದರೂ ಸ್ವಾಗತಿಸಬೇಕು. ಬೇರೆ ಗ್ರಹದಿಂದ ಬಂದರೂ ಗೌರವಿಸಬೇಕು. ವಿಶ್ವ ಹಿಂದೂ ಪರಿಷತ್, ಹಿಂದೂ ಜಾಗರಣ ವೇದಿಕೆ, ಶ್ರೀ ರಾಮ ಸೇನೆ ಮೊದಲಾದವು ಇದನ್ನು ವಿರೋಧಿಸಿ ಪ್ರತಿಭಟನೆ ಮಾಡ್ತಿವೆ ಅಂತ ಕೇಳಿದೆ. ಹಾಗಾದರೆ ಅವರಿಗೆ ಸೌಹಾರ್ದ ಬೇಡವೆ ಅಂತ ನಾವು, ಜನಸಾಮಾನ್ಯರು ಪ್ರಶ್ನಿಸಬೇಕು. ದ್ವೇಷವೇ ನಿಮಗೆ ಆಹಾರವಾ ಅಂತ ಕೇಳಬೇಕು.

ಈ ಸೌಹಾರ್ದ ರ್‍ಯಾಲಿಯನ್ನು ಎಲ್ಲ ಜಾತಿ, ವರ್ಗ, ಧರ್ಮದವರೂ ಬೆಂಬಲಿಸಬೇಕೆಂದು ವಿನಂತಿಸುತ್ತೇನೆ. ಇವತ್ತು ದ್ವೇಷ ಕಮ್ಮಿಯಾಗಿ ಸೌಹಾರ್ದತೆ ಹೆಚ್ಚಬೇಕಾದ ಅಗತ್ಯವಿದೆ. ಅಸಹನೆ ಕಮ್ಮಿಯಾಗಿ ಸಹನೆ ಹೆಚ್ಚಬೇಕಾದ ಅಗತ್ಯವಿದೆ.

ಪಿಣರಾಯಿ ವಿಜಯನ್ ತಳ ಸಮುದಾಯದಿಂದ ಮುಖ್ಯಮಂತ್ರಿ ಸ್ಥಾನಕ್ಕೆ ಬಂದವರು. ಅವರು ಬಿಲ್ಲವ ಸಮುದಾಯದವರು. ಇದನ್ನು ನಾವು ಸೆಲೆಬ್ರೇಟ್ ಮಾಡಬೇಕು.

ಸಿಪಿಐ(ಎಂ) ಕಚೇರಿ ಮೇಲೆ ದಾಳಿ ನಡೆಸಿ ಧ್ವಂಸ ಮಾಡಿದ್ದಾರೆಂಬ ಸುದ್ದಿ ಕೇಳಿದೆ. ಇದನ್ನು ಎಲ್ಲರೂ ಪ್ರತಿಭಟಿಸಬೇಕೆಂದು ನಾನು ವಿನಂತಿಸುತ್ತೇನೆ. ಹಾಗೆಯೇ ಸಿಪಿಐ(ಎಂ) ಕಾರ್ಯಕರ್ತರಲ್ಲೂ ಒಂದು ವಿನಂತಿಯಿದೆ. ಪ್ರತಿಕ್ರಿಯಾತ್ಮಕವಾಗಿ ಅವರು ಕೂಡ ಅಂಥದನ್ನು ಮಾಡದೆ ಸಹನೆ, ವಿವೇಕ, ಸಂಯಮ ತೋರಿ ಮಾರ್ಗದರ್ಶಿಯಾಗಿ ವರ್ತಿಸಲಿ ಎಂದು.

~ **ದೇವನೂರ ಮಹಾದೇವ – ಜನಾಂದೋಲನಗಳ ಮಹಾಮೈತ್ರಿ**





ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ದೇಶದ ರಾಜ್ಯವೊಂದರ ಮುಖ್ಯಮಂತ್ರಿಯೊಬ್ಬರು ನಮ್ಮ ರಾಜ್ಯಕ್ಕೆ ಆಗಮಿಸುವುದನ್ನುವಿರೋಧಿಸಿ ಬಂದ್ಗೆ ಕರೆಕೊಟ್ಟ ಸಂಘ ಪರಿವಾರದ ನಡೆ ಅದರ ಅಸಹಿಷ್ಣುತೆ ಮತ್ತು ಹತಾಶೆಯನ್ನು ಬಿಂಬಿಸುತ್ತದೆ. ಪ್ರತಿಭಟಿಸುವ ಹಕ್ಕು ಈ ದೇಶದ ಪ್ರತಿಯೊಬ್ಬ ಪ್ರಜೆಗೂ ಇದೆ. ಆದರೆ ಯಾವುದೇ ಕಾರಣಕ್ಕೂ ಜಿಲ್ಲೆಗೆ ಬರಲು ಬಿಡಲಾರೆವು ಎಂಬ ಅವರ ವಾದ ಅಕ್ಷಮ್ಯ. ಅದು ಈ ದೇಶದ ಪ್ರಜೆಯೊಬ್ಬನ ಸಂವಿಧಾನದತ್ತವಾದ ಮೂಲಭೂತ ಹಕ್ಕಿನ ಮೇಲಿನ ದಾಳಿಯಾಗುತ್ತದೆ. ಮಂಗಳೂರು ಕೇವಲ ಸಂಘ ಪರಿವಾರದವರಿಗೆ ಸೇರಿದ್ದಲ್ಲ. ಇಲ್ಲಿಗೆ ಯಾರಾದರೂ ಬರದಂತೆ ತಡೆಯುವ ಹಕ್ಕು ಯಾರಿಗೂ ಇಲ್ಲ. ರಾಜ್ಯ ಸರ್ಕಾರ ಮತ್ತು ಗೃಹ ಇಲಾಖೆ ಈ ಬೆದರಿಕೆಯನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಸೌಹಾರ್ದ ರ್‍ಯಾಲಿಗೆ ತಡೆಯೊಡ್ಡುವ ಬೆದರಿಕೆ ಹಾಕಿದ ಸಂಘಪರಿವಾರದ ಗೂಂಡಾಗಳನ್ನು ಮುಂಜಾಗರೂಕತಾ ಕ್ರಮವಾಗಿ ತೆಗೆದುಕೊಳ್ಳಬೇಕು ಮತ್ತು ಕಾನೂನು ಸುವಸ್ಥೆ ಕಾಪಾಡಿ ಜಿಲ್ಲೆಯ ಶಾಂತಿ ಸೌಹಾರ್ದ ನೆಲೆಸುವಂತೆ ಸೂಕ್ತ ಕ್ರಮಕೈಗೊಳ್ಳಬೇಕು.

– ಸುರೇಶ್ ಭಟ್ ಬಾಕ್ರಬೈಲ್,
ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ದ.ಕ. ಜಿಲ್ಲಾ ಅಧ್ಯಕ್ಷ

– ತಮ್ಮ ಶತ್ರುಗಳಾಗಿ ಕಾಣುತ್ತದೆ ಹಾಗೂ ಅವರ ಮೇಲೆ ದಾಳಿಗಳನ್ನು ಸಹಾ ಮಾಡುತ್ತಿದ್ದಾರೆ.

ದೇಶದ 'ಶತ್ರು'ಗಳಾಗಿ ಕಾಣುವ ಮುಸಲ್ಮಾನ, ಕ್ರೈಸ್ತರು ಮತ್ತು ಕಮ್ಯೂನಿಸ್ಟ್‌ರ ಮೇಲೆ ಸರಣಿ ದಾಳಿಗಳನ್ನು ನಡೆಸುತ್ತಾರೆ. ಸಾವಿರಾರು ಕೊಲೆಗಳನ್ನು ದೇಶದ ವಿವಿದ ಭಾಗಗಳಲ್ಲಿ ಆರೆಸ್ಸೆಸ್ ನವರು ನಡೆಸಿರುತ್ತಾರೆ. ಈ ರೀತಿಯ ಘರ್ಷಣೆ ಹೇಗೆ ನಡೆಸಬೇಕು, ಯಾವ ವಿಷಯದ ಮೇಲೆ ನಡೆಸಬೇಕು ಎಂಬುದರ ಬಗ್ಗೆ ಆರೆಸ್ಸೆಸ್ ನಿರ್ದಿಷ್ಟ ತರಬೇತಿ ಕೊಡುತ್ತದೆ. ಒಂದೊಂದು ಸಂಘರ್ಷವನ್ನು ಹೇಗೆ ಮತೀಯ ಬಣ್ಣ ಕಟ್ಟಿ ಪ್ರಚೋದಿಸಬಹುದು ಎಂದು ತರಬೇತಿ ಪಡೆದ ಆರೆಸ್ಸೆಸ್ ನವರು ಇಂತಹ ಆದೇಶಗಳನ್ನು ಜಾರಿಗೊಳಿಸುತ್ತಾರೆ. ಈ ರೀತಿಯ ಸಂಘರ್ಷಗಳನ್ನು ಹುಟ್ಟಿಹಾಕುವುದು, ಅದಕ್ಕೆ ಬೇಕಾದ ಬಣ್ಣಗಳನ್ನು ಹಚ್ಚಿ ಸುಳ್ಳು ಸುಳ್ಳು ಅಪಪ್ರಚಾರಗಳನ್ನು ಹೇಗೆ ಮಾಡಬಹುದೆಂದು ಆರೆಸ್ಸೆಸ್ ನವರಿಗೆ ತರಬೇತಿ ಕೊಡಲಾಗುತ್ತಿದೆ ಆದ್ದರಿಂದಲೇ ಎಲ್ಲಾ ಕೋಮು ಗಲಭೆಗಳ ಮುಂಚೂಣಿಯಲ್ಲಿರುವುದು ಆರ್‌ಎಸ್‌ಎಸ್ ಸಂಘಟನೆ. ಕೋಮು ಗಲಭೆಗಳ ವಿವರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಆರೆಸ್ಸೆಸ್ ಅವನ್ನು ಹುಟ್ಟು ಹಾಕಲು ಬಳಸಿದ ಸಮಾನ ತಂತ್ರಗಳನ್ನು ಕಾಣಬಹುದು.

ಆರೆಸ್ಸೆಸ್ ಜಾತ್ಯತೀತತೆಗೆ ವಿರೋಧವಾಗಿತ್ತು. ಭಾರತ ಒಂದು ಸೆಕ್ಯುಲರ್ ದೇಶವಾಗಿರಬಾರದು ಎಂಬುದು ಮೊದಲಿನಿಂದಲೂ ಅದರ ನಿಲುವಾಗಿತ್ತು. ಜುಲೈ 31, 1947 ರ ರೀತಿಯ ಆರೆಸ್ಸೆಸ್ ನ ಮುಖವಾಣಿಯಾದ "ಆರ್ಗನೈಸರ್" ಪತ್ರಿಕೆಯಲ್ಲಿ ದೇಶದ ಹೆಸರು "ಇಂಡಿಯಾ" ಆಗಿರಬೇಕು ಎಂಬುದಕ್ಕೂ ಆರೆಸ್ಸೆಸ್ ತನ್ನ ವಿರೋದವನ್ನು ವ್ಯಕ್ತಪಡಿಸಿ ದೇಶದ ಹೆಸರನ್ನು 'ಹಿಂದೂಸ್ತಾನ್' ಎಂದು ಬದಲಾಯಿಸಲು ಪ್ರಯತ್ನಿಸಿತು. ನಮ್ಮ



ಕರಾವಳಿಯ ಕೊರಗರ ಡೋಲಿಗೆ
ಕಿವಿಗೊಡದ ಹೊರತು
ಶಿವನ ಡಮರುಗ ತಿಳಿವುದೇ?
ತುಳುನಾಡ ಬಿರ್ಮೆರ ನೋಡದ
ಹೊರತು
ಬ್ರಹ್ಮನ ಸೃಷ್ಟಿಕ್ರಿಯೆ
ಅರ್ಥವಾಗುವುದೇ?
ಕಡಲ ಕಿನಾರೆಯಲಿ ಅಡ್ಡಾಡದ ಹೊರತು
ವಿಷ್ಣುವಿನ ಕ್ಷೀರ ಸಾಗರ ಮನ ತಲುಪುವುದೇ?
ಹೀಗೆ ತ್ರಿಮೂರ್ತಿಗಳಿರುವಲ್ಲಿ ಕೋಮುವಾದಕ್ಕೆ ಎಡೆ–
ಯುಂಟೇ?
ನಾಳೆ ನಡೆಯುವ ತುಳುನಾಡಿನ ಐಕ್ಯತಾ ಸಭೆಗೆ
ಮೂರು ಮೂರ್ತಿಗಳ ಬೆಂಬಲವುಂಟು

–ಪ್ರೊ. ಪುರುಷೋತ್ತಮ ಬಿಳಿಮಲೆ

ರಾಷ್ಟ್ರೀಯ ಧ್ವಜವನ್ನು ಕೂಲಂಕಷವಾದ ಚರ್ಚೆಗಳ ನಂತರ ರೂಪಿಸಲಾಗಿತ್ತು. ಆದರೆ ಆರೆಸ್ಸೆಸ್ ಅದರ ಬದ್ಧ ವಿರೋಧಿಯಾಗಿತ್ತು. ಜುಲೈ 17, 1947 ರ "ಆರ್ಗನೈಸರ್" ಪತ್ರಿಕೆಯಲ್ಲಿ "ರಾಷ್ಟ್ರೀಯ ಧ್ವಜ" ಎಂಬ ಸಂಪಾದಕೀಯ ಬರೆದು ಅದರಲ್ಲಿ ನಮ್ಮ ರಾಷ್ಟ್ರವನ್ನು ಪ್ರತಿನಿಧಿಸುವ ಯಾವ ಅಂಶಗಳೂ ಇಲ್ಲ. ಅದು ಸರಿಯಾಗಿಲ್ಲ ಎಂದು ಹೇಳಿತ್ತು. ಮೊದಲಿನಿಂದಲೂ ಭಾರತವನ್ನು ಧರ್ಮ–ಆಧಾರಿತ ದೇಶವಾಗಿಸುವುದೇ ಆರೆಸ್ಸೆಸ್ ನೀತಿಯಾಗಿತ್ತು. ಭಾರತ ಸೆಕ್ಯುಲರ್ ದೇಶವಾಗುವುದು ಅವರಿಗೆ ಬೇಕಾಗಿರಲಿಲ್ಲ. ಇದೀಗ ಅಧಿಕಾರದಲ್ಲಿರುವ ಆರೆಸ್ಸೆಸ್ ನಿಯಂತ್ರಣದ ಕೇಂದ್ರ ಸರಕಾರದ ಗೃಹಮಂತ್ರಿ ಸಂವಿದಾನದಲ್ಲಿ "ಸೆಕ್ಯುಲರಿಸಂ" ಎಂಬ ಪದ ಇರುವುದೇ ನಮ್ಮೆಲ್ಲಾ ಸಮಸ್ಯೆಗಳಿಗೆ ಮೂಲಕಾರಣ ಎಂದು ಹೇಳಿದ್ದಾರೆ. ಅಂದರೆ ಜಾತ್ಯಾತೀತ ರಾಷ್ಟ್ರ ಇರುವುದು ಆರೆಸ್ಸೆಸ್ ನವರಿಗೆ ಈಗಲೂ ಬೇಕಾಗಿಲ್ಲ.

ದೇಶದ ಭವಿಷ್ಯ ನಿರ್ಧರಿಸುವ ಅಧಿಕಾರ ಇರುವ ಆರೆಸ್ಸೆಸ್, ಅದನ್ನು ಅತ್ಯಂತ ಅಸಹಿಷ್ಣುತೆಯಿಂದ ನಿರ್ವಹಿಸುತ್ತಿದೆ. ಆರೆಸ್ಸೆಸ್ ನ ಅಸಹಿಷ್ಣುತೆ ಬಗ್ಗೆ ಹೇಳುವುದಾದರೆ ಹಲವು ಗಂಟೆಗಳು ಬೇಕಾಗಬಹುದು. ಆರೆಸ್ಸೆಸ್ ಅಸಹಿಷ್ಣುತೆಯ ಸಾಕಾರ ರೂಪವಾಗಿ ಬಿಟ್ಟಿದೆ. ಅದು ದೇಶದ ಆಳುವವರೆಲ್ಲರಿಗೂ ಮುಟ್ಟಿದೆ. ಮಹಾತ್ಮ ಗಾಂಧಿಯವರಂತೆ ದೇಶಕ್ಕೆ ಬೇಕಾದ ಜನಪ್ರಿಯರಾದ ಹಲವರನ್ನು ಕೊಲೆ ಮಾಡಲಾಗುತ್ತಿದೆ. ಅಸಹಿಷ್ಣುತೆ ಎಲ್ಲಿಗೆ ಮುಟ್ಟಿದೆ ಎಂದರೆ ಕರ್ನಾಟಕದ ಚಿಂತಕ ಸಂಶೋಧಕ ಪ್ರೊ. ಎಂ.ಎಂ. ಕಲಬುರ್ಗಿಯವರ ಕೊಲೆ ಮಾಡಲಾಯಿತು. ಇದು ದೇಶದ ಜಾತ್ಯಾತೀತ ಮನಸ್ಸುಗಳಿಗೆ ತುಂಬಾ ನೋವನ್ನು ತಂದಿದೆ. ಹಾಗೆಯೇ ಕಾ. ಗೋವಿಂದ ಪನ್ಸಾರೆ, ನರೇಂದ್ರ ದಾಬೋಲ್‌ಕರ್ ಹತ್ಯೆ. ಇವೆಲ್ಲಾ ಸಂಘಪರಿವಾರದ ನಾಯಕತ್ವದಲ್ಲಿ ಮಾಡಿದ ಕೃತ್ಯಗಳಾಗಿವೆ. ಇವರಿಗೆ ಇತರರು ವ್ಯಕ್ತಪಡಿಸುವ ಮಾತುಗಳನ್ನು ಕೇಳುವಷ್ಟು ತಾಳ್ಮೆ ಇಲ್ಲ. ಮಾತ್ರವಲ್ಲ ಸಂಘಪರಿವಾರದ ಮಾತುಗಳನ್ನು ನೀತಿಗಳನ್ನು ಒಪ್ಪದವರನ್ನೂ ನಾಶಮಾಡುವುದೇ ಅವರ ಜಾಯಮಾನವಾಗಿದೆ.

ಕರ್ನಾಟಕದಲ್ಲೂ ಆರೆಸ್ಸೆಸ್ ನವರ ಅಸಹಿಷ್ಣುತೆಗೆ ಒಳಗಾಗಿ ದಾಳಿಯನ್ನು ಎದುರಿಸಿದವರು ಶ್ರೀ ಕೆ.ಎಸ್. ಭಗವಾನ್, ಜ್ಞಾನಪೀಠ ಪ್ರಶಸ್ತಿ ವಿಜೇತ ಗಿರೀಶ್ ಕಾರ್ನಾಡ್. ತಮಗೆ ಇಷ್ಟವಾಗದ ಕವನ ಬರೆದ ಶ್ರೀ ಹುಚ್ಚಂಗಿ ಪ್ರಸಾದರ ಅಂಗೈಯನ್ನು ಕಡಿಯಲಾಯಿತು. ಪತ್ರಕರ್ತೆ ಲೇಖಕಿ ಚೇತನ ತೀರ್ಥಹಳ್ಳಿಯವರ ಮೇಲೆ 'ಅತ್ಯಾಚಾರ'ದ ಹಾಗೂ 'ಆಸಿಡ್' ಹಾಕುವ ಬೆದರಿಕೆ ಹಾಕಲಾಯಿತು. ತಮಿಳುನಾಡಿನ ಮುರುಗನ್ ಮೇಲೆ ದಾಳಿ ಮಾಡಲಾಯಿತು. ಅನಾರೋಗ್ಯದಲ್ಲಿದ್ದ ಡಾ॥ ಯು.ಆರ್. ಅನಂತಮೂರ್ತಿಯವರಿಗೆ ಪಾಕಿಸ್ತಾನಕ್ಕೆ ಹೋಗುವ ವಿಮಾನದ ಟಿಕೇಟನ್ನು ಕೊಡಲಾಯಿತು. ಚಲನ ಚಿತ್ರದ ಶಾರೂಖ್ ಖಾನ್, ಅಮೀರ್ ಖಾನ್, ಕೇರಳದ ಫಿಲಂ ನಿರ್ದೇಶಕ ಕಮಲ್, ನಂದಿತಾ ದಾಸ್‌ರವರಿಗೂ ಪಾಕಿಸ್ತಾನಕ್ಕೆ ಹೋಗಬೇಕೆಂಬ ಎಚ್ಚರಿಕೆಯನ್ನೂ ಆರೆಸ್ಸೆಸ್ ನಿಂದ ಕೊಡಲಾಯಿತು. ಕೇರಳದ ಜ್ಞಾನಪೀಠ ಪ್ರಶಸ್ತಿ ಪಡೆದ ಶ್ರೀ ಎಂ.ಟಿ. ವಾಸುದೇವನ್ ನಾಯರ್‌ರವರು ನೋಟು ಅನಾಣ್ಯೀಕರಣದಿಂದಾಗಿ ಬಡಜನರಿಗಾದ ಸಂಕಷ್ಟಗಳ ಬಗ್ಗೆ ತಮ್ಮ ಅಭಿಪ್ರಾಯ ಪ್ರಕಟಿಸಿದಾಗ ಅವರನ್ನು ಪಾಕಿಸ್ತಾನಕೆ ಕಳುಹಿಸಬೇಕೆನ್ನುವ ಕೂಗು ಆರೆಸ್ಸೆಸ್ ನಿಂದ ಬಂತು. ಅದು ಇನ್ನೂ ಮುಂದುವರಿಯುತ್ತಾ ಇದೆ. ಇದೇನು? ಎಲ್ಲಾ ನಮ್ಮ ಪ್ರತಿಷ್ಠಿತ ವಿಶಿಷ್ಟ ಸೃಜನಶೀಲ ಮನಸ್ಸುಗಳು ಆರೆಸ್ಸೆಸ್ ಹೇಳಿದ ಹಾಗೇ ಕೇಳಬೇಕಾ? ಹೇಳಿದ ಹಾಗೆಯೇ ನಡೆಯಬೇಕಾ? ಇಲ್ಲದಿದ್ದರೆ ಭಾರತದಲ್ಲಿ ವಾಸ ಮಾಡುವ ಹಾಗಿಲ್ಲವೆ?





ಸಂಗಾತಿಗಳೇ, ಧಾರ್ಮಿಕ
ಸಮುದಾಯಗಳ ನಡುವೆ
ನಂಜು ಹಬ್ಬಿಸುವವರು,
ಸೌಹಾರ್ದ ಬೆಸೆಯುವವರು
ಬರುವುದನ್ನು ಸಹಜವಾಗಿಯೇ
ಇಷ್ಟಪಡುವುದಿಲ್ಲ.
ಅಂತಹವರನ್ನು
ವಿರೋಧಿಸುವುದಷ್ಟೆ
ಮುಖ್ಯವಾದುದು, ಪಿಣರಾಯಿಯವರು
ಭಾಗವಹಿಸುವ ಈ ಸದಾಶಯದ ಕಾರ್ಯಕ್ರಮವನ್ನು
ನಾವೆಲ್ಲ ಹೇಗೆ ಬೆಂಬಲಿಸಿ ಭಾಗವಹಿಸಿ
ಯಶಗೊಳಿಸಬೇಕೆಂಬುದು. ಸಮಾನ ಹಗೆಯನ್ನು
ಎದುರಿಸುವಾಗ ನಮ್ಮೊಳಗಿನ ಭಿನ್ನಮತ
ಬದಿಗಿಡೋಣ. ಸದ್ಯ ಶಿವರಾತ್ರಿಯ ತತ್ವಪದ ಕೇಳುತ್ತ
ಮಧ್ಯಕರ್ನಾಟಕದ ಹಳ್ಳಿಗಳಲ್ಲಿ ತಿರುಗುತ್ತಿರುವೆ. ನಾಳೆ
ಮಂಗಳೂರಿಗೆ ಹೋಗುವ ಆಲೋಚನೆಯಲ್ಲಿರುವೆ.

– ರಹಮತ್ ತರೀಕೆರೆ

ನನಗೆ ಆರೆಸ್ಸೆಸ್ ನವರೊಡನೆ ಒಂದೇ ಹೇಳಲಿಕ್ಕಿರುವುದು. ಭಾರತ ದೇಶ ಆರೆಸ್ಸೆಸ್ ನವರ ದೇಶವಲ್ಲ. ಇದು ಜಾತ್ಯಾತೀತ ಜನರ ದೇಶ. ಇದು ಎಲ್ಲರ ದೇಶ. ಆರೆಸ್ಸೆಸ್ ಗೆ ವಿಶೇಷ ಸವಲತ್ತುಗಳೇನೂ ಇಲ್ಲ. ಮಾನವರಾಗಿ ಜೀವಿಸಲು, ಸ್ವತಂತ್ರವಾದ ಅಭಿಪ್ರಾಯವನ್ನು ವ್ಯಕ್ತಪಡಿಸಲು ಎಲ್ಲರಿಗೂ ಅವಕಾಶವಿದೆ. ಅಂತಹ ಅವಕಾಶವನ್ನು ವಿರೋದಿಸುವ ಆರೆಸ್ಸೆಸ್ ನ ಅಸಹಿಷ್ಣುತೆಗೆ ವಿರುದ್ಧವಾಗಿ ಎಲ್ಲಾ ಪ್ರಜಾಪ್ರಭುತ್ವ, ಜಾತ್ಯಾತೀತ ಶಕ್ತಿಗಳು ಐಕ್ಯತೆಯಿಂದ ಪ್ರತಿಭಟಿಸಬೇಕಾಗಿದೆ.

ಜನತೆ ಯಾವ ಆಹಾರ ಸೇವಿಸಬೇಕು. ಯಾವ ಕೆಲಸ ಮಾಡಬೇಕು, ಯಾವ ಬಟ್ಟೆ ಹಾಕಬೇಕು ಎಂದು ಆರೆಸ್ಸೆಸ್ ನವರು ಆದೇಶ ಕೊಡುವುದನ್ನು ನಾವು ನೋಡುತ್ತಿದ್ದೇವೆ. ಉತ್ತರಪ್ರದೇಶದ ದಾದ್ರಿಯಲ್ಲಿ ಮುಸ್ಲಿಂ ಒಬ್ಬನನ್ನು ಗೋಮಾಂಸ ಸೇವಿಸಿದ್ದಾನೆಂದು ಮನೆಯಿಂದ ಎಳೆದು ಹಾಕಿ ಆರೆಸ್ಸೆಸ್ ನವರು ಕೊಂದರು. ನಂತರ ಅವರ ಮನೆಯಿಂದ ತೆಗೆದು–ಕೊಂಡು ಹೋದ ಮಾಂಸವನ್ನು ಪರೀಕ್ಷಿಸಿದಾಗ, ಅದು ಗೋಮಾಂಸ ಅಲ್ಲವೆಂದೂ, ಆಡಿನ ಮಾಂಸವೆಂದು ಗೊತ್ತಾಯಿತು.

ಗುಜರಾತ್‌ನಲ್ಲಿ 4 ಮಂದಿ ದಲಿತರನ್ನು ನಗ್ನರಾಗಿ ಕಾರಿಗೆ ಕಟ್ಟಿ, ಕರಾಳವಾಗಿ ಬಡಿದಿದ್ದಾರೆ. ಅವರು ಸತ್ತ ದನಗಳ ಧರ್ಮ ಸುಲಿಯಲಿಲ್ಲ. ಕಕ್ಕಸುಗಳನ್ನು ತೊಳಿಯಲಿಲ್ಲ ಎಂಬುದೇ ಕಾರಣ. ಚಾತುರ್ವರ್ಣದಲ್ಲಿ ಅವರ ಜಾತಿಗೆ ಕೊಟ್ಟ ಕೆಲಸ ಮಾತ್ರವೇ ಮಾಡಬೇಕೆಂಬ ಆದೇಶ ಆರೆಸ್ಸೆಸ್ ನವರದ್ದು. ಇದೆ ರೀತಿ ಹರಿಯಾಣದಲ್ಲಿ ವೃದ್ಧ ರೈತ ಮತ್ತು ಅವನ ಹೆಂಡತಿಯನ್ನು ಕೊಲೆ ಮಾಡಿದಾಗ, ಓಡಿದ ಅವರ ಇಬ್ಬರು ಯುವತಿ ಹೆಣ್ಣುಮಕ್ಕಳನ್ನು ಓಡಿಸಿ, ಅವರು ಸಿಗದಾಗ ಅವರ ಚಿಕ್ಕಮಕ್ಕಳ ಕುತ್ತಿಗೆಗೆ

ಪುಟ 13 ಕ್ಕೆ

ದಕ್ಷಿಣ ಕನ್ನಡ ಜಿಲ್ಲೆಯನ್ನು ಕೋಮುವಾದಿಗಳ
ಪ್ರಯೋಗಶಾಲೆ ಎನ್ನುವುದು ನಿಮ್ಮ
ಅಭಿಪ್ರಾಯವಾಗಿದ್ದರೆ ಮೊದಲು ಈ ಅಭಿಪ್ರಾಯವನ್ನು
ನಿಮ್ಮಲ್ಲಿ ಮೂಡಿಸಿದವರು ಯಾರು ಎನ್ನುವುದನ್ನು
ನೆನಪು ಮಾಡಿಕೊಳ್ಳಿ.
ಅವರು ಖಂಡಿತ ರಾಜಕೀಯ ಪಕ್ಷಗಳ ನಾಯಕರು,
ಇಲ್ಲವೆ ಒಂದು ವರ್ಗದ ಪತ್ರಕರ್ತರಾಗಿರುತ್ತಾರೆ.
ಅವರನ್ನು ಪಕ್ಕಕ್ಕೆ ಸರಿಸಿ ತುಳುನಾಡಿನ ಸಾಮಾನ್ಯ
ಜನರನ್ನು ಮಾತನಾಡಿಸಿ ಖಂಡಿತ ನಿಮ್ಮ ಅನುಭವ
ನಿಮ್ಮ ಅಭಿಪ್ರಾಯವನ್ನು ಬದಲಾಯಿಸುತ್ತದೆ.
ಶನಿವಾರ ನೆಹರೂ ಮೈದಾನದಲ್ಲಿ ಸೇರಿದ್ದ ಜನಸ್ತೋಮ
ಇದೇ ಪಕ್ಷಾತೀತ ಸಾಮಾನ್ಯ ಜನರ ಪ್ರತಿಕ್ರಿಯೆ. ಇದೇ
ಜನ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಎಂಟರಲ್ಲಿ



ಏಳು ಕ್ಷೇತ್ರಗಳಲ್ಲಿ ಬಿಜೆಪಿ
ಅಭ್ಯರ್ಥಿಗಳನ್ನು ಸೋಲಿಸಿದ್ದು.
ನನ್ನೂರು ನನ್ನ ಹೆಮ್ಮೆ.

–ದಿನೇಶ್ ಅಮಿನ್ ಮಟ್ಟು

ಸೌಹಾರ್ದ ರ್ಯಾಲಿ : ಪ್ರತಿಕ್ರಿಯೆಗಳು

ಸೌಹಾರ್ದ ರ್ಯಾಲಿಯ ಯಶಸ್ಸಿಗೆ ಭಾರೀ ಪ್ರತಿಕ್ರಿಯೆಗಳು ಬಂದಿವೆ. ಯಾವುದೇ ಎಡ ಪಕ್ಷಗಳ ರ್ಯಾಲಿಗಳನ್ನು ಸಭೆಗಳನ್ನು ಪೂರ್ಣವಾಗಿ ನಿರ್ಲಕ್ಷಿಸುವ ಅಥವಾ ಬರಿಯ 'ಟ್ರಾಫಿಕ್ ಜಾಮ್' ಆಗಿ ನೋಡುವ ಮಾಧ್ಯಮಗಳು ಅದನ್ನು ವರದಿ ಮಾಡಲೇ ಬೇಕಾದ ಪರಿಸ್ಥಿತಿ ಉಂಟಾಗಿತ್ತು. ಆದರೂ ಸಂಘ ಪರಿವಾರದ 'ಬಂದ್' 'ಹರತಾಳ'ಗಳ ಅ–ಪ್ರಜಾಸತ್ತಾತ್ಮಕ ಸ್ವರೂಪದ ಬಗ್ಗೆ ಜಾಣ ಮೌನ ವಹಿಸುತ್ತಾ ಅವು ಯಶಸ್ವಿಯಾದವು ಎಂದೂ ವರದಿ ಮಾಡಿದವು. ಸಿಪಿಐ(ಎಂ) ಕಛೇರಿಯನ್ನು ಸುಟ್ಟ ಸುದ್ದಿಯನ್ನು ಯಾವುದೇ ಟೀಕೆ ಇಲ್ಲದೆ ತಟಸ್ಥವಾಗಿ ವರದಿ ಮಾಡಿದವು. ಪತ್ರಿಕೆಗಳು ಎಷ್ಟೋ ಮೇಲು. ಒಂದೆರಡನ್ನು ಬಿಟ್ಟರೆ ಇತರ ಟಿವಿ ಚಾನೆಲುಗಳು ಪೂರ್ಣವಾಗಿ ಅಲ್ಲದಿದ್ದರೂ ಈ ಮಹತ್ವದ ಘಟನೆಯನ್ನು ನಿರ್ಲಕ್ಷಿಸುವ ಪ್ರಯತ್ನ ಮಾಡಿದವು. ಹೆಚ್ಚಿನ ಪತ್ರಿಕೆಗಳು ಇದರ ಮಹತ್ವದ ವಿಶ್ಲೇಷಣೆಯ ಗೋಜಿಗೆ ಹೋಗಲಿಲ್ಲ. ಈ ನಡುವೆ 'ಕರಾವಳಿ ಕರ್ನಾಟಕ' ಎಂಬ ವೆಬ್ ಪತ್ರಿಕೆ ಮಾತ್ರ ಸೌಹಾರ್ದ ರ್ಯಾಲಿಯ ಮಹತ್ವದ ವಿಶ್ಲೇಷಣೆಯನ್ನು ಮಾಡಿದೆ. ಆ ವಿಶ್ಲೇಷಣೆಯ ಭಾಗಗಳನ್ನು ಇಲ್ಲಿ ಕೊಡಲಾಗಿದೆ. ಜತೆಗೆ ರ್ಯಾಲಿಯಲ್ಲಿ ಭಾಗವಹಿಸಿದವರ ಕೆಲವು ಪ್ರತಿಕ್ರಿಯೆಗಳೂ ಮತ್ತು ಅದಕ್ಕೆ ಬೆಂಬಲ ನೀಡಿದ ಕೆಲವು ವ್ಯಕ್ತಿಗಳ ಸಂಘಟನೆಗಳ ಹೇಳಿಕೆಗಳೂ ಇವೆ.



ಚಳವಳಿಗಳ ಐಕ್ಯತೆ: ಈಗ ಸಿಪಿಐ(ಎಂ) ಸರದಿ



ಮಂಗಳೂರಿನಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ನಡೆದ ಕರಾವಳಿ ಐಕ್ಯತಾ ಸೌಹಾರ್ದ ಸಮಾವೇಶ ಅಭೂತಪೂರ್ವ ಯಶಸ್ಸು ಕಂಡಿದೆ. ಕೋಮುವಾದಿಗಳ ಪ್ರಯೋಗಶಾಲೆ ಎಂದು ಕರೆಯಲ್ಪಡುತ್ತಿರುವ ಕರಾವಳಿಯಲ್ಲಿ ಇಂತಹದ್ದೊಂದು ಸೌಹಾರ್ದ ಸಮಾವೇಶ ಅದ್ದೂರಿಯಾಗಿ ಮತ್ತು ಪರಿಣಾಮಕಾರಿಯಾಗಿ ನಡೆಯುವುದು ಬಹಳ ಮಹತ್ವಪೂರ್ಣ ಸಂಗತಿಯೇ ಹೌದು. ಅದರಲ್ಲೂ ಸೌಹಾರ್ದಪ್ರಿಯ, ಸೆಕ್ಯೂಲರ್ ಮನಸ್ಸಿನ ಮಂದಿ ಒಟ್ಟಾಗಿ ಹಬ್ಬದ ಉತ್ಸಾಹದ ವಾತಾವರಣ ನಿರ್ಮಿಸಿ ಸಂಭ್ರಮಿಸಿದ್ದು ಕರಾವಳಿಯ ಸೌಹಾರ್ದ ಚಳವಳಿಗೆ ಇನ್ನಷ್ಟು ಬಲ ಬಂದಿದೆ. ಪಿಣರಾಯಿ ವಿಜಯನ್ ಅವರ ಆಗಮನವನ್ನು ತಮ್ಮ ಹಿಂದೂತ್ವದ ರಾಜಕೀಯಕ್ಕೆ ಬಳಸಿಕೊಳ್ಳಲು ಪ್ರಯತ್ನಿಸಿ, ಭಾಷಣ, ಮೆರವಣಿಗೆ, ಪ್ರತಿಭಟನೆ, ಪತ್ರಿಕಾಗೋಷ್ಟಿಗಳನ್ನೆಲ್ಲ ನಡೆಸಿ, ಮಂಗಳೂರಿನ ಬಂದ್ಗೂ ಕರೆಕೊಟ್ಟರೂ ಸೌಹಾರ್ದ ರ್ಯಾಲಿ ಯಶಸ್ವಿಯಾಯಿತು, ಜನರು ಬೃಹತ್ ಸಂಖ್ಯೆಯಲ್ಲಿ ಇದಕ್ಕೆ ಸಾಕ್ಷಿಯಾದರು. ಸಣ್ಣಪುಟ್ಟ ಸೈದ್ಧಾಂತಿಕ, ವೈಚಾರಿಕ ಭಿನ್ನಮತ ಇದ್ದ ಮಂಗಳೂರಿನ ಮತ್ತು ರಾಜ್ಯದ ವಿವಿಧೆಡೆಯ ವ್ಯಕ್ತಿಗಳು ಮತ್ತು ಸಂಘಟನೆಗಳು ಸಂಘಪರಿವಾರವನ್ನು ಹಿಮ್ಮೆಟಿಸುವ ಏಕಮಾತ್ರ ಅಜೆಂಡಾಕ್ಕೆ ತಮ್ಮ ನೂರು ಶೇಕಡಾ ಬದ್ದತೆ ತೋರಿಸಿ ಒಂದಾಗಿದ್ದರಿಂದ ಈ ಸೌಹಾರ್ದ ರ್ಯಾಲಿ ಚಾರಿತ್ರಿಕ ಘಟನೆಯಾಗಿ ಮಾರ್ಪಟ್ಟಿತು. ಜಾತ್ಯತೀತ ಮನಸ್ಸುಗಳನ್ನು ಒಗ್ಗೂಡಿಸಿದ ಮಂಗಳೂರಿನ ಸಂಘಪರಿವಾರಕ್ಕೆ ಎಷ್ಟು ಧನ್ಯವಾದ ಹೇಳಿದರೂ ಸಾಲದು!

...ಇದೀಗ ಸಿಪಿಐ(ಎಂ) ಮಂಗಳೂರಿನಲ್ಲಿ ಪಿಣರಾಯಿ ವಿಜಯನ್ ಅವರನ್ನು ಆಹ್ವಾನಿಸಿ ನಡೆಸಿದ ಈ ಕರಾವಳಿ ಐಕ್ಯತಾ ಸಮಾವೇಶ ಚಳವಳಿಗಳ ಸರಣಿಯಲ್ಲಿ ಹೊಸ ಸೇರ್ಪಡೆ. ಇಂತಹದ್ದೊಂದು ಸವಾಲಿನ ಸಮಾವೇಶ ನಡೆಸಲು ಮಂಗಳೂರಿನಲ್ಲಿ ಎಡ ಪಕ್ಷಗಳು ಮತ್ತು ಸಂಘಟನೆಗಳಿಗೆ ಮಾತ್ರ ಸಾಧ್ಯ ಎಂಬುದೂ ಈ ಸಮಾವೇಶ ಸಾಬೀತುಪಡಿಸಿದೆ. ಸಮಾವೇಶದ ಸಂಪೂರ್ಣ ಯಶಸ್ಸಿನ ಕೀರ್ತಿ ಎಡ ಪಕ್ಷಗಳ ಯುವ ಮತ್ತು ವಿದ್ಯಾರ್ಥಿ ಸಂಘಟನೆಗಳಿಗೆ ಸಲ್ಲಲೇಬೇಕು.

ಸಿಪಿಐ(ಎಂ) ಮುಂದಾಳತ್ವದಲ್ಲಿ ನಡೆದ ಮಂಗಳೂರಿನ ಸೌಹಾರ್ದ ರ್ಯಾಲಿಗೆ ಸಂಘಪರಿವಾರದಿಂದ ಯಾವಾಗ ಬೆದರಿಕೆ ವ್ಯಕ್ತವಾಯಿತೊ ಅಂದಿನಿಂದಲೆ ಮಂಗಳೂರಿನ ಮಾತ್ರವಲ್ಲದೆ ರಾಜ್ಯದ ವಿವಿಧ ಜನಪರ, ಪ್ರಗತಿಪರ ವ್ಯಕ್ತಿಗಳು ಮತ್ತು ಸಂಘಟನೆಗಳು ಸಮಾವೇಶದ ಬೆಂಬಲಕ್ಕೆ ನಿಂತಿದ್ದು ನಿಜಕ್ಕೂ ಚಾರಿತ್ರಿಕ. ಸಮಾವೇಶ ಕೇವಲ ಸೌಹಾರ್ದ ಸಮಾವೇಶವಾಗದೆ ಕರ್ನಾಟಕದ ವಿವಿಧ ಚಳವಳಿಗಳು ಭಿನ್ನಾಭಿಪ್ರಾಯ ಮರೆತು ಒಂದಾದ ಐಕ್ಯತಾ ಸಮಾವೇಶವೂ ಆಯಿತು. ಇಷ್ಟು ಆಗಿದ್ದು ದೊಡ್ಡದು ನಿಜ, ಆದರೆ ಇಷ್ಟೆ ಸಾಕೆ? ಈಗ ಚೆಂಡು ಸಿಪಿಐ(ಎಂ) ಅಂಗಳದಲ್ಲಿದೆ!

ರಾಜ್ಯದ ವಿವಿಧ ಜನಪರ ಸಂಘಟನೆಗಳು ಮತ್ತು ಚಳವಳಿಗಳ ನಡುವಿನ ಸೌಹಾರ್ದತೆಗೆ, ಐಕ್ಯತೆಗೆ ತನ್ನ ಪಾಲನ್ನೂ ನೀಡಬೇಕಾದ ಮಹತ್ವದ ಹೊಣೆಗಾರಿಕೆ ಈಗ ಸಿಪಿಐ(ಎಂ) ಮತ್ತು ಅದರ ಸಂಘಟನೆಗಳ ಹೆಗಲೇರಿದೆ. ಈ ಹೊಣೆಗಾರಿಕೆಯನ್ನು ಸಿಪಿಐ(ಎಂ) ಎಷ್ಟು ಸಮರ್ಥವಾಗಿ ನಿಭಾಯಿಸುತ್ತದೊ ಅಷ್ಟರ ಮಟ್ಟಿಗೆ ರಾಜ್ಯದಲ್ಲಿ ಹರಿದು ಹಂಚಿ ಹೋಗಿರುವ ಮತ್ತು ಕೆಲವೆಡೆ ಸಂಘಟಿತವಾಗಿ ಹೋರಾಟ ನಡೆಸುತ್ತಿರುವ ಚಳವಳಿಗೆ ಬಲ ಬಂದಂತಾಗುತ್ತದೆ.

ಮಂಗಳೂರನ್ನೂ ಒಳಗೊಂಡು ರಾಜ್ಯದ ಹಲವೆಡೆ ಸಿಪಿಐ(ಎಂ), ಎಸ್ಎಫ್ಐ, ಡಿವೈಎಫ್ಐ ಸಂಘಟನೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿವೆ. ವಿದ್ಯಾರ್ಥಿಗಳು,ಯುವಜನರು, ಬೀಡಿ–ಹಂಚು–ಕೂಲಿ–ನಿರ್ಮಾಣ ಕಾರ್ಮಿಕರು, ರೈತರು ಮುಂತಾದ ವಿವಿಧ ಕ್ಷೇತ್ರಗಳ ಜನಸಾಮಾನ್ಯರ ನಡುವೆ ಅತ್ಯಂತ ಸಕ್ರಿಯವಾಗಿದೆ. ಚಳವಳಿಗಳನ್ನು ಕಟ್ಟುವ ಮತ್ತು ಮುನ್ನಡೆಸುವ ಪರಿಣತಿ ಇವರಿಗೆ ಇದೆ. ಇದೆಲ್ಲವೂ ನಿಜಕ್ಕೂ ಮೆಚ್ಚುವಂತಹದ್ದು. ಮಂಗಳೂರಿನ ಎಡಸಂಘಟನೆಗಳ ಯುವಕರು ಕರಾವಳಿಯಲ್ಲಿ ಸಂಘಟಿಸಿದ ದಿಟ್ಟತನದ ಹೋರಾಟಗಳು ಬೇರೆ ಸಂಘಟನೆಗಳಿಗೆ ಮಾದರಿ.

ಇಷ್ಟೆಲ್ಲ ಮೆಚ್ಚುಗೆಯ ಮಾತುಗಳ ಬಳಿಕ ಕೆಲವೊಂದು ವಿಚಾರಗಳನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ. ಕೇರಳ, ಪಶ್ಚಿಮ ಬಂಗಾಲ ಮುಂತಾದ ಕಡೆಗಳಲ್ಲಿ ಹೇಗೆ ಇರಲಿ, ಕರ್ನಾಟಕದಲ್ಲಂತೂ ಎಲ್ಲ ರೀತಿಯಿಂದಲೂ ಜನಪರವಾಗಿರುವ ಸಿಪಿಐ(ಎಂ) ಮತ್ತು ಅದರ ವಿದ್ಯಾರ್ಥಿ–ಕಾರ್ಮಿಕ–ಯುವಜನ ಸಂಘಟನೆಗಳು ಕರ್ನಾಟಕದ ಹಲವು ಜನಪರ ಚಳವಳಿಗಳ ಜೊತೆ ಒತ್ತಾಯಪೂರ್ವಕವಾದ ಒಂದು ಅಂತರವನ್ನು ಕಾಯ್ದುಕೊಂಡಿದೆ. ಚಳವಳಿಯ ಇತರ ಸಂಘಟನೆಗಳ ಹಾಗಿಲ್ಲದೆ ಸಿಪಿಐ(ಎಂ) ಒಂದು ರಾಜಕೀಯ ಪಕ್ಷವಾಗಿದೆ ಎಂಬ ವಾಸ್ತವವನ್ನು ಅರ್ಥಮಾಡಿಕೊಂಡೇ ಈ ಮಾತುಗಳನ್ನು ಹೇಳಬೇಕಾಗಿದೆ.

...ಇದನ್ನು ಇಂದು ಸಿಪಿಐ(ಎಂ) ಮೀರಬೇಕಿದೆ. ಮೊನ್ನೆಯ ಸೌಹಾರ್ದ ರ್ಯಾಲಿಗೆ ಬೆಂಬಲ ನೀಡಿದ ವ್ಯಕ್ತಿಗಳು, ಸಂಘಟನೆಗಳು ಸಾಮಾಜಿಕ ಜಾಲತಾಣದಲ್ಲಿ ಪ್ರಚಾರ, ಸಮರ್ಥನೆ, ಸಾಥ್ ನೀಡಿದವರಲ್ಲಿ ಹೆಚ್ಚಿನವರದು ಬೇಷರತ್ ಬೆಂಬಲವಂತೂ ಅಲ್ಲ. ಅಥವಾ ಸಿಪಿಐ(ಎಂ) ಅಥವಾ ಪಿಣರಾಯಿ ವಿಜಯನ್ ಅವರ ಸಂಪೂರ್ಣ ಸಮರ್ಥಕರೂ ಅಲ್ಲ, ಆದರೂ ಸಂಘಪರಿವಾರವನ್ನು ಹಿಮ್ಮೆಟ್ಟಿಸಿ ಕರಾವಳಿಯಲ್ಲಿ ಸೌಹಾರ್ದ ಸ್ಥಾಪನೆಗಾಗಿ ಎಲ್ಲ ಭಿನ್ನಾಭಿಪ್ರಾಯಗಳನ್ನು ತೊರೆದು ಸಿಪಿಐ(ಎಂ) ನಡೆಸಿದ ರ್ಯಾಲಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಈ ಬೆಂಬಲ, ಜೊತೆಗೂಡುವಿಕೆ ಏಕಮುಖವಾಗಿರಬಾರದು. ಅದು ಪರಸ್ಪರ ಕೊಡುಕೊಳ್ಳುವಿಕೆಯಿಂದ ಕೂಡಿರಬೇಕು. ಸಮಾನ ಆಶಯಗಳಿಗೆ ಜೊತೆಯಾಗಿ ದುಡಿಯುವ, ಹೋರಾಡುವ ಔದಾರ್ಯತೆಯನ್ನು ಸಿಪಿಐ(ಎಂ) ಮೈಗೂಡಿಸಿಕೊಳ್ಳಲು ಇದು ಸ್ಫೂರ್ತಿಯಾಗಬೇಕು. ತಾನು ಚಳವಳಿಗಳ 'ದೊಡ್ಡಣ್ಣ' ಎಂಬ ಮನಸ್ಥಿತಿಯಿಂದ (ಅಂತಹ ಮನಸ್ಥಿತಿ ಇದ್ದರೆ) ಅಂತಹ ಮನಸ್ಥಿತಿಯಿಂದ ಹೊರಬರಬೇಕು.

ಮಂಗಳೂರಿನ ಐಕ್ಯತಾ ಸಮಾವೇಶ ಚಳವಳಿಗಳ ಐಕ್ಯತೆಗೂ ದಾರಿಯಾಗಲಿ. ಮಂಗಳೂರು ಕೋಮುವಾದಿಗಳ ಪ್ರಯೋಗಶಾಲೆಯಲ್ಲ, ಸೌಹಾರ್ದತೆ, ಸಹಬಾಳ್ವೆ ಈ ಮಣ್ಣಿನ ಸಹಜ ಗುಣ ಎಂದು ಮತ್ತೊಮ್ಮೆ ದೇಶಕ್ಕೆ ತೋರಿಸಿದ ಮಂಗಳೂರಿನ ಸಿಪಿಐ(ಎಂ) ಮತ್ತು ಎಲ್ಲ ಸಂಘಟನೆಗಳ ಸಂಗಾತಿಗಳಿಗೆ ಅಭಿನಂದನೆ ಮತ್ತು ವಂದನೆ.

–ಶಶಿಧರ ಹೆಮ್ಮಾಡಿ

ಕೆಲವು ಪ್ರತಿಕ್ರಿಯೆಗಳು

ಸೋರುತ್ತಿವುದು ನಿಮ್ಮ ಮನೆ –ಮನಗಳು...
ಅದಕ್ಕಾಗಿ ಕದ್ದು ಕೊಂಡೊದಿರಿ ನಮ್ಮ ಫ್ಲೆಕ್ಸ್, ಬ್ಯಾನರ್ಗಳು...
ಉಪಯೋಗಿಸಿ ನಿಮ್ಮ ಸೋರುತ್ತಿರುವ ಮನೆ–ಮನಗಳನ್ನ ಅದರಲ್ಲಿ
ಮುಚ್ಚಿ ಮಲಗಲು....
ಇದು ನಮ್ಮ ಕಡೆಯಿಂದ ನಿಮಗೆ ಕೊಡುವ ಉಚಿತ
ಕೊಡುಗೆಗಳು.......

– ಕೃಷ್ಣೇಗೌಡ ಟಿ.ಎಲ್.



ಅಭೂತಪೂರ್ವ ಸ್ಪಂದನ. ಕೋಮುವಾದದ ವಿರುದ್ಧ,
ಅದೂ ತುಳುನಾಡಿನ ಮಣ್ಣಿನಲ್ಲಿ. ಜನತೆಯನ್ನು ಬಹುಕಾಲ
ದಾರಿತಪ್ಪಿಸಲಾಗದು. ಬಂದ್ ವಾಪಾಸ್ ಪಡೆಯಿರಿ. ಇಪ್ಪತ್ತೈದು
ಸಾವಿರ ಜನ ಸೇರಿಸಿ ತೋರಿಸುತ್ತೇವೆ ಎಂದು ಸವಾಲು ಹಾಕಿದ್ದೆವು.
ಈಗ ಬಂದ್ ನಡುವೆಯೇ ಇಪ್ಪತ್ತೈದು ಸಾವಿರ ಜನ...
ಮತಾಂಧ ಶಕ್ತಿಗಳ ಯಾವುದೇ ಬಂದ್, ಬೆದರಿಕಗಳಿಗೂ ಜಗ್ಗದೇ
ಮತೀಯವಾದದ ವಿರುದ್ಧ, ಕೋಮು ಸಾಮರಸ್ಯಕ್ಕಾಗಿ ಸಾವಿರ
ಸಾವಿರ ಸೌಹಾರ್ಧ ಪ್ರಿಯರ ದೃಢವಾದ ಹೆಜ್ಜೆಗಳು..

ಟಾಮ್ ಜೇಕಬ್ ಅರಕ್ಕಲ್

ಸಂಘಪರಿವಾರದವರು ಪಿಣರಾಯ್ ರವರನ್ನು ಮಂಗಳೂರಿಗೆ ಕಾಲಿಡಲು ಬಿಡುವುದಿಲ್ಲ ಎಂದರು, ಪಿಣರಾಯ್ ರೈಲಿನ ಮೂಲಕ ಮಂಗಳೂರಿಗೆ ಬಂದು ರೈಲ್ವೇ ಪ್ಲಾಟ್ ಫಾರ್ಮ್ ಮೇಲೆ ನಡೆದುಕೊಂಡು ಬಂದರು.

ಅವರು ಸೌಹಾರ್ದ ರ್ಯಾಲಿ ನಡೆಯಲು ಬಿಡುವುದಿಲ್ಲ ಎಂದು ದಕ್ಷಿಣ ಕನ್ನಡ ಜಿಲ್ಲೆ ಬಂದ್ ಮಾಡಿದರು.

ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಎಂಬಂತೆ ನದಿಗಳಾಗಿ ಹರಿದು ಮಂಗಳೂರಿಗೆ ಬಂದರು.

ಅವರು ಪಿಣರಾಯ್ ರವರನ್ನು ಭಾಷಣ ಮಾಡಲು ಬಿಡುವುದಿಲ್ಲ ಎಂದರು. ಒಂದು ಗಂಟೆಗಳ ಕಾಲ 10 ಸಾವಿರಕ್ಕೂ ಹೆಚ್ಚು ಜನ ಮಂತ್ರ ಮುಗ್ದರಾಗಿ ಪಿಣರಾಯಿ ಭಾಷಣ ಕೇಳಿದರು.

ಎಲ್ಲವೂ ನಾವಂದುಕೊಂಡಂತೆ ಯಶಸ್ವಿಯಾಗಿ ಮುಗಿದಿದೆ. ಈ ಮಧ್ಯ ಬಂದ್ ಗೆ ಕರೆ ಕೊಟ್ಟು ನಾವು ಸೌಹಾರ್ದತೆಯ ವಿರೊಧಿಗಳು ಎಂದು ಮತ್ತೊಮ್ಮೆ ಸಾಬೀತು ಪಡಿಸಿದ ಸಂಘಪರಿವಾರದ ಗ್ಯಾಂಗ್ ಅಂತಿಮವಾಗಿ ಇಂಗು ತಿಂದ ಮಂಗನಂತಾಗಿದೆ. ಕರಾವಳಿಯನ್ನು ಕರ್ನಾಟಕದ ಪ್ರಯೋಗಶಾಲೆ ಎಂದು ಕೊಂಡಿದ್ದ ಸಂಘಪರಿವಾರಕ್ಕೆ ಸೋಲುಂಟಾಗಿದೆ. ಕರಾವಳಿಯನ್ನು ರಾಜ್ಯದ ಸೌಹಾರ್ದ ಬೀಡನ್ನಾಗಿ ಮಾಡುತ್ತೇವೆಂದು ಪಣತೊಟ್ಟ #CPIM ಕಾರ್ಯಕರ್ತರಾದ ನಾವು ಹುಮ್ಮಸ್ಸಿನಿಂದಿದ್ದೇವೆ. ಮಾತ್ರವಲ್ಲ ಕೋಮುವಾದದ ವಿರುದ್ದ ನಿಜವಾಗಲೂ ಹೋರಾಟ ಮಾಡುವವರು ನಾವು ಮಾತ್ರ ಎಂಬುದನ್ನು ನಾವು ನಿರೂಪಿಸಿದ್ದೇವೆ. ದೇಶದ ಐಕ್ಯತೆ, ಸೌಹಾರ್ದತೆಗಾಗಿಯೇ ದೇಶಾದ್ಯಂತ ಸಾವಿರಾರು ಕಾರ್ಯಕರ್ತರನ್ನು ಕಳೆದುಕೊಂಡ ಏಕೈಕ ಪಕ್ಷ ಇದು.

– ನವೀನ್ ಕುಮಾರ್

ಸೌಹಾರ್ದ ರ್ಯಾಲಿಗೆ ಬೆಂಬಲ ನೀಡಿದವರು

ನಮ್ಮಗಳ ಅಭಿಪ್ರಾಯ ಬೇಧಗಳು, ಪುಡಿ ಜಗಳಗಳ ಆಚೆಗೂ
ಜನ ಹೋರಾಟಗಳು ಇವತ್ತಿನ ಜರೂರು. ಇವು ನಡೆಯಬೇಕು,
ನಡೆಯುತ್ತಲೇ ಇರಬೇಕು. ತುಂಬಾ ಟೈಮಿದೆ, ನಮ್ಮ ಜಗಳವನ್ನು
ನಂತರ ಮುಂದುವರೆಸೋಣ. ಕೋಮುವಾದ ಎದುರಿಸಿ
ಮಂಗಳೂರಿನಲ್ಲಿ ಗೆಳೆಯರು ನಡೆಸುತ್ತಿರುವ ಐಕ್ಯತಾ ರ್ಯಾಲಿ
ಯಶಸ್ವಿಯಾಗಲಿ. ಹೋರಾಟಕ್ಕೆ ಮತ್ತು ಗೆಳೆಯರಿಗೆ ಆಲ್ ದಿ ಬೆಸ್ಟ್.

– ಟಿ ಕೆ ದಯಾನಂದ

ಆರೆಸ್ಸೆಸ್‌ನ ಲಾಠಿ, ಖಡ್ಗಗಳ ಝುಳಪಿಸುವಿಕೆಯ.....

ಪುಟ 11 ರಿಂದ

ಚಾಕುತೋರಿಸಿ, ಅವರನ್ನು ಬರುವಂತೆ ಮಾಡಿ, ಆ ಇಬ್ಬರ ಯುವತಿಯರ ಮೇಲೆ ಸರಣಿ ಅತ್ಯಾಚಾರ ಮಾಡಲಾಯಿತು. ಇಂತಹ ಕೃತ್ಯಗಳು ಪಂಜಾಬ್, ಜಾರ್ಖಂಡ್, ಜಮ್ಮು-ಕಾಶ್ಮೀರದಲ್ಲಿ ನಿರಂತರವಾಗಿ ನಡೆಯುತ್ತಲಿವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಘ ಪರಿವಾರದ ಮುಂದಾಳುಗಳನ್ನು ಅವರೇ ಕೊಲೆಮಾಡಿರುವುದನ್ನು ನಾವು ನೋಡುತ್ತಿದ್ದೇವೆ. ಇದೇ ಪೆಬ್ರವರಿ 19 ಕ್ಕೆ, ಕಟೀಲು ಯಕ್ಷಗಾನದಲ್ಲಿ ಆಡುವವರ ಹಣ ದೋಚಿದ ಪ್ರಕರಣ ಹೊರಗೆ ಬರುತ್ತದೆ ಎಂಬ ಕಾರಣದಿಂದ ಪ್ರತಾಪ್ ಪೂಜಾರಿ ಎಂಬ ಹಿಂದೂ ಜಾಗರಣ ವೇದಿಕೆಯ ಸದಸ್ಯನನ್ನು ಸಂಘ-ಪರಿವಾರದವರೇ ಕೊಲೆ ಮಾಡಿದ್ದಾರೆ. ವಿನಾಯಕ ಬಾಳಿಗಾ ಎಂಬುವರು ಬಿಜೆಪಿ ಪಕ್ಷದ ಕಾರ್ಯಕತರು. ಅವರು ದೇವಸ್ಥಾನಕ್ಕೆ ಹೋಗುವಾಗ ದಾರಿಯಲ್ಲಿ ಕೊಲೆ ಮಾಡಲಾಯಿತು. ನಮೋ ಬ್ರಿಗೇಡ್‌ನ ಸ್ಥಾಪಕ ನರೇಂದ್ರ ಶೆಣೈ ಮತ್ತು ಲೋಕಸಭಾ ಸದಸ್ಯ ನಳಿನ ಕುಮಾರ್ ಕಟೀಲ್ ಕೂಡಾ ಈ ಪ್ರಕರಣದಲ್ಲಿ ಆರೋಪಿಗಳು. ಇನ್ನೊಬ್ಬ ಬಿಜೆಪಿ ಕಾರ್ಯಕರ್ತ ಉಡುಪಿಯ ಪ್ರವೀಣ ಪೂಜಾರಿಯನ್ನು ಗೋಸಾಗಾಟದ ಹೆಸರಲ್ಲಿ ಕೊಲೆ ಮಾಡಲಾಯಿತು.

ಕೇರಳದಲ್ಲಿ ಶ್ರೀ ನಾರಾಯಣ ಗುರುವಿನಿಂದಾಗಿ ಒಂದು ನವೋದಯ ಚಳುವಳಿ ನಡೆದದ್ದು ಮತ್ತು ಅದರ ಮುಂಧುವರಿಕೆಯಾಗಿದ್ದು, ಈ ಪ್ರದೇಶಕ್ಕೂ ನಾರಾಯಣ ಗುರುಗಳು ಬಂದು ಅವರ ಪ್ರಭಾವ ಬೀರಿದ್ದರು ಎಂದು ನಿಮಗೆ ಗೊತ್ತಿದೆ. ಈ ನವೋದಯ ಚಳುವಳಿ ಮುಂದುವರೆದು ಕೇರಳ ಒಂದು ಪ್ರಬಲ ಸೆಕ್ಯುಲರ್ ಸಮಾಜವಾಗಿ ವಿಕಾಸವಾಯಿತು. ಜಾತ್ಯಾತೀತ ಶಕ್ತಿಗಳು ಒಂದಾದುವು. ಹಿಂದುಳಿದ ವರ್ಗದ ಜನರು ಒಂದಾದರು. ಈ ಶಕ್ತಿಯನ್ನು ಒಡೆದು ಹಾಕಲು ಆರೆಸ್ಸೆಸ್ ತಂತ್ರ ಪ್ರಾರಂಭವಾಯಿತು. ಕಮ್ಯೂನಿಸ್ಟ್ ಪಕ್ಷದ ಮೇಲೆ ಆಕ್ರಮಣಾಕಾರಿ ದಾಳಿಗಳು ಪ್ರಾರಂಭವಾದುವು. ಸುಮಾರು ಆರುನೂರು ಮಂದಿ ಕಮ್ಯುನಿಸ್ಟ್ ಸಂಗಾತಿಗಳು ವಿಚ್ಛಿದ್ರಕಾರಿ ಶಕ್ತಿಗಳನ್ನು ಎದುರಿಸಿ ಪ್ರಾಣತ್ಯಾಗ ಮಾಡಿದ್ದಾರೆ. ಅದರಲ್ಲಿ 205 ಮಂದಿ ನಮ್ಮ ಯುವ ಕಣ್ಣಣಿಗಳನ್ನು ಸಂಘ ಪರಿವಾರದವರೇ ಕೊಲೆ ಮಾಡಿದ್ದಾರೆ. ಅವರು ಯಾವ ತಪ್ಪನ್ನೂ ಮಾಡಿಲ್ಲ. ಅವರ ಒಂದೇ ಒಂದು ತಪ್ಪು ಎಂದರೆ ಸೆಕ್ಯುಲರ್ ವಾದದ ಪರವಾಗಿ ಕೋಮುವಾದದ ವಿರುದ್ಧವಾಗಿ ಪ್ರಬಲ ನಿಲುವು ತೆ-ಗೆದುಕೊಂಡದ್ದು.

ಮಂಗಳೂರಿನ ಸೌಹಾರ್ದ ರ್‍ಯಾಲಿಗೆ ಆಗಮಿಸಬೇಕೆಂದು 4 ತಿಂಗಳ ಮೊದಲು ಕಾ। ಶ್ರೀರಾಮ ರೆಡ್ಡಿಯವರು ದೂರವಾಣಿಯಲ್ಲಿ ಮಾತನಾಡಿದ್ದರು. ಇದೀಗ ಕಾಲ ಪರಿಪಕ್ವವಾಗಿ ನಾನು ಸಮ್ಮತಿಯನ್ನು ಸೂಚಿಸಿದ್ದೆ. ಯಾವಾಗ ಪಿಣರಾಯಿ ವಿಜಯನ್ ಮಂಗಳೂರಿಗೆ ಬರುತ್ತಾ-ರೆಂದು ತಿಳಿಯಿತೊ, ಅಂದಿನಿಂದಲೇ ಆರೆಸ್ಸೆಸ್‌ನವರ ಅಸಹಿಷ್ಣುತೆ ತಾರಕಕ್ಕೇರಿದೆ. ಆರೆಸ್ಸೆಸ್, ಬಿಜೆಪಿ ಹಾಗೂ ಸಂಘ ಪರಿವಾರದವರು ನನ್ನನ್ನು ಮಂಗಳೂರಿಗೆ ಕಾಲಿಡಲು ಬಿಡುವುದಿಲ್ಲ ಎಂದು ವೀರಾವೇಶದಿಂದ ಹೇಳಿಕೆ ಕೊಟ್ಟರು. ಮಂಗಳೂರು ಬಂದ್ ನಡೆಸಿದ್ದಾರೆ. ಪಕ್ಷದ ಬ್ಯಾನರ್ ಫ್ಲೆಕ್ಸ್‌ಗಳನ್ನು ಹರಿದಿದ್ದಾರೆ.

ಕೇರಳದ ಒಬ್ಬ ಮುಖ್ಯಮಂತ್ರಿಯಾಗಿ ಬರುವಾಗ ಆಡಳಿತ ಯಂತ್ರದ ಸಂಪ್ರದಾಯದಂತೆ ನನಗೆ ಭದ್ರತೆಯನ್ನು ಕೊಟ್ಟು ಕರ್ನಾಟಕದ ಸರಕಾರ ಎಲ್ಲಾ ಸಹಾಯಗಳನ್ನು ಒದಗಿಸಿ ಕೊಟ್ಟಿದ್ದಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ರೀತಿ ಭದ್ರತೆ ನಿಯಮಗಳನ್ನು ಪಾಲಿಸಿದ್ದಲ್ಲಿ ಮಾತ್ರ ಈ ಆರೆಸ್ಸೆಸ್ ಶಕ್ತಿಗಳನ್ನು ತಡೆಯಬಹುದಾಗಿದೆ. ಇದೊಂದು ಪಾಠವಾಗಿದೆ.

ನನ್ನ ವಿರುದ್ಧ ವೀರಾವೇಶದಿಂದ ಮಾತನಾಡಿದ ಸಂಘಪರಿವಾರದವರಿಗೆ ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ. ರಾತ್ರಿ ಬೆಳಗಾಗುವಾಗ ಆಕಾಶದಿಂದ ಉದುರಿ ಬಿದ್ದು ನಾನು ಮುಖ್ಯಮಂತ್ರಿಯಾಗಿಲ್ಲ. ಆರೆಸ್ಸೆಸ್ ನ ಬಗ್ಗೆ ಗೊತ್ತಿಲ್ಲದವನೂ ನಾನಲ್ಲ. ನಾನು ತಲಚ್ಚೇರಿಯಲ್ಲಿ ಕಾಲೇಜಿನಲ್ಲಿ ಓದು ಮುಗಿಸಿ ಒಬ್ಬ ಸಾಮಾನ್ಯ ಕಮ್ಯುನಿಸ್ಟ್ ಕಾರ್ಯಕರ್ತನಾಗಿ ಆರೆಸ್ಸೆಸ್ ನ ಲಾಠಿ, ಕಠಾರಿ, ಖಡ್ಗಗಳ ಝುಳಪಿಸುವಿಕೆಯ ಮಧ್ಯದಲ್ಲೇ ಓಡಾಡಿದ್ದೇನೆ. ಆಗ ನನಗೆ ಏನೂ ಮಾಡಲಾಗದವರು ಈಗೇನು ಮಾಡುತ್ತೀರಿ?

ಮಧ್ಯಪ್ರದೇಶದಲ್ಲಿ ನಾನು ಭಾಗವಹಿಸಬೇಕಾಗಿದ್ದ ಒಂದು ಸಭೆಗೆ ಹೋಗದಂತೆ ತಡೆದದ್ದರ ಬಗ್ಗೆ ನೀವು ಕೊಚ್ಚಿಕೊಳ್ಳುತ್ತೀದ್ದೀರಿ. ಒಬ್ಬ ಮುಖ್ಯಮಂತ್ರಿಯಾಗಿ ಇನ್ನೊಂದು ರಾಜ್ಯಕ್ಕೆ ಹೋದಾಗ, ಆ ರಾಜ್ಯ ಸರ್ಕಾರದ ನಿರ್ದೇಶನಕ್ಕೆ ಮರ್ಯಾದೆ ಕೊಡುವುದು ನಮ್ಮ ಧರ್ಮ. ಅದಕ್ಕಾಗಿ ಅಲ್ಲಿಯ ಸರ್ಕಾರದ ನಿರ್ದೇಶನದಂತೆ ನಾನು ಆ ಸಭೆಗೆ ಹೋಗಲಿಲ್ಲ. ಆದರೆ ನಾನು ಮುಖ್ಯಮಂತ್ರಿ ಅಲ್ಲದೆ ಇರುತ್ತಿದ್ದ-ರೆ ಖಂಡಿತವಾಗಿಯೂ ಇಂದ್ರ-ಚಂದ್ರರೂ ನನ್ನನ್ನು ತಡೆಯುವುದು ಸಾಧ್ಯವಿರಲಿಲ್ಲ ಎಂದು ಸ್ಪಷ್ಟಪಡಿಸುತ್ತೇನೆ. ನಿಮ್ಮ ಬೆದರಿಕೆಗಳಿಗೆ ನಾನು ಜಗ್ಗುವುದಿಲ್ಲ.

ಇಂತಹ ಬೆದರಿಕೆಗಳಿಗೆ ನಮ್ಮ ದೇಶದಲ್ಲಿ ಯಾವತ್ತೂ ದೃಢವಾದ ವಿರೋಧ ಬಂದಿದೆ. ಮಂಗಳೂರು ಈ ಸೌಹಾರ್ದ ರ್‍ಯಾಲಿಗೆ ಎಲ್ಲಾ ರೀತಿಯ ಸಹಕಾರ ಮಾಡಿದ ಮತ್ತು ನಾನು ಇಲ್ಲಿ ಬಂದು ಮಾತನಾಡಬಾರದೆಂಬ ಸಂಘಪರಿವಾರದ ಹಠಮಾರಿ ನಿಲುವನ್ನು ಪ್ರತಿಭಟಿಸಿ, ಈ ರ್‍ಯಾಲಿಯಲ್ಲಿ ಭಾಗವಹಿಸಿದ ಜನತೆಗೆ, ಮಾಧ್ಯಮ ಮಿತ್ರರಿಗೆ, ಪಕ್ಷದ ಸಂಗಾತಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿ, ಈ ಕಾರ್ಯಕ್ರಮವನ್ನು ಉದ್ಘಾಟಿಸಿ, ನನ್ನ ಮಾತುಗಳನ್ನು ಕೊನೆಗೊಳಿಸುತ್ತೇನೆ.

ಕೇರಳ ಮುಖ್ಯಮಂತ್ರಿ ಪಿನರಾಯಿ ವಿಜಯನ್ ಗೆ ವ್ಯಕ್ತವಾಗುತ್ತಿರುವ ವಿರೋಧ ಕೇವಲ ಮಂಗಳೂರು ಕೋಮುವಾದಕ್ಕೆ ಸೀಮಿತವಾಗಿ ನೋಡಬಾರದು. ಇದು ಕೇರಳ ಮತ್ತು ಕರ್ನಾಟಕದ ಸಂಬಂಧದ ಮೇಲೆ ಬೀರುವ ಪರಿಣಾಮವನ್ನು ಕರ್ನಾಟಕ ಎದುರಿಸಬೇಕಾಗುತ್ತದೆ. ಕರ್ನಾಟಕ ಎದುರಿಸುತ್ತಿರುವ ಅತಿ ದೊಡ್ಡ ಸಮಸ್ಯೆಯಾಗಿರುವ ಕಾವೇರಿ ವಿವಾದದಲ್ಲಿ ಕರ್ನಾಟಕದ ಬೆನ್ನಿಗೆ ನಿಂತಿದ್ದು ಇದೇ ಕೇರಳ. ಕಾವೇರಿಗಾಗಿ ಕಾನೂನು ಹೋರಾಟ ನಡೆಸುತ್ತಿರುವ ರಾಜ್ಯ ಸರಕಾರ ಮತ್ತು ಚಳುವಳಿ ನಡೆಸುತ್ತಿರುವ ಕರವೇ, ಕರ್ನಾಟಕ ರಣಧೀರ ಪಡೆ, ಜಯಕರ್ನಾಟಕ ಸಂಘಟನೆಗಳು ಸಂಘಪರಿವಾರದ ಕಿಡಿಗೇಡಿತನದಿಂದಾಗಿ ಕೇರಳ ಮತ್ತು ಕರ್ನಾಟಕ ಸಂಬಂಧ ಹಾಳಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಇದೆ.

ಎಲ್ಲಾ ಕನ್ನಡ ಪರ ಸಂಘಟನೆಗಳು ಐಕ್ಯತಾ ರ್‍ಯಾಲಿಯ ಜೊತೆಗೆ ನಿಂತು ಪಿನರಾಯಿ ವಿಜಯನ್ ಗೆ ಅದ್ದೂರಿ ಸ್ವಾಗತ ಕೋರಬೇಕಿರುವುದು ಕರ್ತವ್ಯವಾಗಿದೆ.

– ಹರೀಶ್ ಕುಮಾರ್ ಬಿ,
ಕರವೇ ನಲ್ನುಡಿ ಜಯ ಕರ್ನಾಟಕ ಸಂಘಟನೆ

ಎಸ್,ಎಫ್.ಐ ರಾಜ್ಯ ಸಮ್ಮೇಳನ



ಎಸ್.ಎಫ್.ಐ ರಾಜ್ಯ ಸಮ್ಮೇಳನ ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಫೆಬ್ರವರಿ 23 ರಿಂದ 26 ವರೆಗೆ ಸಿ.ಬಿ.ಎಸ್. ಕಲ್ಯಾಣ ಮಂಟಪದಲ್ಲಿ ನಡೆಯಿತು.

23 ರಂದು ಬಾಬು ಜಗಜೀವನರಾಮ್ ವೃತ್ತದ ಬಳಿ ಬಹಿರಂಗ ಸಭೆ ನಡೆಯಿತು. ಕೂಡಲ ಸಂಗಮದ ಶ್ರೀ ಬಸವಜಯ ಮೃತ್ಯುಂಜಯ ಮಹಾಸ್ವಾಮಿಗಳು ಚಾಲನೆ ನೀಡಿದರು. ಎಸ್.ಎಫ್.ಐ ಅಖಿಲ ಭಾರತ ಪ್ರಧಾನಕಾರ್ಯದರ್ಶಿ ವಿಕ್ರಂ ಸಿಂಗ್ ಮುಖ್ಯ ಮುತಿಥಿಯಾಗಿ ಮಾತನಾಡಿದರು.ರಾಜ್ಯ ಕಾರ್ಯದರ್ಶಿ ಗುರುರಾಜದೇಸಾಯಿ ಪ್ರಾಸ್ತಾವಿಕವಾಗಿ ಮಾತನಾಡಿದರೆ, ರಾಜ್ಯಾಧ್ಯಕ್ಷ ವಿ.ಅಂಬರೀಶ್ ಅಧ-ಕ್ಷತೆ ವಹಿಸಿದ್ದರು.ಗಂಗಾತಿಯ ಹಿರಿಯ ಸಾಹಿತಿ ನಿಜಲಿಂಗಪ್ಪ ಮೆಣಸಗಿ, ಕರ್ನಾಟಕ ಪ್ರಾಂತರೈತ ಸಂಘದ ಮುಖಂಡ ಜಿ.ನಾಗರಾಜ್ ಮುಖಂಡರಾದ ಬಸವರಾಜ ಪೂಜಾರ, ರೇಣುಕಾ ಕಹಾರ, ಶಬ್ಬೀರ್, ಚಿಕ್ಕರಾಜು, ಅಮರೇಶ ಕಡಗದ್, ಗ್ಯಾನೇಶ್ ಕಗದ್ ಸೇರಿದಂತೆ ಸಾವಿರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಎಸ್,ಎಫ್.ಐ ನ 14 ನೇ ರಾಜ್ಯ ಸಮ್ಮೇಳನದಲ್ಲಿ ನೂತನ ರಾಜ್ಯಾಧ್ಯಕ್ಷರಾಗಿ ವಿ.ಅಂಬರೀಶ್, ರಾಜ್ಯ ಕಾರ್ದದರ್ಶಿಯಾಗಿ ಗುರುರಾಜ್ ದೇಸಾಯಿ, 17 ಜನರ ಪದಾಧಿಕಾರಿ ಮತ್ತು 60 ಜನರ ರಾಜ್ಯ ಸಮಿತಿ ಪ್ರಜಾಸತ್ತಾತ್ಮಕವಾಗಿ ಆಯ್ಕೆಗೊಂಡಿದೆ.





ರಾಜ್ಯಾಧ್ಯಕ್ಷರಾಗಿ ವಿ.ಅಂಬರೀಶ್, ರಾಜ್ಯ ಕಾರ್ದದರ್ಶಿಯಾಗಿ ಗುರುರಾಜ್ ದೇಸಾಯಿ,

---

ಫ್ಯಾಸಿಸಂನ ನೈಜ ಮುಖ ಅನಾವರಣ......

ಪುಟ 7 ರಿಂದ

ಮಗುವಾಗಿದ್ದಾಗ ತಾನು ಹೇಗೆ ಪಾಕಿಸ್ತಾನವನ್ನು, ಎಲ್ಲಾ ಮುಸ್ಲಿಮ್‌ರನ್ನು ದ್ವೇಷಿಸುತ್ತಿದೆ. ಅವರ ಮೇಲೆ ಹಗೆ ಸಾಧಿಸಲು ಬಯಸಿದ್ದೆ ಎನ್ನುವುದನ್ನು ಅವಳು ಹೇಳಿಕೊಂಡಿದ್ದಾಳೆ. ಆದರೆ ಅವಳ ತಾಯಿ, ಗಂಡನನ್ನು ಕಳೆದುಕೊಂಡ ಸೈನಿಕನ ಪತ್ನಿ, ಅವಳಿಗೆ ತಿಳಿಹೇಳುತ್ತಾಳೆ. ತನ್ನ ತಂದೆಯನ್ನು ಕೊಂದಿದ್ದು ಇನ್ನೊಂದು ರಾಷ್ಟ್ರವಲ್ಲ, ಯುದ್ಧ ಎನ್ನುವುದನ್ನು ತಾಯಿಯಿಂದ ಅವಳು ಕಲಿಯುತ್ತಾಳೆ. ಯುದ್ಧಗಳನ್ನು ನಿಲ್ಲಿಸಿ, ದ್ವೇಷವನ್ನು ಬಿಡಿ ಎಂದು ಕೌರ್ ಈ ವಿಡಿಯೋದಲ್ಲಿ ಪ್ರಾರ್ಥಿಸುತ್ತಾಳೆ.

ನಾಲ್ಕು ವರ್ಷಗಳಿಂದ ಸಾಹಿತ್ಯವನ್ನು ಕಲಿಸುತ್ತ ಬಂದಿರುವ ನನಗೆ ಯುದ್ಧದ ವಿರುದ್ಧ, ಶಾಂತಿಯ ಪರವಾಗಿ ಹೀಗೆ ಮನಕಲುಕುವ ಮಾತುಗಳು, ಅದೂ ಅಪ್ಪನನ್ನೂ ಕಳೆದುಕೊಂಡ ಮಗಳೆಂದ ಬಂದಿರುವ ಇನ್ನೊಂದು ಉದಾಹರಣೆ ನೆನಪಾಗುತ್ತಿಲ್ಲ. ಇಂಥ ಯುವ ಮನಸ್ಸು ನಮ್ಮೊಂದಿಗೆ ಇದೆಯನ್ನುವುದು ನಮಗೊಂದು ಆಶಾಕಿರಣ. ಆದರೆ ನಮ್ಮ ಪುರುಷ ಸಿಂಹಗಳು ಕೌರ್ ಅವರನ್ನು ಪೀಡಿಸಿ ಅವಳನ್ನು ಮಾನಭಂಗ ಮಾಡುವ ಬೆದರಿಕೆಯನ್ನು ಕಳಿಸಿದವು. 'ನಾನು ಹೇಳಬೇಕಾದದನ್ನು ಹೇಳಿದ್ದೇನೆ' ಎಂದು ಅವಳು ಈಗ ಪ್ರತಿಭಟನೆಯಿಂದ ಹಿಂದೆ ಸರಿದಿದ್ದಾಳೆ. ಅಂದ ಹಾಗೆ ಅವಳ ಅತ್ಯಂತ ಮಾನವೀಯವಾದ ಮಾತುಗಳನ್ನು ಭೂಗತ ಕೊಲೆಗಾರ ದಾವೂದ್ ಇಬ್ರಾಹಿಮ್‌ನನೊಂದಿಗೆ ಹೋಲಿಸಿ ಸಂದೇಶವನ್ನೂ ಕಳಿಸಿದವರಲ್ಲಿ ಒಬ್ಬರು ಕರ್ನಾಟಕದ ಜನಪ್ರತಿನಿಧಿ! ಆಹಾ ನಮ್ಮ ಪುರುಷ ಕೇಸರಿಗಳು! ಮಗುವಿನಂಥ ಮುಗ್ಧವಾದ ಇವರುಗಳ ಮನಸ್ಸಿನಲ್ಲಿ ವಿಷವನ್ನು ಬಿತ್ತುತ್ತಿರುವವರು ಯಾರು ಎನ್ನುವುದು ನನಗೆ ತಿಳಿಯದಾಗಿದೆ.

ನಾವು ಚರಿತ್ರೆಯಿಂದ ಕಲಿಯಬೇಕಿದೆ. ಜರ್ಮನಿಯಲ್ಲಿ ನಾಜಿ ಸಿದ್ಧಾಂತದ ಮೂಲಕ ಅಧಿಕಾರಕ್ಕೆ ಬಂದವರು ಮಾಡಿದ ಮೊದಲ ಕೆಲಸಗಳಲ್ಲಿ ಒಂದು ಪುಸ್ತಕಗಳನ್ನು, ಗ್ರಂಥಗಳನ್ನು ಸುಡುವುದು. 1930 ರ ದಶಕದಲ್ಲಿ ಜರ್ಮನ್ ವಿದ್ಯಾರ್ಥಿ ಸಂಘಟನೆಯು ಆಸ್ಟ್ರಿಯಾದಲ್ಲಿ ಸಾರ್ವಜನಿಕವಾಗಿ ಪುಸ್ತಕಗಳನ್ನು ಬೆಂಕಿಗೆ ಹಾಕುವ ಕಾರ್ಯಕ್ರಮವನ್ನು ನಡೆಸಿತು. ನಾಝಿ ಸಿದ್ಧಾಂತದ ವಿರುದ್ಧದ ವಿಚಾರಗಳು ಇವುಗಳಲ್ಲಿವೆ ಎನ್ನುವ ಕಾರಣಕ್ಕಾಗಿ ಹಾಗೆ ಮಾಡಿತು.

ಆನಂತರ ಆಲ್ಬರ್ಟ ಐನ್‌ಸ್ಟೆನ್ ಸೇರಿದಂತೆ ಜರ್ಮನಿಯ ವಿಶ್ವವಿದ್ಯಾನಿಲಯಗಳು ಹಾಗೂ ಇತರ ಸಂಶೋಧನಾ ವಿಭಾಗಗಳಿಂದ ಯಹೂದಿ ವಿಜ್ಞಾನಿಗಳು, ಚಿಂತಕರು ಅಲ್ಲದೆ ಹಿಟ್ಲರ್‌ನ ವಿರುದ್ಧ ಆಲೋಚಿಸುವ ಸಾವಿರಾರು ಪ್ರತಿಭಾವಂತರು ದೇಶವನ್ನೇ ತೊರೆಯುವಂತೆ ಮಾಡಲಾಯಿತು. ತದನಂತರ ಮನುಷ್ಯ ಚರಿತ್ರೆಯಲ್ಲಿಯೇ ಭೀಕರವಾದ ಮಹಾಯುದ್ಧವು ನಡೆಯಿತು. ಯುದ್ಧದ ಸಂದರ್ಭದಲ್ಲಿ ಜರ್ಮನ್ ರಾಷ್ಟ್ರವನ್ನು "ಶುದ್ಧೀಕರಿಸುವುದಕ್ಕಾಗಿ" 6 ಲಕ್ಷ ಯಹೂದಿಗಳನ್ನು ಯಾತನಾ ಶಿಬಿರಗಳಲ್ಲಿ ಕೊಲ್ಲಲಾಯಿತು. ಅಂದ ಹಾಗೆ ಈ ಶುದ್ಧೀಕರಣವನ್ನು ಮೆಚ್ಚಿ ನಾವು ಹಾಗೆ ಮಾಡಬಾರದೆ ಎಂದು ಬರೆದವರು ಭಾರತದ ಬಲಪಂಥೀಯ ಸಂಘಟನೆಯ ಪ್ರಮುಖ ಚಿಂತಕರಲ್ಲಿ ಒಬ್ಬರು. ಕೆಡುಕಿನ ಶಕ್ತಿಗಳು ವಿಚಾರವಂತರಿರುವ ಸಂಸ್ಥೆಗಳಿಂದಲೇ ತಮ್ಮ ಹಿಂಸಾಯಾತ್ರೆಯನ್ನು ಆರಂಭಿಸುತ್ತವೆ ಎನ್ನುವುದು ಚರಿತ್ರೆಯ ಸತ್ಯವಾಗಿದೆ.

ಓಲಾ-ಉಬೆರ್ ಬಿಕ್ಕಟ್ಟು, ದೇಶದ ಕಾನೂನು ಮತ್ತು ಪರ್ಯಾಯಗಳು

ಸಿದ್ದಯ್ಯ ಚಿಕ್ಕಮಾದೇಗೌಡ

ಈಗ ದೇಶದ ಹಲವು ನಗರಗಳಲ್ಲಿ ಚಾಲಕರು ಈ ವಿದೇಶಿ ಕಂಪನಿಗಳ ವಂಚನೆಯ ವಿರುದ್ಧ ಹೋರಾಟಕ್ಕಿಳಿದಿದ್ದಾರೆ. ಉಬೆರ್ ಕಂಪನಿ ದೆಹಲಿ ಮತ್ತು ಬೆಂಗಳೂರಿನ ಹೈಕೋರ್ಟ್ ಮೊರೆ ಹೋಗಿ ಚಾಲಕರು ಮುಷ್ಕರ ನಡೆಸದಂತೆ ತಡೆಯಾಜ್ಞೆ ತಂದಿದೆ. ಚಾಲಕರ ನಿಜವಾದ ಸಮಸ್ಯೆಗಳ ಬಗ್ಗೆ ನ್ಯಾಯಾಲಯಗಳಿಗೆ ಮನವರಿಕೆ ಮಾಡಿಕೊಡಲು ಸಾದ್ಯವಾಗಿಲ್ಲ. ಚಾಲಕರು ತಮಗೆ ಪ್ರೋತ್ಸಾಹಧನ ಹೆಚ್ಚಿಸಬೇಕೆಂಬ ಬೇಡಿಕೆ ಇಡುವುದರಿಂದ ಟ್ಯಾಕ್ಸಿ ಚಾಲಕ/ಮಾಲೀಕರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಿಗಲಾರದು. ದೇಶದ ನಿಯಮದಂತೆ ವಿದೇಶಿ ಕಂಪನಿಗಳು ನಡೆದುಕೊಳ್ಳುವಂತೆ ಒತ್ತಾಯಿಸಬೇಕು. ಇವಲ್ಲದೆ ಟ್ಯಾಕ್ಸಿ ಚಾಲಕರು/ಮಾಲಕರು ಸೇರಿ ಸಹಕಾರಿ ಸಂಘಟನೆ ಸ್ಥಾಪಿಸಿ ಅವುಗಳ ಮೂಲಕ ಗ್ರಾಹಕರಿಗೆ ಕಡಿಮೆ ದರದಲ್ಲಿ ಉತ್ತಮ ಸೇವೆ ಕೊಡುವ ಆಪ್-ಆಧಾರಿತ ಟ್ಯಾಕ್ಸಿ ಸೇವೆ ಆರಂಭಿಸುವುದು, ಇನ್ನೊಂದು ಪರ್ಯಾಯ ಸಾಧ್ಯತೆ.



ದೇಶದ ರಾಜಧಾನಿ ದೆಹಲಿ ಮತ್ತು ಹೈದರಾಬಾದ್ ನಂತರ ಬೆಂಗಳೂರು ನಗರದಲ್ಲೂ 2017ರ ಪೆಬ್ರವರಿ 22ರಿಂದ ಓಲಾ ಮತ್ತು ಉಬೆರ್ ವಿದೇಶಿ ಬಂಡವಾಳದ ಟ್ಯಾಕ್ಸಿ ಸೇವಾ ಕಂಪೆನಿಗಳ ಚಾಲಕರು/ಮಾಲೀಕರು ಮುಷ್ಕರಕ್ಕಿಳಿದು ಸುದ್ದಿಮಾಡಿದ್ದಾರೆ. ಬೆಂಗಳೂರಲ್ಲಿ ಚಾಲಕರು/ಮಾಲೀಕರು ಉಪವಾಶ ಸತ್ಯಾಗ್ರಹ ಆರಂಭಿಸಿದ್ದಾರೆ. ಈ ಮುಂಬಯಿ ನಗರದಲ್ಲೂ ಫೆ. 28ರಿಂದ ಮುಷ್ಕರ ನಡೆಸಲು ನಿರ್ಧರಿಸಿದ್ದಾರೆ. ದೆಹಲಿಯಲ್ಲಿ ಪೆಬ್ರವರಿ 10 ರಿಂದ ಅನಿರ್ಧಿಷ್ಟಾವಧಿ ಮುಷ್ಕರಕ್ಕೆ ಕರೆಕೊಡಲಾಗಿತ್ತು. ಈಗ 6 ರೂ. ಇರುವ ಪ್ರಯಾಣದರವನ್ನು ಹೆಚ್ಚಿಸಬೇಕು, ಚಾಲಕ/ಮಾಲೀಕರಿಗೆ ಕೊಡುತ್ತಿರುವ ಪ್ರೋತ್ಸಾಹಧನ ಹೆಚ್ಚಿಸಬೇಕು, ಅಪಘಾತ ಮತ್ತು ವಿಮಾ ಸೌಲಭ್ಯ ನೀಡಬೇಕು ಎಂಬುದು ಅಲ್ಲಿನ ಚಾಲಕರ ಬೇಡಿಕೆಯಾಗಿತ್ತು. ಅಲ್ಲಿನ ಕೇಜ್ರಿವಾಲ್ ಅವರ ಸರಕಾರವೂ ಕೇಂದ್ರದ ನಿರ್ಧಾರಕ್ಕೆ ಕಾದು ಕುಳಿತಿದೆ.



ಓಲಾ-ಉಬೇರ್ ಟ್ಯಾಕ್ಸಿ ಸೇವಾ ಮಾದರಿ ಬಿಕ್ಕಟ್ಟು

ಈ ವಿದೇಶೀ ಕಂಪನಿಗಳು ಸ್ಥಳೀಯ ಸಾರಿಗೆ ಇಲಾಖೆ ವೈಜ್ಞಾನಿಕವಾಗಿ ನಿಗದಿಪಡಿಸಿದ ದರಕ್ಕಿಂತ ಅತೀ ಕಡಿಮೆ ದರದ ಪ್ರಯಾಣದರ ನಿಗದಿಮಾಡುವ ಮೂಲಕ ಚಾಲಕರು/ಮಾಲೀಕರು ನಷ್ಟ ಅನುಭವಿಸುಂತೆ ಮಾಡಿವೆ. ಇದುವರೆಗೆ ಈ ಕಂಪನಿಗಳು ಚಾಲಕ/ಮಾಲೀಕರಿಗೆ ಕೊಡುತ್ತಿದ್ದ 'ಪ್ರೋತ್ಸಾಹಧನ' ಕಡಿತಗೊಳಿಸಿದ್ದೇ ಚಾಲಕರ ಕೋಪಕ್ಕೆ ಕಾರಣವಾಗಿದೆ. ಓಲಾ ಕಂಪನಿ ತನ್ನ ಚಾಲಕರಿಗೆ ಪ್ರೋತ್ಸಾಹಧನ ಕೊಡಲು ಕಠಿಣ ಷರತ್ತುಗಳನ್ನು ವಿಧಿಸತೊಡಗಿದೆ. ದಿನದಲ್ಲಿ ಅಥವಾ ನಿರ್ಧಿಷ್ಠ ದಿನಗಳಲ್ಲಿ ಇಂತಿಷ್ಟು ಟ್ರಿಪ್ ಅಥವಾ ಇಂತಿಷ್ಟು ಗಳಿಕೆ ಮಾಡಿದರೆ ಮಾತ್ರ ಇಂತಿಷ್ಟು ಪ್ರೋತ್ಸಾಹಧನ ಕೊಡುವುದಾಗಿ ಷರತ್ತು ವಿಧಿಸುತ್ತದೆ. ಇಂತಹ ಷರತ್ತುಗಳು ದಿನದಿಂದ ದಿನಕ್ಕೆ ಬದಲಾಗುತ್ತದೆ. ಮಾತ್ರವಲ್ಲ ಬೇರೆ ಬೇರೆ ಚಾಲಕರಿಗೆ ಬೇರೆ ಬೇರೆ ಷರತ್ತುಗಳನ್ನು ವಿಧಿಸುತ್ತದೆ. ಉಬೆರ್ ಕಂಪನಿ ಕಿ.ಮೀ.ಗೆ 6 ಅಥವಾ 7 ರೂ ಪ್ರಯಾಣ ದರ ನಿಗದಿಮಾಡಿದ್ದರೂ, ದಿನದ ವಿವಿದ ಸಮಯಗಳಲ್ಲಿ ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ 1.2, 1.5. 2 ಮತ್ತು 2.5 ರಷ್ಟು ಪ್ರಯಾಣದರ ನಿಗದಿಮಾಡುತ್ತಾ ಆ ಪ್ರಯಾಣದರದ ಚಾಲಕರ ಗಳಿಕೆಯಲ್ಲಿ ಶೇ. 25 ರಷ್ಟು ಕಮೀಷನ್ ಪಡೆಯುತ್ತದೆ. ಚಾಲಕರಿಗೆ ಯಾವುದೇ ರೀತಿಯ ಪ್ರೋತ್ಸಾಹಧನ ನೀಡುವುದನ್ನು ಇತ್ತೀಚೆಗೆ ಸ್ಥಗಿತಗೊಳಿಸಿದೆ. ಇದು ಚಾಲಕ/ಮಾಲೀಕರಿಗೆ ನಷ್ಟವಾಗಲು ಕಾರಣವಾಗಿದೆ. ಓಲಾ ಕಂಪನಿ ಚಾಲಕರಿಗೆ ದಂಡ ವಿಧಿಸುವ ಮೂಲಕ ಮತ್ತಷ್ಟು ಶೋಷಣೆಗೆ ಇಳಿದಿದೆ. ಸಂಚಾರ ಒತ್ತಡದ ಕಾರಣದಿಂದ ಪ್ರಯಾಣಿಕರು ಗೊತ್ತುಪಡಿಸಿದ ಸಮಯಕ್ಕೆ ಒಂದೆರಡು ನಿಮಿಷ ತಡವಾಗಿ ಸ್ಥಳ ತಲುಪಿದರೂ ಚಾಲಕರಿಂದ 500 ರೂ ದಂಡ ವಸೂಲಿ ಮಾಡುತ್ತದೆ. ನೋಟು ರದ್ದತಿ ನಂತರ ಚಾಲಕರ ಆಧಾಯವೂ ಕಡಿತಗೊಂಡಿದೆ. ಕಂಪನಿಗಳ ಇಂತಹ ಷರತ್ತುಗಳನ್ನು ಪೂರೈಸಲಾಗದೆ ತಾವು ದಿನೆವೆಲ್ಲಾ ದುಡಿದ ಹಣ ಇಂದನದ ವೆಚ್ಚ ಮತ್ತು ಕಂಪನಿ ಕಡಿತಗೊಳಿಸುವ ಕಮೀಷನ್ ಕೊಟ್ಟು ಬರಿಗೈಯಲ್ಲಿ ಮನೆಗೆ ಮರಳಬೇಕಾದ ಅನಿವಾರ್ಯತೆ ನಿರ್ಮಾಣವಾಗಿದೆ. ವಾಹನದ ನಿರ್ವಹಣಾ ವೆಚ್ಚ, ವಿಮೆ, ತೆರಿಗೆ ಮತ್ತು ಪ್ರತಿ ತಿಂಗಳು ಬ್ಯಾಂಕಿನ ಸಾಲದ ಕಂತು ಕಟ್ಟಲು ಮತ್ತಷ್ಟು ಸಾಲಮಾಡಬೇಕಾದ ಅನಿವಾರ್ಯತೆಗೆ ಸಿಲುಕಿದ್ದಾರೆ.

ನಿರುದ್ಯೋಗ ಸಮಸ್ಯೆ ಕಾರಣದಿಂದ ತಮ್ಮ ವಿದ್ಯಾಭ್ಯಾಸಕ್ಕೆ ಅನುಗುಣವಾಗಿ ಉದ್ಯೋಗ ಸಿಗದ ಬಹಳಷ್ಟು ಪದವೀದರರೂ ಬ್ಯಾಂಕುಗಳಿಂದ ಸಾಲ ಪಡೆದು ಸ್ವಂತ ಕಾರು ಖರೀದಿಸಿ ಸೇವೆ ಸಲ್ಲಿಸಲು ಮುಂದಾಗಿದ್ದಾರೆ. ಓಲಾ ಮತ್ತು ಉಬೆರ್ ಕಂಪನಿಗಳ 'ಟ್ಯಾಕ್ಸಿ ಚಾಲಕರಾಗಿ, ತಿಂಗಳಿಗೆ 50 ರಿಂದ 80 ಸಾವಿರ ಸಂಪಾದಿಸಿ' ಎಂಬ ಜಾಹಿರಾತುಗಳೂ ಸಹ ನಿರುದ್ಯೋಗಿ ಪದವೀದರರನ್ನು ಟ್ಯಾಕ್ಸಿ ಓಡಿಸುವಂತೆ ಪ್ರೇರಣೆ ನೀಡಿವೆ. ಇದರಿಂದ ಟ್ಯಾಕ್ಸಿಗಳ ಸಂಖ್ಯೆ ಹೆಚ್ಚಾಗಿ ಆಧಾಯ ಹಂಚಿಹೋಗುವ ಮೂಲಕ ಚಾಲಕರ ಆಧಾಯ ಕಡಿತಗೊಂಡಿದೆ. ಇದೂ ಅಲ್ಲದೆ ಓಲಾ ಕಂಪನಿ ಸ್ವತಃ ಬ್ಯಾಂಕಿನಿಂದ ಸಾಲ ಪಡೆದು ಸಾವಿರಾರು ಟ್ಯಾಕ್ಸಿಗಳನ್ನು ಖರೀದಿಸಿದೆ. ಆ ಟ್ಯಾಕ್ಸಿಗಳಿಗೆ ಚಾಲಕರನ್ನು ನೇಮಿಸಿಕೊಂಡು ಅವರಿಂದ 30 ಸಾವಿರ ರೂ ಮುಂಗಡ ಪಡೆದು, ಪ್ರತಿ ದಿನಕ್ಕೆ 950/1050 ರೂ. ಟ್ಯಾಕ್ಸಿ ಬಾಡಿಗೆ ಪಡೆಯುತ್ತಿವೆ. ನಾಲ್ಕು ವರ್ಷಗಳ ನಂತರ ಚಾಲಕರಿಗೇ ಆ ಟ್ಯಾಕ್ಸಿಯನ್ನು ಉಚಿತವಾಗಿ ಕೊಡುವುದಾಗಿ ಹೇಳುತ್ತದೆ. ಆದರೆ ಅಂತಹ ಚಾಲಕರು ಕಂಪನಿಯ ಷರತ್ತುಗಳನ್ನು ಪೂರೈಸಿ ನಾಲ್ಕು ವರ್ಷಗಳ ಕಾಲ ಟ್ಯಾಕ್ಸಿ ಓಡಿಸಲು ಸಾಧ್ಯವೇ ಎಂಬುದೇ ಇಲ್ಲಿರುವ ಪ್ರಶ್ನೆ. ನಾಲ್ಕು ವರ್ಷಗಳ ನಂತರ ಆ ಟ್ಯಾಕ್ಸಿ ಸೇವೆಗೆ ಅರ್ಹವಾಗಿರುವುದಿಲ್ಲ. ಇವೆಲ್ಲವೂ ಚಾಲಕರನ್ನು ರೊಚ್ಚಿಗೇಳಿಸಿದೆ.

ಬಿಕ್ಕಟ್ಟಿಗೆ ಕಾರಣ

ಈ ವಿದೇಶಿ ಕಂಪನಿಗಳ ಆಟಾಟೋಪಕ್ಕೆ ಕಡಿವಾಣ ಹಾಕಬೇಕಾದರೆ ಮೊದಲು ಅವುಗಳ ಶಕ್ತಿ ಸಾಮರ್ಥ್ಯದ ಬಗ್ಗೆ ತಿಳಿದುಕೊಳ್ಳಬೇಕು. ಅದಕ್ಕೆ ತಕ್ಕಂತೆ ಹೋರಾಟ ರೂಪಿಸಬೇಕು. ಓಲಾ ಮತ್ತು ಉಬೆರ್ ವಿದೇಶಿ ಬಂಡವಾಳ ಹೊಂದಿವೆ. ಓಲಾ ಮುಂಬಯಿ ಮೂಲದ್ದಾದರೂ ಅದರಲ್ಲಿ ವಿದೇಶಿ ಬಂಡವಾಳಗಾರರು ಬಂಡವಾಳ ಹೂಡಿಕೆ ಮಾಡಿದ್ದಾರೆ. ಉಬೆರ್ ಅಮೆರಿಕ ಮೂಲದ್ದು. ಕೇಂದ್ರ ಸರಕಾರದ ಜಾಗತೀಕರಣ ನೀತಿಗೆ ಅನುಗುಣವಾಗಿ ದೇಶದಲ್ಲಿ ಚಿಲ್ಲರೆ ವ್ಯಾಪಾರ ವಲಯ, ವಿಮಾ ವಲಯ, ಹಣಕಾಸು ವಲಯ ಮತ್ತು ಟ್ಯಾಕ್ಸಿ ಸೇವಾ ವಲಯಗಳಲ್ಲಿ ವಿದೇಶಿ ಬಂಡವಾಳಕ್ಕೆ ಮುಕ್ತ ಅವಕಾಶ ಮಾಡಿಕೊಡಲಾಗಿದೆ. ಟ್ಯಾಕ್ಸಿ ವಲಯವನ್ನು ದೇಶದ ಹಲವು ನಗರ ಮತ್ತು ಪಟ್ಟಣಗಳಲ್ಲಿ ಈ ವಿಧೇಶಿ ಕಂಪನಿಗಳು ತನ್ನ ಹಿಡಿತಕ್ಕೆ ಪಡೆದಿವೆ. ಗ್ರಾಹಕರನ್ನು ತನ್ನತ್ತ ಸೆಳೆಯಲು ರಿಯಾಯಿತಿ ದರದಲ್ಲಿ ಸೇವೆ ಸಲ್ಲಿಸುವುದು ಮತ್ತು ಚಾಲಕರಿಗೆ ಇದರಿಂದಾಗುವ ನಷ್ಟ ತುಂಬಿಕೊಡಲು ಪ್ರೋತ್ಸಾಹಧನದ ಹೆಸರಿನಲ್ಲಿ ಹಣ ಕೊಡುವ ಮೂಲಕ ಟ್ಯಾಕ್ಸಿ ಚಾಲಕರು ಮತ್ತು ಗ್ರಾಹಕರನ್ನು ತನ್ನತ್ತ ಸೆಳೆದುಕೊಂಡಿವೆ. ಇದಕ್ಕಾಗಿಯೇ ಭಾರತದಲ್ಲಿ ಹತ್ತಾರು ಸಾವಿರ ಕೋಟಿ ರೂ ವೆಚ್ಚಮಾಡಿವೆ. ಸ್ಥಳೀಯವಾಗಿ ಕಾರ್ಯನಿರ್ವಹಿಸುತ್ತಿದ್ದ ಟ್ಯಾಕ್ಸಿ ಏಜೆನ್ಸಿಗಳು ವಿದೇಶಿ ಕಂಪನಿಗಳ ದರ ಪೈಪೋಟಿ ಎದುರಿಸಲಾರದೆ ಬಾಗಿಲು ಮುಚ್ಚಿಕೊಂಡಿವೆ. ಒಂದು ಬಾರಿ ಪೈಪೋಟಿ ಕೊಡುವ ಇತರ ಟ್ಯಾಕ್ಸಿ ಸೇವೆಗಳನ್ನು ಮುಚ್ಚಿಸಿದ ಮೇಲೆ, ಏಕಸ್ವಾಮ್ಯ ದರಗಳನ್ನು ನಿರ್ಣಯಿಸಿ ಲಾಭ ಮಾಡುವುದು ಅಥವಾ (ಅಮೆಜಾನ್, ಫ್ಲಿಪ್-ಕಾರ್ಟ್ ಮುಂತಾದ ಇ-ಮಾರಾಟ ಕಂಪನಿಗಳಂತೆ) ಮಾರುಕಟ್ಟೆಯ ದೊಡ್ಡ ಗಾತ (ಅಥವಾ ಏಕಸ್ವಾಮ್ಯ)ದಿಂದ ವೆಚ್ಚ ಕಡಿಮೆ ಮಾಡಿ ಗ್ರಾಹಕರಿಗೆ ಕಡಿಮೆ ಬೆಲೆ ಹಾಗೂ ಟ್ಯಾಕ್ಸಿ ಚಾಲಕರಿಗೆ ಪ್ರೋತ್ಸಾಹಧನ ಮುಂದುವರೆಸುವುದು, ಈ ಕಂಪನಿಗಳ ವ್ಯೂಹವಾಗಿತ್ತು. ಬಂಡವಾಳ ಹೂಡಿಕೆ ಕಡಿಮೆಯಾಗುತ್ತಿರುವುದು, ಟ್ಯಾಕ್ಸಿ ಚಾಲಕರ ಪ್ರತಿಭಟನೆ/ಪ್ರತಿರೋಧಗಳಿಂದಾಗಿ ವ್ಯೂಹಗಳಿಗೆ ತೀವ್ರ ಕುತ್ತು ಬಂದಿದೆ. ಇತರ ಇ-ಮಾರಾಟ ಕಂಪನಿಗಳಂತೆ ಮಾರುಕಟ್ಟೆಯ ದೊಡ್ಡ ಗಾತ ಅಥವಾ ಏಕಸ್ವಾಮ್ಯ ಒಟ್ಟು ವೆಚ್ಚ ಕಡಿಮೆ ಮಾಡುವುದು ಸಾಧ್ಯವಿಲ್ಲ. ಹೀಗೆ ಓಲಾ-ಉಬೇರ್ ಟ್ಯಾಕ್ಸಿ ಸೇವಾ ಮಾದರಿ ಬಿಕ್ಕಟ್ಟಿಗೆ ಸಿಕ್ಕಿದೆ.

ದೇಶದ ಪ್ರತಿ ನಗರಗಳಲ್ಲೂ ಆಯಾ ಸಾರಿಗೆ ಇಲಾಖೆಗಳು ವೈಜ್ಞಾನಿಕ ರೀತಿಯಲ್ಲಿ ಆಟೋ ಮತ್ತು ಟ್ಯಾಕ್ಸಿಗಳಿಗೆ ಪ್ರಯಾಣದರ ನಿಗದಿಪಡಿಸಿವೆ. ಅದರಂತೆ ಬೆಂಗಳೂರು ನಗರದಲ್ಲಿ ಮಿನಿ ಟ್ಯಾಕ್ಸಿಗೆ ಕಿ.ಮೀ. ಒಂದಕ್ಕೆ ಎಸಿ 19.50 ರೂ ಮತ್ತು ನಾನ್-ಎಸಿ 14.50 ರೂ ನಿಗದಿಪಡಿಸಿದೆ. ನಿಯಮದಂತೆ ಇದಕ್ಕಿಂತ ಹೆಚ್ಚು ಅಥವಾ ಕಡಿಮೆ ದರದಲ್ಲಿ ಟ್ಯಾಕ್ಸಿ ಪ್ರಯಾಣದರ ನಿಗದಿಪಡಿಸುವಂತಿಲ್ಲ. ಈ ಕಂಪನಿಗಳು ಕಿ.ಮೀ.ಗೆ 6 ಮತ್ತು 7 ರೂ ದರ ನಿಗದಿಪಡಿಸುತ್ತವೆ. ಜೊತೆಗೆ ಪ್ರಯಾಣದ ಅವಧಿಗೆ ನಿಮಿಷಕ್ಕೆ 1/2 ರೂ ದರ ಮತ್ತು ಕಾಯುವಿಕೆ ದರ ನಿಗದಿಪಡಿಸುತ್ತವೆ. ಅದೂ ಅಲ್ಲದೆ ಬೇಡಿಕೆ ಹೆಚ್ಚಾದ ಸಮಯದಲ್ಲಿ ಹೆಚ್ಚು ದರ ನಿಗದಿಪಡಿಸುತ್ತವೆ. ಟ್ಯಾಕ್ಸಿಗಳು ಪಡೆದಿರುವ ಪರವಾನಗಿ ಪ್ರಕಾರ ಬೇರೆ ಬೇರೆ ಪ್ರಯಾಣಿಕರನ್ನು ಬೇರೆ ಬೇರೆ ಸ್ಥಳಗಳಿಂದ ಕರೆದೊಯ್ಯುವುದು ನಿಯಮ ಉಲ್ಲಂಘನೆಯಾಗುತ್ತದೆ. ಅದರಂತೆ ಓಲಾ ಶೇರ್ ಅಥವಾ ಉಬೆರ್ ಪೂಲ್ ಸೇವೆ ಅಕ್ರಮ ವ್ಯವಹಾರವಾಗುತ್ತದೆ. ನಮ್ಮ ದೇಶದ ನಿಯಮಗಳಿಗೆ ವಿದೇಶಿ ಕಂಪನಿಗಳು ಬೆಲೆಕೊಡುತ್ತಿಲ್ಲ. ಇಷ್ಟೆಲ್ಲಾ ನಿಯಮ ಉಲ್ಲಂಘನೆ ನಡೆಯುತ್ತಿದ್ದರೂ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ರಾಜ್ಯ ಸರಕಾರ ಮತ್ತು ಸಾರಿಗೆ ಇಲಾಖೆ ಹಿಂದೇಟು ಹಾಕುತ್ತಿವೆ. ಚಾಲಕರು ಒಂದು ವಾರ ಕಾಲ ಮುಷ್ಕರ ನಡೆಸಿದರೂ ರಾಜ್ಯ ಸರಕಾರ ಈ ವಿದೇಶಿ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತಿಲ್ಲ. ಕೇಂದ್ರ ಸರಕಾರ ತೆಗೆದುಕೊಳ್ಳಬಹುದಾದ ನಿರ್ಧಾರಕ್ಕೆ ಕರ್ನಾಟಕ ಸರಕಾರವೂ ಕಾದು ಕುಳಿತಿದೆ.

ಪ್ರಧಾನಿಯವರು ವಿದೇಶಗಳನ್ನು ಸುತ್ತುತ್ತಾ ದೇಶದಲ್ಲಿ ಬಂಡವಾಳ ಹೂಡುವಂತೆ ವಿದೇಶಿ ಬಂಡವಾಳಗಾರರಿಗೆ ಅಹ್ವಾನ ಮಾಡತೊಡಗಿದ್ದಾರೆ. ಆ ಕಂಪನಿಗಳಿಗೆ ದೇಶದಲ್ಲಿ ಮುಕ್ತ ಅವಕಾಶ ನೀಡುವುದಾಗಿ ಭರವಸೆ ಕೊಡುತ್ತಿದ್ದಾರೆ. ಇಂತಹ ಸಮಯದಲ್ಲಿ ಕೇಂದ್ರ ಸರಕಾರ ಟ್ಯಾಕ್ಸಿ ಸೇವಾವಲಯದಲ್ಲಿ ಬಂಡವಾಳ ಹೂಡಿರುವ ವಿದೇಶಿ ಕಂಪನಿಗಳನ್ನು ನಿಯಂತ್ರಿಸುತ್ತಾರೆಂಬ ಭರವಸೆ ಇಟ್ಟುಕೊಳ್ಳಲಾಗದು. ಒಂದು ವೇಳೆ ವಿದೇಶಿ ಕಂಪನಿಗಳನ್ನು ನಿಯಂತ್ರಿಸಲು ಮುಂದಾದರೆ ಇತರೆ ವಲಯಗಳಲ್ಲಿ ಬಂಡವಾಳ ಹೂಡಿಕೆ ಮಾಡಲು ವಿದೇಶಿಯರು ಹಿಂಜರಿಯುತ್ತಾರೆ. ಮತ್ತು ಅಂತಹ ನಿಯಂತ್ರಣ ವಿಶ್ವ ವ್ಯಾಪಾರ ಸಂಘಟನೆಯ ಜೊತೆ ಕೇಂದ್ರ ಸರಕಾರ ಮಾಡಿಕೊಂಡಿರುವ ಮುಕ್ತ ಮಾರುಕಟ್ಟೆ ವ್ಯವಸ್ಥೆಯ ಒಪ್ಪಂದದ ಉಲ್ಲಂಘನೆಯಾಗುತ್ತದೆ.

ದೇಶೀಯ ಕಾನೂನು ಪಾಲನೆ ಮತ್ತು ಇತರ ಪರ್ಯಾಯಗಳು

ಈಗ ದೇಶದ ಹಲವು ನಗರಗಳಲ್ಲಿ ಚಾಲಕರು ಈ ವಿದೇಶಿ ಕಂಪನಿಗಳ ವಂಚನೆಯ ವಿರುದ್ಧ ಹೋರಾಟಕ್ಕಿಳಿದಿದ್ದಾರೆ. ಉಬೆರ್ ಕಂಪನಿ ದೆಹಲಿ ಮತ್ತು ಬೆಂಗಳೂರಿನ ಹೈಕೋರ್ಟ್ ಮೊರೆ ಹೋಗಿ ಚಾಲಕರು ಮುಷ್ಕರ ನಡೆಸದಂತೆ ತಡೆಯಾಜ್ಞೆ ತಂದಿದೆ. ಚಾಲಕರ ನಿಜವಾದ ಸಮಸ್ಯೆಗಳ ಬಗ್ಗೆ ನ್ಯಾಯಾಲಯಗಳಿಗೆ ಮನವರಿಕೆ ಮಾಡಿಕೊಡಲು ಸಾದ್ಯವಾಗಿಲ್ಲ. ಚಾಲಕರು ತಮಗೆ ಪ್ರೋತ್ಸಾಹಧನ ಹೆಚ್ಚಿಸಬೇಕೆಂಬ ಬೇಡಿಕೆ ಇಡುವುದರಿಂದ ಟ್ಯಾಕ್ಸಿ ಚಾಲಕ/ಮಾಲೀಕರ ಸಮಸ್ಯೆಗಳಿಗೆ ಶಾಸ್ವತ ಪರಿಹಾರ ಸಿಗಲಾರದು. ದೇಶದ ನಿಯಮದಂತೆ ವಿದೇಶಿ ಕಂಪನಿಗಳು ನಡೆದುಕೊಳ್ಳುವಂತೆ ಒತ್ತಾಯಿಸಬೇಕು. ಸಾರಿಗೆ ಇಲಾಖೆ ನಿಗದಿಪಡಿಸಿದ ಪ್ರಯಾಣದರ ನಿಗದಿ ಪಡಿಸುವಂತೆ ಮತ್ತು ಚಾಲಕ/ಮಾಲೀಕರಿಂದ ಈ ಕಂಪನಿಗಳು ಶೇ. 10ಕ್ಕಿಂತ ಕಡಿಮೆ ಕಮೀಶನ್ ಪಡೆಯುವಂತೆ ಒತ್ತಾಯಿಸಬೇಕು. ಕಾರ್ಮಿಕ ಕಾನೂನುಗಳು ಚಾಲಕರಿಗೂ ಅನ್ವಯವಾಗುವಂತೆ ಒತ್ತಾಯಿಸಬೇಕು. ಜೊತೆ ಜೊತೆಗೆ ಕೇಂದ್ರ ಸರಕಾರದ ಜಾಗತೀಕರಣ ನೀತಿಗಳು ಮತ್ತು ಮುಕ್ತ ಆರ್ಥಿಕ ನೀತಿಗಳ ಪರಿಣಾಮದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಂಡು ಸಾರ್ವಜನಿಕರ ಬೆಂಬಲ ಪಡೆಯುವ ಪ್ರಯತ್ನ ಮಾಡಬೇಕು. ಟ್ಯಾಕ್ಸಿ ಚಾಲಕರ ಇಂದಿನ ಸಮಸ್ಯೆಗಳಿಗೆ ಮೂಲ ಕಾರಣ ನಮ್ಮ ದೇಶ ಒಪ್ಪಿಕೊಂಡಿರುವ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ನೀತಿಗಳು. ಈ ನೀತಿಗಳ ವಿರುದ್ಧ ಜನತೆ ದೊಡ್ಡಮಟ್ಟದಲ್ಲಿ ಹೋರಾಡದೇ ವಿದೇಶಿ ಕಂಪನಿಗಳ ಇಂತಹ ಆಟಾಟೋಪಗಳಿಗೆ ತಡೆ ಹಾಕಲಾಗದು.

ಇವಲ್ಲದೆ ಟ್ಯಾಕ್ಸಿ ಚಾಲಕರು/ಮಾಲಕರು ಸೇರಿ ಸಹಕಾರಿ ಸಂಘಟನೆ ಸ್ಥಾಪಿಸಿ ಅವುಗಳ ಮೂಲಕ ಗ್ರಾಹಕರಿಗೆ ಕಡಿಮೆ ದರದಲ್ಲಿ ಉತ್ತಮ ಸೇವೆ ಕೊಡುವ ಆಪ್-ಆಧಾರಿತ ಟ್ಯಾಕ್ಸಿ ಸೇವೆ ಆರಂಭಿಸುವುದು, ಇನ್ನೊಂದು ಪರ್ಯಾಯ ಸಾಧ್ಯತೆ. ಇದಕ್ಕೆ ಟ್ಯಾಕ್ಸಿ ಚಾಲಕರು/ಮಾಲಕರ ಬದ್ಧತೆ ಹಾಗೂ ಪ್ರಬಲ ಸಂಘಟನೆ, ಅಗತ್ಯ ಬಂಡವಾಳ ಹೂಡಿಕೆ ಹಾಗೂ ತಾಂತ್ರಿಕತೆ ನಿರ್ವಹಣೆ ಮಾಡುವ ಸಾಮರ್ಥ್ಯ ಬೇಕಾಗುತ್ತದೆ. ಇದು ಸವಾಲಿನ ಕೆಲಸ. ಆದರೆ ಅಸಾಧ್ಯವೇನಲ್ಲ. ಅಮೆರಿಕದ ಆಸ್ಟಿನ್ ನಗರದಲ್ಲಿ ಇಂತಹ ಪರ್ಯಾಯ ಕೆಲಸ ಮಾಡುತ್ತಿದ್ದು ಉಬೆರ್ ಆ ನಗರದಲ್ಲಿ ಸೇವೆ ಮುಚ್ಚಬೇಕಾಗಿದೆ. ಮುಂಬಯಿ ಮತ್ತು ಕೇರಳದಲ್ಲಿ ಈ ರೀತಿಯ ಪ್ರಯತ್ನ ನಡೆದಿತ್ತು. ಸರಕಾರ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಇಂತಹ ಪರ್ಯಾಯ ಬೆಳೆಸುವುದು ಬಿಟ್ಟು ಟ್ಯಾಕ್ಸಿ ಚಾಲಕರು/ಮಾಲಕರಿಗೆ ಬೇರೆ ಆಯ್ಕೆಗಳು ಇರಲಿಕ್ಕಿಲ್ಲ. ●

ನೋಟು ರದ್ಧತಿಯ ಲೆಕ್ಕಾಚಾರದ ಮೊದಲೇ ಜಿಡಿಪಿ ಬೆಳವಣಿಗೆಯ ತೀರ್ಮಾನ-ಎಷ್ಟು ಸಾಚಾ?

ನೋಟುರದ್ದತಿ ದೇಶದ ಆರ್ಥಿಕವನ್ನು ಹಾಳುಗೆಡವುತ್ತದೆ ಎಂಬೆಲ್ಲ ಊಹಾಪೋಹಗಳನ್ನು ಮೂರನೇ ತ್ರೈಮಾಸಿಕದ ಅಂಕಿ-ಅಂಶಗಳು ಸುಳ್ಳಾಗಿಸಿವೆ ಎಂದು ಮೋದಿ ಸರಕಾರದ ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಹೇಳಿದ್ದಾರೆ. ಏಕೆಂದರೆ ಕೇಂದ್ರೀಯ ಸಾಂಖ್ಯಿಕ ಸಂಘಟನೆ(ಸಿಎಸ್‌ಒ) ಪ್ರಕಟಿಸಿರುವ ಲೆಕ್ಕಾಚಾರದ ಪ್ರಕಾರ ಈ ವರ್ಷಧ ಜಿಡಿಪಿ ಬೆಳವಣಿಗೆ ದರ ಐಎಂಎಫ್ ಮತ್ತು ಇತರ ಆರ್ಥಿಕ ಲೆಕ್ಕಾಚಾರದ ಸಂಸ್ಥೆಗಳು ಭಾವಿಸಿದಂತೆ ಕಡಿಮೆಯಾಗುವುದಿಲ್ಲ, ಬದಲಿಗೆ ಈ ಹಿಂದಿನ ಅಂದಾಜಿನಂತೆ 7.1ಶೇ.ವೇ ಇರುತ್ತದೆಯಂತೆ.

ಈ ಅಂಕಿ-ಅಂಶವನ್ನು ತಗೊಂಡು ಎದೆ ತಟ್ಟಿಕೊಳ್ಳುವುದು ಆಗಲೇ ಆರಂಬವಾಗಿದೆ. ಪ್ರಧಾನ ಮಂತ್ರಿಗಳೇ ಅದಕ್ಕೇ ನೇತೃತ್ವ ನೀಡಿದ್ದಾರೆ, ನೋಟುರದ್ದತಿಯ ಟೀಕಾಕಾರರನ್ನು ಅಪಹಾಸ್ಯ ಮಾಡಿದ್ದಾರೆ. ಹಣಕಾಸು ಮಂತ್ರಿಗಳಂತೂ ಇದರಲ್ಲಿ ಹಿಂದೆ ಬೀಳಲು ಸಾಧ್ಯವಿಲ್ಲ. ಇದೀಗ ಮುಂದಿನ ದಿನಗಳಲ್ಲಿ ಆಳುವ ಪಕ್ಷದಲ್ಲಿ ಎದೆ ತಟ್ಟಿಕೊಳ್ಳುವ ಸ್ಪರ್ಧೆಯೇ ನಡೆಯಲಿದೆ ಎಂಬುದು ನಿರೀಕ್ಷಿಸಬಹುದಾದ ಸಂಗತಿಯೇ.

ಆದರೆ ನಿಜವಾಗಿಯೂ ಈ ಸಿಎಸ್‌ಒ ತೀರ್ಮಾನ ನಂಬಲರ್ಹವೇ? ಇದು ಬಹಳಷ್ಟು ಆರ್ಥಿಕ ತಜ್ಞರು ಎತ್ತಿರುವ ಪ್ರಶ್ನೆ. ಮುಖ್ಯವಾಗಿ ಸಿಎಸ್‌ಒ ಅಂಕಿ-ಅಂಶಗಳ ಇನ್ನೆರಡು ಸಂಗತಿಗಳು ಅವರಲ್ಲಿ ಇನ್ನೂ ಹೆಚ್ಚಿನ ಆಶ್ಚರ್ಯ ಹುಟ್ಟಿಸಿವೆ. ಇವು ಜಿಡಿಪಿ ಕುರಿತ ಸಿಎಸ್‌ಒ ಲೆಕ್ಕಾಚಾರವದ ಬಗ್ಗೆ ಸಂದೇಹ ಮೂಡಿಸುವ ಸಂಗತಿಗಳು ಎನ್ನುತ್ತಾರೆ ವಿಶ್ಲೇಷಕರು.

ಇದರಲ್ಲಿ ಮೊದಲನೆಯದ್ದು, ವೈಯಕ್ತಿಕ ಬಳಕೆ ಖರ್ಚಿನ ಪ್ರಮಾಣ ಎರಡನೇ ತ್ರೈಮಾಸಿಕಕ್ಕೆ(ಜುಲೈ -ಸಪ್ಟಂಬರ್ 2016) ಹೋಲಿಸಿದರೆ ಮೂರನೇ ತ್ರೈಮಾಸಿಕದಲ್ಲಿ 11ಶೇ.ದಷ್ಟು ಏರಿದೆ ಎನ್ನುತ್ತವೆ ಈ ಅಂಕಿ-ಅಂಶಗಳು. ಆದರೆ ನೋಟು ರದ್ದತಿಯಿಂದ ಜನರು ದೈನಂದಿನ ಕನಿಷ್ಟ ಖರ್ಚುಗಳಿಗೇ ಪರದಾಡುತ್ತಿದ್ದಾಗ ಬಳಕೆ ಪ್ರಮಾಣ ಹೇಗೆ ತಾನೇ ಏರಲು ಸಾಧ್ಯ ಎಂಬುದು ಹಲವರ ಪ್ರಶ್ನೆ.


ಆದರೂ ಈ ಏರಿಕೆ ನಿಜವಾಗಿದ್ದರೆ, ಕಪ್ಪು ಹಣ ಇದ್ದವರು ಅದರ ಪೂರ್ಣ ಬಳಕೆ ಮಾಡಿಕೊಂಡು ಕಾನೂನುಬದ್ಧ ಆಸ್ತಿಗಳಾಗಿ ಪರಿವರ್ತಿಸಿ ಕೊಂಡಿರುವುದರಿಂದಾಗಿ ಬಳಕೆ ಪ್ರಮಾಣ ಇಷ್ಟೊಂದು ಹೆಚ್ಚಿರಬಹುದೇ? ಹಾಗಿದ್ದಲ್ಲಿ ನೋಟುರದ್ದತಿ ಕಪ್ಪು ಹಣವನ್ನು ಬಿಳಿ ಮಾಡಲು ನೆರವಾಗಿದೆಯಷ್ಟೇ ಎಂಬ ಆಪಾದನೆ ಸಾಬೀತಾದಂತಲ್ಲವೇ?

ಇದುವರೆಗೆ ಬಂದಿರುವ ಡಿಸೆಂಬರ್ ಮತ್ತು ಜನವರಿ ಅಂಕಿ-ಅಂಶಗಳ ಪ್ರಕಾರ ಎಂಟು ಪ್ರಮುಖ ಕ್ಷೇತ್ರಗಳಲ್ಲಿ ಕೈಗಾರಿಕಾ ಬೆಳವಣಿಗೆ ಅನುಕ್ರಮವಾಗಿ 3.4ಶೇ. ಮತ್ತು 5.6ಶೇ. ಇಳಿಕೆಯಾಗಿದೆ. ಹೀಗಿದ್ದರೂ ಜಿಡಿಪಿ ಬೆಳವಣಿಗೆಯ ಮೇಲೆ ನೋಟುರದ್ದತಿಯ ಪರಿಣಾಮ ಇಲ್ಲ ಎನ್ನುವುದು ತರ್ಕಕ್ಕೆ ನಿಲುಕದ ಸಂಗತಿ ಎನ್ನುತ್ತಾರೆ ವಿಶ್ಲೇಷಕರು.

ಇದರ ನಡುವೆ ಇನ್ನೊಂದು ಸಂಗತಿಯನ್ನು ಕೆಲವರು ಗಮನಿಸಿದ್ದಾರೆ. ನೋಟು ರದ್ದತಿ ಬಂದದ್ದು ನವಂಬರ್ 8ರಂದು ಆ ವೇಳೆಗೆ ಮೂರನೇ ತ್ರೈಮಾಸಿಕದ ಅರ್ಧದಷ್ಟು ಅವಧಿ ಮುಗಿದು ಹೋಗಿತ್ತು ಅಲ್ಲದೆ ಜನಗಳು ಬಹಳಷ್ಟು ಹಣ ಖರ್ಚು ಮಾಡುವ ದೀಪಾವಳಿ ಸೀಜನ್ ಕೂಡ ಮುಗಿದು ಹೋಗಿತ್ತು. ಆದ್ದರಿಂದ ವೈಯಕ್ತಿಕ ಬಳಕೆ ಪ್ರಮಾಣ ಹೆಚ್ಚಿರುವ ಸಾಧ್ಯತೆಯಿದೆ. ಅಂದರೆ ನೋಟುರದ್ದತಿಯ ಪರಿಣಾಮ ನಕಾರಾತ್ಮಕವಾಗಿಯೇನೂ ಇಲ್ಲ ಎಂದು ಎದೆತಟ್ಟಿಕೊಳ್ಳಬೇಕಾದರೆ ನಾಲ್ಕನೇ ತ್ರೈಮಾಸಿಕದ ಅಂಕಿ-ಅಂಶಗಳ ವರೆಗೆ ಕಾಯಬೇಕಾಗುತ್ತದೆ.

ಈ ಎರಡೂ ತರ್ಕಗಳನ್ನು ನೋಡಿದಾಗ ಜಿಡಿಪಿ ಬೆಳವಣಿಗೆ ದರವನ್ನು ನೋಟು ರದ್ದತಿ ತಟ್ಟುವುದಿಲ್ಲ ಎಂಬ ಸಿಎಸ್‌ಒ ಲೆಕ್ಕಾಚಾರ ಬಹಳ ಆತುರದ್ದು ಎನಿಸದಿರದು.

ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿರುವಂತೆ ನಕಲಿ ರಾಷ್ಟ್ರಪ್ರೇಮದ ನಂತರ ನಕಲಿ ಜಿಡಿಪಿ ಅಂಕಿ-ಅಂಶಗಳ ಪ್ರಯತ್ನ ಆರಂಭವಾಗಿದೆಯೇ ಎಂಬುದು ಸಹಜವಾಗಿ ಏಳುವ ಪ್ರಶ್ನೆ.



ಎಚ್ಚರಿಕೆ ನೀಡಿರುವ ಬ್ಯಾಂಕ್ ಮುಷ್ಕರ

ಫೆಬ್ರುವರಿ 28ರಂದು ಬ್ಯಾಂಕ್ ನೌಕರರು ದೇಶವ್ಯಾಪಿ ಮುಷ್ಕರ ನಡೆಸಿದ್ದಾರೆ. ಉದ್ಯಮಿಗಳ ಆಪಾದನೆಗಳನ್ನು ನೋಡಿದರೆ ಇದು ಅತ್ಯಂತ ಯಶಸ್ವಿಯಾಗಿ ನಡೆದಿದೆ ಎಂದು ಖಚಿತವಾಗುತ್ತದೆ.

ಈ ದೇಶವ್ಯಾಪಿ ಮುಷ್ಕರ ಬ್ಯಾಂಕಿಂಗ್ ಮತ್ತು ಕಾರ್ಮಿಕ ಕಾನೂನುಗಳ ಸುಧಾರಣೆಗಳ ಹೆಸರಿನಲ್ಲಿ ಮೋದಿ ಸರಕಾರ ನಡೆಸಿರುವ ಪ್ರಹಾರಗಳ ವಿರುದ್ಧ ನಡೆದಿರುವ ಒಂದು ಯಶಸ್ವಿ ಕಾರ್ಯಾಚರಣೆ ಎಂದು ಸಿಐಟಿಯು ಬ್ಯಾಂಕ್ ನೌಕರರನ್ನು ಅಭಿನಂದಿಸಿದೆ.

ನೋಟು ರದ್ದತಿಯ 50 ದಿನಗಳಲ್ಲಿ ಮತ್ತು ನಂತರವೂ ಹಗಲು ರಾತ್ರಿಯೆನ್ನದೆ ಸರಕಾರದ ಮತ್ತು ರಿಝರ್ವ್ ಬ್ಯಾಂಕಿನ ಜನ-ವಿರೋಧಿ ಧೋರಣೆಗಳ ನಡುವೆಯೂ ಜನರಿಗೆ ಉಂಟಾದ ಕಷ್ಟಗಳನ್ನು ಕಡಿಮೆ ಮಾಡಲು ದುಡಿದ ಬ್ಯಾಂಕ್ ನೌಕರರಿಗೆ ಈ ಕೆಲಸಕ್ಕೆ ಕಾನೂನಿನ ಪ್ರಕಾರ ಈ ವರೆಗೂ ಪರಿಹಾರ ನೀಡಿಲ್ಲ ಎಂಬುದು ಗಮನಾರ್ಹ ಇದನ್ನು ವಿಳಂಬ ಮಾಡದೆ ಇದನ್ನು ಕೊಡಬೇಕು ಎನ್ನುವುದು ಈ ಮುಷ್ಕರದ ಒಂದು ಬೇಡಿಕೆಯಾಗಿತ್ತು.

ನೋಟುರದ್ದತಿಯ ಘೋಷಿತ ಉದ್ದೇಶಗಳು ಕೇವಲ ಗಿಮಿಕ್‌ಗಳು ಎಂದು ಈಗ ಸಾಬೀತಾಗಿದೆ. ಗುಪ್ತ ಅಜೆಂಡಾ ಇದ್ದದ್ದು ಪೇಟಿಯಂ, ಜಿಯೊ ಮುಂತಾದ ಕಾರ್ಪೊರೇಟ್ ಸರ್ವಿಸ್ ಪ್ರೊವೈಡರುಗಳ ಅಗತ್ಯಗಳನ್ನು ಪೂರೈಸುವುದು ಎಂದು ಮುಷ್ಕರದ ನಂತರ ನೀಡಿರುವ ಹೇಳಿಕೆಯಲ್ಲಿ ಬ್ಯಾಂಕ್ ನೌಕರರ ಐಕ್ಯ ವೇದಿಕೆ(ಯುಎಫ್‌ಬಿಯು) ಹೇಳಿದೆ.

ಈ ದಿಸೆಯಲ್ಲಿ ಸರಕಾರಕ್ಕೆ ಬೇಕಾಗಿರುವಂತೆ ಸಿದ್ಧಪಡಿಸಿರುವ ವರದಿಯನ್ನು ಅದು ನೇಮಿಸಿದ ಒಂದು ಸಮಿತಿ ಸಲ್ಲಿಸಿದೆ. ಮಾಜಿ ಹಣಕಾಸು ಕಾರ್ಯದರ್ಶಿ ರತನ್ ವತಾಲ್ ಇದರ ಅಧ್ಯಕ್ಷರಾಗಿದ್ದರು. ಈ ವರದಿಯಲ್ಲಿನ ಶಿಫಾರಸುಗಳನ್ನು ಜಾರಿಗೆ ತಂದರೆ 2008ರ ಜಾಗತಿಕ ಹಣಕಾಸು ಬಿಕ್ಕಟ್ಟಿನಿಂದ ದೇಶದ ಆರ್ಥಿಕವನ್ನು ಕಾಪಾಡಿರುವ ಬ್ಯಾಂಕಿಂಗ್ ವ್ಯವಸ್ಥೆ ಧ್ವಂಸವಾಗುತ್ತದೆ ಎಂದು ಯುಎಫ್‌ಬಿಯು ಹೇಳಿದೆ.

ಫೆಬ್ರುವರಿ 28 ರ ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳ ಮುಷ್ಕರ ಈ ಜನ-ವಿರೋಧಿ, ಕಾರ್ಮಿಕ-ವಿರೋಧಿ ಮತ್ತು ಕಾರ್ಪೊರೇಟ್ ಪರ ಧೋರಣೆಗಳ ವಿರುದ್ಧ ಕೇಂದ್ರ ಸರಕಾರಕ್ಕೆ ನೀಡಿರುವ ಎಚ್ಚರಿಕೆ ಎಂದು ಯುಎಫ್‌ಬಿಯು ಹೇಳಿದೆ.

ಮಗಳಿಗೆ ಕಲಿಸಿ ಎಂದವರು, ಕಲಿತ ಮಗಳ ಬಾಯಿ ಮುಚ್ಚಿಸುವಾಗ....

ಪುಟ 8 ರಿಂದ

ಕೇಂದ್ರ ಗೃಹರಾಜ್ಯಮಂತ್ರಿಯ ಅಡಿಯಲ್ಲಿ ದಿಲ್ಲಿ ಪೋಲೀಸ್ ಇದೆ, ಒಬ್ಬ ಯುವತಿಗೆ ಬಹಿರಂಗವಾಗಿ ಮಾನಭಂಗದ, ಕೊಲೆಯ ಬೆದರಿಕೆ ಬಂದಾಗ ತನ್ನ ಕೈಕೆಳಗಿನವರಿಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೇಳುವ ಕರ್ತವ್ಯ ಮೊದಲು ನೆರವೇರಿಸಬೇಕಾದ ಈ ವ್ಯಕ್ತಿ ಇಂತಹ ಮಾತು ಹೇಳಿರುವುದು ಆಕೆಗೆ ಸ್ವಂತ ತಲೆಯೇ ಇಲ್ಲ, (ಇರಬಾರದು?) ಸ್ವಂತ ಅಭಿಪ್ರಾಯ ಹೊಂದುವಂತಿಲ್ಲ ಎಂದು ಭಾವಿಸಿದಂತಿದೆ ಎಂದು ಅವರು ಹೇಳುತ್ತಾರೆ.

ವಾಸ್ತವವಾಗಿ ಈ ಹುಡುಗಿಯ ಮೇಲೆ ಟೀಕೆಗಳ ಬಾಣಗಳನ್ನು ಎಸೆದವರಲ್ಲಿ ಹೆಚ್ಚಿನವರು ಭಾರತ-ಪಾಕಿಸ್ತಾನ ಸಂಬಂಧಗಳ ಕುರಿತಾದ ಆಕೆಯ ವೀಡಿಯೋವನ್ನು ಪೂರ್ಣವಾಗಿ ನೋಡಿಯೇ ಇರಲಿಕ್ಕಿಲ್ಲ ಎನ್ನುತ್ತಾರೆ ನಿಧಿ ರಜ್ದಾನ್. ಮಾನ್ಯ ಗೃಹರಾಜ್ಯಮಂತ್ರಿಗಳಂತೂ ನೋಡಿಯೇ ಇಲ್ಲ ಎಂಬುದನ್ನು ಅವರೇ ಖಾತ್ರಿ ಮಾಡಿಕೊಂಡಿದ್ದಾರೆ. ನೋಡಿದ್ದರೆ ಈ ಹುಡುಗಿಯ 'ತಲೆ ಕೆಡಿಸಿದವರು' ಯಾರಾದರೂ ಇದ್ದರೆ ಅದು ಆಕೆಯ ತಾಯಿಯೇ ಎಂದು ಗೊತ್ತಾಗುತ್ತಿತ್ತು. ಈ ಸುದ್ದಿ ಬಂದಾಗ 'ನಾನು ಮಣಿಪುರದಲ್ಲಿ ಚುನಾವಣಾ ಪ್ರಚಾರದಲ್ಲಿದ್ದೆ. ಆದ್ದರಿಂದ ನನಗದು ಗೊತ್ತಿಲ್ಲ. ಕೆಲವು ಪತ್ರಕರ್ತರು ಇದನ್ನು ನನ್ನ ಗಮನಕ್ಕೆ ತಂದರು, ಆಗ ನಾನು ಈಗ ಪಾಕಿಸ್ತಾನದೊಂದಿಗೆ ಯುದ್ಧ ನಡೆಯುತ್ತಿಲ್ಲವಲ್ಲ ಎಂದು ಹೇಳಿದೆ" ಎಂದು ಎನ್‌ಡಿಟಿವಿ ಸಂದರ್ಶನದಲ್ಲಿ ಹೇಳಿದರು. 'ನಿಮಗೆ ಅರೆ ಮಾಹಿತಿ ಇರುವ ಒಂದು ವಿಷಯದ ಬಗ್ಗೆ ಹೇಗೆ ತಾನೇ ಹೀಗೆ ಟಿಪ್ಪಣಿ ಮಾಡಲು ಸಾಧ್ಯ?" ಎಂದು ಕೇಳಿದಾಗ ಅವರು ಹಾರಿಕೆಯ ಉತ್ತರ ನೀಡಿ ತಪ್ಪಿಸಿಕೊಂಡರು.

ಇದು ಎಡಪಂಥೀಯರು ಮತ್ತು ಬಲಪಂಥೀಯರ ನಡುವಿನ ಪ್ರಶ್ನೆ, ನಮ್ಮ ಸೈನಿಕರು ಸತ್ತಾಗ ಎಡಪಂಥೀಯರು ಸಂಭ್ರಮ ಪಡುತ್ತಾರೆ ಎಂದು ಮತ್ತೊಮ್ಮೆ ತಮ್ಮ 'ಜ್ಞಾನ' ಪ್ರದರ್ಶನ ನಡೆಸಿದರು. ಇದು ಮತ್ತೊಂದು ಶುದ್ಧ ಸುಳ್ಳು ಎಂದು ಈಗ ಇಂತಹ ಮಂತ್ರಿಮಾನ್ಯರ, ಪುರುಷ ಸಿಂಹಗಳ ಬಾಯಿಗಳಿಂದ ಪುಂಖಾನುಪುಂಖವಾಗಿ ಬರುತ್ತಿರುವ ಮಾತುಗಳ(ಸುಳ್ಳುಗಳ) ಬಗ್ಗೆ ಬಹುಶಃ ಯಾರಿಗೂ ವಿವರಣೆ ನೀಡಬೇಕಾಗಿಲ್ಲ.

ವಾಸ್ತವವಾಗಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿರುವಂತೆ ಇದು ಎಡ-ಬಲದ ಪ್ರಶ್ನೆಯಲ್ಲ, ಸರಿ ಮತ್ತು ತಪ್ಪುಗಳ ನಡುವಿನ ಪ್ರಶ್ನೆ, ಮಹಾತ್ಮ ಗಾಂಧಿಯನ್ನು ಕೊಂದಾಗ ಸಂಭ್ರಮ ಪಟ್ಟು ಸಿಹಿ ಹಂಚಿದವರು ಇದೇ ಆರೆಸ್ಸೆಸ್ ಮಂದಿ, ಇದನ್ನು ಈಗ ಈ ಪರಿವಾರದವರು ಹಾಡಿಹೊಗಳುತ್ತಿರುವ ಆಗಿನ ಗೃಹಮಂತ್ರಿ ಸರ್ದಾರ್ ಪಟೇಲ್ ಅವರೇ ಸ್ವತಃ ಇವರ ಗುರು ಗೋಲ್ವಲ್ಕರ್‌ಗೇ ಹೇಳಿದ್ದನ್ನು ಯೆಚುರಿ ಈ ಮಂತ್ರಿವರ್ಯರಿಗೆ ನೆನಪಿಸಿದ್ದಾರೆ.

> **"ಈ ಪ್ರಚಾರಾಂದೋಲನದಿಂದ ಹಿಂದೆ ಸರಿಯುತ್ತಿದ್ದೇನೆ. ಎಲ್ಲರಿಗೂ ಅಭಿನಂದನೆಗಳು. ನಾನು ಏನು ಹೇಳಬೇಕಾಗಿತ್ತೋ ಹೇಳಿದ್ದೇನೆ. ನಾನು ಬಹಳಷ್ಟು ಸಹಿಸಬೇಕಾಗಿ ಬಂದಿದೆ. 20ವರ್ಷದ ನನಗೆ ಇಷ್ಟೇ ಸಾಧ್ಯ. ಈ ಪ್ರಚಾರಾಂದೋಲನ ಎಂದೂ ನನ್ನ ಬಗ್ಗೆ ಆಗಿರಲಿಲ್ಲ, ವಿದ್ಯಾರ್ಥಿಗಳ ಬಗ್ಗೆ ಆಗಿದೆ. ದಯವಿಟ್ಟು ಮೆರವಣಿಗೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿ. ಅದೃಷ್ಟ ನಿಮ್ಮೊಂದಿಗಿರಲಿ. ನನ್ನ ಧೈರ್ಯವನ್ನು ಪ್ರಶ್ನಿಸುತ್ತಿರುವವರಿಗೆ ಯಾರಿಗೇ ಆಗಲಿ ಅದನ್ನು ಸಾಕಷ್ಟು ತೋರಿಸಿದ್ದೇನೆ. ಒಂದಂತೂ ಖಂಡಿತ, ಬೆದರಿಕೆ, ಹಿಂಸಾಚಾರಕ್ಕೆ ಇಳಿಯುವ ಮೊದಲು ನಾವು ಎರಡೆರಡು ಬಾರಿ ಯೋಚಿಸ ಬೇಕಾಗುತ್ತದೆ. ಅದಕ್ಕಾಗಿಯೆ ಇದೆಲ್ಲ. ಇನ್ನು ನನ್ನನ್ನು ನನ್ನ ಪಾಡಿಗೆ ಬಿಟ್ಟು ಬಿಡಿ"**

ಗುರ್‌ಮೆಹರ್ ಕೌರ್‌ಳ ಈ ಕೊನೆಯ ಟ್ವೀಟ್ ಕೇಸರಿ ಟ್ವೀಟ್‌ಗ್ಯಾಂಗ್‌ಗಳ, ಅದಕ್ಕಿಂತ ಹೆಚ್ಚಾಗಿ ಕೇಂದ್ರ ಮಂತ್ರಿ ಮಹಾಶಯರುಗಳು, ಎಂಪಿ ಮಹಾಶಯರುಗಳ ಪೌರುಷ/ಜ್ಞಾನ ಪ್ರದರ್ಶನಕ್ಕೆ, ಸವಾಲು ಹಾಕಿದೆ. ಆದರೆ ಅದನ್ನು ಅರಿತುಕೊಳ್ಳಬಲ್ಲ 'ಸಂಸ್ಕೃತಿ' ಈ ಮಂದಿಗಿದೆಯೇ ಎಂಬುದು ಮಾತ್ರ ಯಕ್ಷಪ್ರಶ್ನೆಯಾಗಿಯೇ ಉಳಿಯಬಹುದು. ಏಕೆಂದರೆ ನಂತರವೂ ಈ ಮಂದಿ ತಮ್ಮನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ, ಟ್ರಿಪಲ್ ಸೆಂಚು-ರಿಯ ಕ್ರಿಕೆಟಿಗನಿಗೆ ಮಾತ್ರ ಮಾನಭಂಗದ ಬೆದರಿಕೆ ಹಾಕಬಾರದಿತ್ತು ಎಂದು ಬಹಳ ತಡವಾಗಿ ಅನಿಸಿದೆಯಂತೆ.ಈಗ ಕೇಂದ್ರ ಕಾನೂನು ಮಂತ್ರಿಗಳು ಕೂಡ ಗುರುಮೆಹರ್‌ಕೌರ್ ವಿರುದ್ಧ ಮಾತಾಡುವವರನ್ನು ತರಾಟೆಗೆ ತಗೊಂಡಿದ್ದಾರೆ ಎಂಬ ಸುದ್ದಿಯನ್ನು ಓದುವಾಗಲೇ ಹರ್ಯಾಣದ ಹಿರಿಯ ಮಂತ್ರಿಯೊಬ್ಬರು ಗುರ್‌ಮೆಹರ್ ಕೌರ್‌ಳನ್ನು ಬೆಂಬಲಿಸುವವರನ್ನು ಪಾಕಿಸ್ತಾನಕ್ಕೆ ಕಳಿಸಿ ಎಂದು ಗುಡುಗಿರುವುದಾಗಿ ವರದಿಯಾಗಿದೆ. ಹೌದು, 'ಬೇಟಿ ಪಡಾವೋ' ಎಂದವರು ಎಂದಿನಂತೆ ದಿವ್ಯ ಮೌನದಲ್ಲಿದ್ದಾರೆ.



ವ್ಯಂಗ್ಯ ಚಿತ್ರ: ಮಂಜುಲ್, ಡಿಎನ್‌ಎ

ಅಚ್ಛೇ ದಿನ್' ಮಂದಿಯ ವಾಕ್ ಸ್ವಾತಂತ್ರ್ಯ

'ನಿಮಗೆ ದೇಶದ ಸಾರ್ವಭೌಮತೆಯ ಮೇಲೆ ಪ್ರಹಾರ ಮಾಡುವ ವಾಕ್ ಸ್ವಾತಂತ್ರ್ಯ ಇದೆ ಎಂದು ನಂಬುವುದಾದರೆ ಅದಕ್ಕೆ ಎದುರಾಗಿ ನಿಲ್ಲುವ ವಾಕ್ ಸ್ವಾತಂತ್ರ್ಯ ಇದೆ ಎಂಬುದನ್ನು ಒಪ್ಪಿಕೊಳ್ಳಿ" ಎಂದು ದೇಶದ ಹಣಕಾಸು ಮಂತ್ರಿಗಳು ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್‌ನಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತಾಡುತ್ತ ಹೇಳಿದ್ದಾರೆ ಎಂದು ವರದಿಯಾಗಿದೆ.


ಇದು ದಿಲ್ಲಿ ವಿವಿಯಲ್ಲಿನ ಘಟನೆಗಳಿಗೆ ಸಂಬಂಧಪಟ್ಟ ಟಿಪ್ಪಣಿ ಎಂಬುದು ಸ್ವಯಂವೇದ್ಯ. ಈ ಮಂತ್ರಿಗಳು ಹಿಂದೆ ಡಿಲ್ಲಿ ವಿವಿ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿದ್ದವರು. ಮೊದಲನೆಯದಾಗಿ ದಿಲ್ಲಿ ವಿವಿಯ ಘಟನೆಯಲ್ಲಿ ಅವರಿಗೆ ದೇಶದ ಸಾರ್ವಭೌಮತೆಯ ಪ್ರಶ್ನೆ ಹೇಗೆ ಕಂಡಿತೋ ಗೊತ್ತಿಲ್ಲ. ಅದೇನೇ ಇರಲಿ, ಕಲ್ಲೆಸೆಯುವುದು, ಅಧ್ಯಾಪಕರನ್ನು, ವಿದ್ಯಾರ್ಥಿಗಳನ್ನು, ಪತ್ರಕರ್ತರನ್ನು ಥಳಿಸುವುದು, ಮಹಿಳೆಯರಿಗೆ ಅತ್ಯಾಚಾರದ ಬೆದರಿಕೆ ಹಾಕುವುದು ಅವರ ವಾಕ್ ಸ್ವಾತಂತ್ರ್ಯದ ಭಾಗ ಎಂದು ಈಗ ಗೊತ್ತಾಯಿತು.

-ನ್ಯೂಸ್‌ಕ್ಲಿಕ್, ಫೆಬ್ರುವರಿ 27



ವ್ಯಂಗ್ಯ ಚಿತ್ರ: ಕೇಶವ್, ದಿ ಹಿಂದು

ವಿಚಾರ ವಿನಿಮಯದಿಂದ ಸರ್ಕಾರ



ಕೆ.ಎಂ.ನಾಗರಾಜ್

ಪ್ರಜಾಪ್ರಭುತ್ವದ ಈ ಪರಿಕಲ್ಪನೆ ಮನಸ್ಸಿಗೆ ಹಿಡಿಯುತ್ತದೆ.. ಅದರೆ ಪ್ರಶ್ನೆ ಇಂದಿನ ಬಂಡವಾಳಶಾಹಿ ಸಮಾಜದ ಸಂಸ್ಥೆಗಳಿಗೂ ಮತ್ತು ಸರ್ಕಾರಕ್ಕೂ ಸಾಮರಸ್ಯತೆಯದ್ದು. ಬಂಡವಾಳಶಾಹಿ ವ್ಯವಸ್ಥೆಯ ಚೌಕಟ್ಟಿನೊಳಗೆ ಚರ್ಚೆ-ವಿಚಾರ ವಿನಿಮಯಗಳ ಮೂಲಕ ಬಯಸುವ ಸುಧಾರಣೆಗಳು ಯಶಸ್ವಿಯಾಗುತ್ತವೆಯೊ ಇಲ್ಲವೊ ಎಂಬುದು ಭಾವನೆಗಳಿಗೆ ಸಂಬಂಧಿಸಿದ ಅಮೂರ್ತ ಸಂಗತಿಯಲ್ಲ. ಪಟ್ಟುಹಿಡಿದು ಸುಧಾರಣೆಗಳು ಸಾಕಾರಗೊಳ್ಳುವಂತೆ ಮಾಡುವ ಮೂರ್ತ ಸಂಗತಿ. ಈ ವಿಶ್ಲೇಷಣೆಯ ಪ್ರಕಾರ ಸುಧಾರಣೆಗಳಿಗೆ ನಿರಂತರ ಬದ್ಧತೆಯ ಫಲಶೃತಿಯೇ ಕ್ರಾಂತಿ

–ಪ್ರೊ.ಪ್ರಭಾತ್ ಪಟ್ನಾಯಕ್

'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆ ಪ್ರಕಟಿಸಿರುವ ಪ್ರೊ. ಪ್ರಭಾತ್ ಪಟ್ನಾಯಕ್ ಅವರ Government by Discussion ಲೇಖನದ ಭಾವಾನುವಾದ.

ಪ್ರಜಾಪ್ರಭುತ್ವವೆಂದರೆ ಅದು 'ವಿಚಾರ ವಿನಿಮಯಗಳಿಂದ ಸರ್ಕಾರ' ಎಂಬ ಮಾತನ್ನು ಪ್ರೊ.ಅಮಾರ್ತ್ಯ ಸೇನ್ ತಮ್ಮ Collective Choice and Social Welfare ಎಂಬ ಹೊಸ ಪುಸ್ತಕದಲ್ಲಿ ಒತ್ತಿ ಹೇಳಿದ್ದಾರೆ. ಪ್ರಜಾಪ್ರಭುತ್ವ ಅಂದರೆ ವಿಚಾರ ವಿನಿಮಯಗಳ ಮೂಲಕ ಸರ್ಕಾರ ನಡೆಯಬೇಕು ಎಂಬ ವಿಚಾರ ಮೂಲತಃ ಜಾನ್ ಸ್ಟೂಅರ್ಟ್ ಮಿಲ್‌ರವರದ್ದು. ಸಾರ್ವಜನಿಕರೊಂದಿಗೆ ವಿಚಾರವಿನಿಮಯ ಮಾಡಿದ ನಂತರವೇ ಸರ್ಕಾರ ತೀರ್ಮಾನ ತೆಗೆದುಕೊಂಡಾಗ ಅದರಲ್ಲಿ ಗೊಂದಲವಿರುವುದಿಲ್ಲ ಮತ್ತು 'ಆಳುವವರು' ಮತ್ತು 'ಆಳ್ವಿಕೆಗೆ ಒಳಪಟ್ಟವರು' ಇವರ ನಡುವಿನ ಅಂತರವೂ ಕಡಿಮೆಯಾಗುತ್ತದೆ ಎಂಬ ಕಾರಣದಿಂದಾಗಿ ಪ್ರಜಾಪ್ರಭುತ್ವದ ಈ ಪರಿಕಲ್ಪನೆ ಮನಸ್ಸಿಗೆ ಹಿಡಿಯುತ್ತದೆ.

ಆಳುವವರು ಮತ್ತು ಆಳ್ವಿಕೆಗೊಳಪಟ್ಟವರ ನಡುವೆ ಅಂತರ ಕಡಿಮೆಯಾಗುವುದೇ ಜನತೆಯ ಸಬಲೀಕರಣದ ಜೀವಾಳ. ಪ್ರತಿ ಐದು ವರ್ಷಕ್ಕೊಮ್ಮೆ ಒಂದು ಸರ್ಕಾರವನ್ನು ಚುನಾಯಿಸುವುದರಿಂದ ಜನತೆ ನಿಜಕ್ಕೂ ಬಲಗೊಳ್ಳುವುದಿಲ್ಲ. ಜನತೆ ಬಲಗೊಳ್ಳುವುದು ಸರ್ಕಾರದ ಕಾರ್ಯವೈಖರಿ ಮತ್ತು ಅದರ ನೀತಿ ನಿರ್ಧಾರಗಳನ್ನು ಪ್ರಭಾವಿಸುವ ಮೂಲಕವೇ. ಅದಕ್ಕೂ ಮೊದಲು, ವಿಚಾರ-ವಿನಿಮಯಗಳು ಸಾರ್ವಜನಿಕವಾಗಿ ಮತ್ತು ವ್ಯಾಪಕವಾಗಿ ನಡೆಯುವುದು ಮತ್ತು ಜನ ಅದರಲ್ಲಿ ಭಾಗವಹಿಸುವುದು ಬಹಳ ಮುಖ್ಯ.

ಸರ್ಕಾರವು ಅನುಸರಿಸುವ ನೀತಿಗಳಲ್ಲಿ, ನಿರ್ಭಯವಾಗಿ ಮತ್ತು ಅರ್ಥಪೂರ್ಣವಾಗಿ ಸಾರ್ವಜನಿಕ ಸಂವಾದಗಳ ಮೂಲಕವಾಗಿ ಜನರ ಭಾಗವಹಿಸುವಿಕೆ ಮತ್ತು ಅದು ಪರಿಣಿತರಿಗೆ ಮಾತ್ರ ಸೀಮಿತವಲ್ಲ ಎಂಬ ಅಂಶವು ಈ ಪರಿಕಲ್ಪನೆಯ ಅಂಗವಾಗಿದೆ. ಇಂತಹ ಒಂದು ಪದ್ಧತಿಯನ್ನು ಕಾರ್ಯರೂಪಕ್ಕೆ ತರಬೇಕು ಎಂದಾದರೆ, ಸಾರ್ವಜನಿಕರಿಗೆ ಶಿಕ್ಷಣ ಮತ್ತು ತರಪೇತಿ ನೀಡಬೇಕಾಗುತ್ತದೆ. ಆದರೆ, ಅವರಿಗೆ ಶಿಕ್ಷಣವನ್ನೇ ಕೊಡದೆ, ಮತ್ತು ಅವರು ಅಶಿಕ್ಷಿತರು ಎಂಬ ನೆಪ ಹೂಡಿ ಅವರನ್ನು ನೀತಿ ನಿರ್ಧಾರಗಳಲ್ಲಿ ಭಾಗವಹಿಸದಂತೆ ದೂರ ಇಡುವುದೇ ದಮನಕಾರಿ ಆಡಳಿತಗಳ ಹೆಗ್ಗುರುತಾಗಿರುವುದು ಆಶ್ಚರ್ಯವೇನಲ್ಲ. ವಿಚಾರ ವಿನಿಮಯಗಳ ಮೂಲಕ ನಡೆಯುವ ಸರ್ಕಾರದ ಪರಿಕಲ್ಪನೆಯಲ್ಲಿ ಜನ ಸುಶಿಕ್ಷಿತರಾಗಿರಬೇಕು. ಅವರ ಸಮಸ್ಯೆಗಳ ಮೇಲಿನ ಚರ್ಚೆಗಳಲ್ಲಿ ಅವರು ಕ್ರಿಯಾಶೀಲರಾಗಿ ಭಾಗವಹಿಸಬೇಕು. ಈ ನೆಲೆಯಲ್ಲಿ ಸರ್ಕಾರದ ನೀತಿಗಳು ನಿರ್ಧಾರವಾಗಬೇಕು.

ಜನ ಶಿಕ್ಷಿತರಾಗಿದ್ದರೆ ಮತ್ತು ಅಗತ್ಯ ಮಾಹಿತಿಗಳು ಅವರಿಗೆ ದೊರಕಿದರೆ, ತಮ್ಮ ಜೀವನಕ್ಕೆ ಸಂಬಂಧಿಸಿದ ಸಮಸ್ಯೆಗಳ ಚರ್ಚೆಯಲ್ಲಿ ಅರ್ಥಪೂರ್ಣವಾಗಿ ಭಾಗವಹಿಸಲು ಜನ ಸರ್ವಥಾ ಸಮರ್ಥರು ಎಂಬ ಅಂಶವನ್ನು, ಜ್ಞಾನ ಮೀಮಾಂಸೆಯ ನೆಲೆಯಲ್ಲಿ, ಉದಾರ ಮನೋಭಾವದವರೂ ಮತ್ತು ಪ್ರಗತಿಪರರೂ ಒಪ್ಪುತ್ತಾರೆ. ಇದು ಇಬ್ಬರಿಗೂ ಸಮಾನವಾಗಿರುವ ಅಂಶ. ಇಂದಿನ ಬಂಡವಾಳಶಾಹಿ ಸಮಾಜದ ಸಂಸ್ಥೆಗಳಿಗೂ ('ರಚನಾ ವಿನ್ಯಾಸಗಳು') ಮತ್ತು ಸರ್ಕಾರಕ್ಕೂ ಸಾಮರಸ್ಯತೆ ಇಲ್ಲದಿರುವ ಅಂಶದ ಬಗ್ಗೆ ಉದಾರ ಮನೋಭಾವದವರಿಗೂ ಮತ್ತು ಪ್ರಗತಿಪರರಿಗೂ ವಿರೋಧ ಅಭಿಪ್ರಾಯಗಳಿವೆ. ಸಾಮರಸ್ಯತೆಗಿಂತಲೂ ಮಿಗಿಲಾಗಿ ಅದರ ಕೊರತೆಯಿಂದಾಗುವ ಪರಿಣಾಮಗಳ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳಿವೆ. ಸಾಮರಸ್ಯತೆ ಇಲ್ಲದಿದ್ದರೂ ಬಂಡವಾಳಶಾಹಿ ಸಮಾಜದ ಸಂಸ್ಥೆಗಳು ಹೊಂದಾಣಿಕೆ ಮಾಡಿಕೊಳ್ಳುತ್ತವೆ ಎಂಬುದು ಉದಾರವಾದಿಗಳ ನಿಲುವು. ಇಲ್ಲ, ಅವು ಪ್ರತಿರೋಧ ಒಡ್ಡುತ್ತವೆ ಎಂಬುದು ಪ್ರಗತಿಪರರ ನಿಲುವು. ಆ ಪ್ರತಿರೋಧವನ್ನು ಹಿಮ್ಮೆಟ್ಟಿಸಲು **ಸಾಮಾಜಿಕ ಒತ್ತಡ** ಸಾಕಾಗುವುದಿಲ್ಲ, **ಸಾಮಾಜಿಕ ಪರಿವರ್ತನೆ**ಯೇ ಬೇಕಾಗುತ್ತದೆ ಎಂಬುದು ಪ್ರಗತಿಪರರ ನಿಲುವು. (ಅಂದರೆ, ಬಂಡವಾಳಶಾಹಿ ಸಮಾಜದ ರಚನೆಗಳನ್ನು ಮೀರಿ ನಿಲ್ಲುವ ಒಂದು ಪರ್ಯಾಯ ಸಮಾಜದ ನಿರ್ಮಾಣ) ಸರ್ಕಾರದ ತೀರ್ಮಾನಗಳಲ್ಲಿ ಪಾರದರ್ಶಕತೆ ಮತ್ತು ಪ್ರಜಾಪ್ರಭುತ್ವದ ನೈಜ ಆಚರಣೆಗಳು ಇಂತಹ ಸಮಾಜದಲ್ಲಿ ಸಾಧ್ಯವಾಗುತ್ತದೆ.

ಗ್ರೀಸ್ ಉದಾಹರಣೆ–ಎರಡು ವಿಭಿನ್ನ ಸಂಗತಿಗಳು

ಒಂದು ಉದಾಹರಣೆಯ ಮೂಲಕ ಈ ಅಂಶವನ್ನು ಸ್ಪಷ್ಟಪಡಿಸಬಹುದು. ಹಣಕಾಸು ಲೋಕದ 'ತ್ರಿಮೂರ್ತಿಗಳು'(ಐಎಂಎಫ್, ವಿಶ್ವ ಬ್ಯಾಂಕ್ ಮತ್ತು ಬ್ಯಾಂಕ್‌ಗಳು) ಸಾಲದ ಸುಳಿಯಲ್ಲಿ ಸಿಕ್ಕಿ ಬಿದ್ದಿರುವ ಗ್ರೀಸ್ ದೇಶದ ಸರ್ಕಾರದ ಮೇಲೆ ಮಿತವ್ಯಯ – ಸರ್ಕಾರದ ಖರ್ಚುಗಳಲ್ಲಿ ಭಾರಿ ಕಡಿತ – ಪಾಲಿಸುವಂತೆ ಪಟ್ಟು ಹಿಡಿದಿದ್ದರು. ಗ್ರೀಕ್ ಸರ್ಕಾರ ಅದಕ್ಕೆ ತಲೆಬಾಗಿತ್ತು. ಮಿತವ್ಯಯ ನೀತಿಗಳನ್ನು ಕೈ ಬಿಡುವ ಭರವಸೆ ಕೊಟ್ಟು ಚುನಾವಣೆಯ ಮೂಲಕ ಅಧಿಕಾರ ಹಿಡಿದ ಸಿರಿಜ಼ಾ ಮೈತ್ರಿಕೂಟದ ಸರ್ಕಾರವೂ ಈ 'ತ್ರಿಮೂರ್ತಿ' ಮುಂದೆ ಮಂಡಿಯೂರಬೇಕಾಯ್ತು. ಒಂದು ಹಂತದಲ್ಲಿ, ಮಿತವ್ಯಯ ನೀತಿಗಳ ಬಗ್ಗೆ ಗ್ರೀಸ್‌ನಲ್ಲಿ ಚರ್ಚೆಗಳು ವ್ಯಾಪಕವಾಗಿ ನಡೆದವು. ಅಷ್ಟೇ ಅಲ್ಲ. ವೋಟಿಂಗ್ ಮೂಲಕ ಜನಾಭಿಪ್ರಾಯ ಸಂಗ್ರಹವೂ ನಡೆಯಿತು. ಮಿತವ್ಯಯ ನೀತಿಯ ವಿರುದ್ಧವಾಗಿ ಬಹುಮತದ ಅಭಿಪ್ರಾಯ ವ್ಯಕ್ತವಾಯಿತು. ಆದರೂ, ಸಿರಿಜ಼ಾ ಸರ್ಕಾರವು ಮಿತವ್ಯಯ ನೀತಿಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಮಾಡಿಕೊಳ್ಳಲು ಈ ಹಣಂಕಾಸು 'ತ್ರಿಮೂರ್ತಿಗಳು (ಜಾಗತಿಕ ಹಣಕಾಸು ಬಂಡವಾಳ) ಒಪ್ಪಲಿಲ್ಲ. ಗ್ರೀಕ್ ಜನತೆಯ ಅಪೇಕ್ಷೆ ಈಡೇರಲಿಲ್ಲ. ಹಣಕಾಸು ಬಂಡವಾಳವೇ ಮೇಲುಗೈ ಪಡೆಯಿತು. ಅಂದರೆ, ವಿಚಾರ ವಿನಿಮಯಗಳ ಮೂಲಕ ಮೂಡಿಬಂದ ಜನತೆಯ ಒಮ್ಮತದ ನಿಲುವನ್ನು, ಜನತೆಯ ಆಶೋತ್ತರಗಳನ್ನು ಅಥವಾ ಸರ್ಕಾರದ ನಿಲುವನ್ನು ಬಂಡವಾಳಶಾಹಿಯ 'ರಚನಾ ವಿನ್ಯಾಸಗಳು'– ಅಂದರೆ ಸಂಸ್ಥೆಗಳು – ಸೋಲಿಸಿಸಿದವು. ಇದೊಂದು ಉದಾಹರಣೆಯಷ್ಟೆ.

ಯಾವಾಗಲೂ ಇದು ಹೀಗೆಯೇ ಆಗಬೇಕೆ? ಗ್ರೀಸ್ ದೇಶದ ಈ ಪರಿಸ್ಥಿತಿಗೆ ಸಂಬಂಧಿಸಿದಂತೆ ಎರಡು ವಿಭಿನ್ನ ಸಂಗತಿಗಳಿವೆ. ಮೊದಲನೆಯದು, ಗ್ರೀಕ್ ಪ್ರಭುತ್ವವು ಒಂದು ರಾಷ್ಟ್ರ ಪ್ರಭುತ್ವ. ಅದರ ಎದುರು ನಿಂತದ್ದು ಜಾಗತೀಕರಣಗೊಂಡ ಹಣಕಾಸು ಬಂಡವಾಳ. ಅದು ಗ್ರೀಕ್ ಪ್ರಭುತ್ವದ ಅಧೀನದಲ್ಲಿಲ್ಲ. ಹಾಗಾಗಿ, ಗ್ರೀಕ್ ಪ್ರಭುತ್ವವು ತನ್ನ ಜನತೆಯ ಅಪೇಕ್ಷೆಯನ್ನು ಒಪ್ಪಿಕೊಳ್ಳುವಂತೆ ಹಣಕಾಸು ಬಂಡವಾಳವನ್ನು ಒತ್ತಾಯಿಸುವುದು ಸಾಧ್ಯವಿಲ್ಲ. ಜಾಗತೀಕರಣದಿಂದಾದ ಪರಿಣಾಮ ಇದು. ತನ್ನ ಸುಳಿಗೆ ಸಿಕ್ಕಿದ ದೇಶಗಳ ಮೇಲೆ ಜಾಗತಿಕ ಹಣಕಾಸು ಬಂಡವಾಳವು ಸವಾರಿ ಮಾಡುತ್ತದೆ. ಆ ಸುಳಿಯಿಂದ ಹೊರ ಬರಲು ದೇಶವೊಂದು ಪ್ರಯತ್ನಿಸಿದರೆ, ಅದು ಹಣಕಾಸು ಬಂಡವಾಳದ ಕೆಂಗಣ್ಣಿಗೆ ಗುರಿಯಾಗಿ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಹಣಕಾಸು ಬಂಡವಾಳವು ಕೋಪಗೊಳ್ಳುವುದು ಏಕೆಂದರೆ, ತನ್ನ ಹಿಡಿತದಿಂದ ದೇಶಗಳು ಒಂದೊಂದಾಗಿ ಹೊರ ಹೋದರೆ, ಅದರ ಲಾಭ ಇಳಿಯುತ್ತದೆ. ಅದರ ಭವಿಷ್ಯ ಮಂಕಾಗುತ್ತದೆ.

ಎರಡನೆಯ ಸಂಗತಿ, 'ಜಾಗತಿಕ–ರಾಷ್ಟ್ರೀಯ' ಸ್ತರದ ವೈರುಧ್ಯಗಳು ಇರದಿದ್ದರೂ, ಮಿತವ್ಯಯ ನೀತಿಗಳನ್ನು ಸಹಿಸಿಕೊಳ್ಳಲಾಗದ ಗ್ರೀಕ್ ಜನತೆಗೂ ಮತ್ತು ಹಣಕಾಸು ಬಂಡವಾಳದ ಹಿತಾಸಕ್ತಿಗಳಿಗೂ ಮೂಲಭೂತವಾಗಿ ಒಂದು ವೈರುಧ್ಯವಿರುತ್ತದೆ. ಮಿತವ್ಯಯ ನೀತಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲೇಬೇಕೆಂದು ಪಟ್ಟು ಹಿಡಿಯುವ ಹಣಕಾಸು ಬಂಡವಾಳವು, ಒಂದು ವೇಳೆ, ಗ್ರೀಸ್ ದೇಶದಲ್ಲಷ್ಟೇ ನೆಲೆಗೊಂಡಿದೆ ಮತ್ತು ಗ್ರೀಕ್ ಪ್ರಭುತ್ವದ ವ್ಯಾಪ್ತಿಗೆ ಒಳಪಟ್ಟಿದೆ ಎಂದು ಭಾವಿಸಿದರೂ, ಅದರ ವಿರೋಧ ಇದ್ದೇ ಇರುತ್ತಿತ್ತು. ಅಷ್ಟೇ ಏಕೆ, ಮಿತವ್ಯಯ ನೀತಿಗಳ ವಿರುದ್ಧವಾಗಿ ಗ್ರೀಸ್‌ನಲ್ಲಿ ನಡೆದ ಚರ್ಚೆಗಳ ನಂತರ ಒಂದು ಸಹಮತ ವ್ಯಕ್ತವಾದ ರೀತಿಯಲ್ಲಿಯೇ, ಯೂರೋಪಿನ ಎಲ್ಲ ದೇಶಗಳಲ್ಲೂ ತನ್ನ ಬಾಹುಗಳನ್ನು ಚಾಚಿಕೊಂಡಿರುವ ಹಣಕಾಸು ಬಂಡವಾಳದ ವಿರುದ್ಧ ಅಂತದ್ದೇ ಸಾರ್ವಜನಿಕ ಚರ್ಚೆಗಳು ನಡೆದು ಅಂತದ್ದೇ ಸಹಮತ ಮೂಡಿಬಂದಿದ್ದರೂ, ಹಣಕಾಸು ಬಂಡವಾಳದ ವಿರೋಧ ಇದ್ದೇ ಇರುತ್ತಿತ್ತು. ಜಾಗತೀಕರಣದ ಸಂದರ್ಭದಲ್ಲಿ ಇಂತಹ ಪರಸ್ಪರ ವಿರೋಧವುಳ್ಳ ಎರಡು ಭಾಗಗಳಿರುವುದನ್ನು ಗಮನಿಸಿಯೇ, ಅದಕ್ಕೆ ಅನುಗುಣವಾಗಿ ಸಾರ್ವಜನಿಕ ಚರ್ಚೆಗಳು ಹೆಚ್ಚೆಚ್ಚಾಗಿ ಅಂತಾರಾಷ್ಟ್ರೀಯ ಸ್ವರೂಪ ಪಡೆಯಬೇಕು ಎಂಬ ಮಾತನ್ನು ಪ್ರೊ.ಅಮಾರ್ತ್ಯ ಸೇನ್ ಹೇಳಿರುವುದು.

ಹಣಕಾಸು ಬಂಡವಾಳದ ವರ್ತನೆ

ಹೀಗೊಂದು ಪರಿಸ್ಥಿತಿಯನ್ನು ಕಲ್ಪಿಸಿಕೊಳ್ಳೋಣ. ಒಂದು ದೇಶದಲ್ಲಿ ಸರ್ಕಾರ ಕೈಗೊಳ್ಳಬೇಕೆಂದಿರುವ ಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ಸಹಮತವಿದೆ. ಆದರೆ, ಆ ಕ್ರಮಗಳು ಹಣಕಾಸು ಬಂಡವಾಳದ ಹಿತಾಸಕ್ತಿಗಳಿಗೆ ಪ್ರತಿಕೂಲವಾಗಿವೆ. ಆಗ, ಆ ಧೇಶದ ಮೇಲೆ 'ಹೂಡಿಕೆದಾರರ ವಿಶ್ವಾಸ' ಇಳಿಯುತ್ತದೆ. ಬಂಡವಾಳಗಾರರು ಹೊಸ ಹೂಡಿಕೆಮಾಡುವುದಿಲ್ಲ. ಅದರಿಂದಾಗಿ, ಅಲ್ಲಿ ಆರ್ಥಿಕ ಹಿಂಜರಿತ ಮತ್ತು ನಿರುದ್ಯೋಗ ಉಂಟಾಗುತ್ತವೆ. ಅಂತಹ ಪರಿಸ್ಥಿತಿಯಲ್ಲಿ, ಇಂತಹ ಅಂತ್ಯಪರಿಣಾಮ ಉಂಟುಮಾಡಿದ ಕ್ರಮಗಳನ್ನು ಸರ್ಕಾರ ರದ್ದುಪಡಿಸಿದರೆ, ಅದು ಜನಾಭಿಪ್ರಾಯಕ್ಕೆ ಬಗೆದ ದ್ರೋಹವಾಗುತ್ತದೆ. ಅಥವಾ ಈ ಪರಿಸ್ಥಿತಿಯಲ್ಲಿ, ಬಂಡವಾಳಗಾರರ ಪ್ರತಿರೋಧ'ದಿಂದಾಗಿ ಜನಾಭಿಪ್ರಾಯವೇ ಬದಲಾಗಬಹುದು. ಆಪತ್ತಿನಿಂದ ಪಾರಾಗಲು ಸರ್ಕಾರವೇ ಸಾರ್ವಜನಿಕ ವಲಯದ ಮಾರ್ಗವಾಗಿ ಹೆಚ್ಚಿನ ಹೂಡಿಕೆ ಮಾಡಬೇಕಾಗುತ್ತದೆ. ಅದನ್ನು ಬಂಡವಾಳಗಾರರು ತಮ್ಮ ವ್ಯವಹಾರದ ಮೇಲಿನ ಅತಿಕ್ರಮಣವಾಗಿ ಕಂಡು ಅಧೀರರಾಗಬಹುದು. ಅದರಿಂದಾಗಿ, ಸರ್ಕಾರ ಇನ್ನೂ ಹೆಚ್ಚಿನ ಹೂಡಿಕೆ ಮಾಡುವಂತಾಗಿ, ಅದು, ಇಡೀ ವ್ಯವಸ್ಥೆಯ ಬದಲಾವಣೆಯಲ್ಲಿ ಪರ್ಯವಸಾನಗೊಳ್ಳಬಹುದು.

ವ್ಯವಸ್ಥೆಯೇ ಶಾಂತಿಯುತವಾಗಿ ಪರಿವರ್ತನೆಯಾಗಲು ಕಾರಣೀಭೂತವಾದ ಆರ್ಥಿಕ ಘಟನಾವಳಿಗಳು ಜರುಗುವ ಮುನ್ನವೇ ಸಾರ್ವಜನಿಕರ ಮಟ್ಟದಲ್ಲಿ ಪ್ರಾಮಾಣಿಕ ಚರ್ಚೆಗಳು ನಡೆಯದಂತೆಯೂ ಮತ್ತು ಚರ್ಚೆಗಳು ನಡೆದರೂ ಅದರ ಫಲಿತಾಂಶವನ್ನು ಸರ್ಕಾರ ಒಪ್ಪಿಕೊಳ್ಳದಂತೆ ಹಣಕಾಸು ಬಂಡವಾಳವು ನೋಡಿಕೊಳ್ಳುತ್ತಿತ್ತು. ಜನಾಭಿಪ್ರಾಯವನ್ನು ಮನ್ನಿಸಿ ಅದಕ್ಕನುಗುಣವಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳು ಜರುಗುವ ಮುನ್ನವೇ ಹಣಕಾಸು ಬಂಡವಾಳವು ಅವುಗಳನ್ನು ತಟಸ್ಥಗೊಳಿಸುವ ಏರ್ಪಾಟು ಮಾಡುತ್ತಿತ್ತು.

ಇಲ್ಲಿ ಪ್ರಸ್ತಾಪಿಸಿದ ಮಿತವ್ಯಯ ನೀತಿಗಳ ವಿರುದ್ಧವಾಗಿ ನಡೆದ ಸಾರ್ವಜನಿಕ ಚರ್ಚೆ ಮತ್ತು ಅದರ ಫಲಶೃತಿಯಾಗಿ ಮಿತವ್ಯಯ ನೀತಿ ಹಿಮ್ಮೆಟ್ಟಲಿಲ್ಲ. ಆದರೆ, ವಿಚಾರ ವಿನಿಮಯ ಅಥವಾ ಜನಾಭಿಪ್ರಾಯದ ಮೂಲಕ ನಡೆಯುವ ಸರ್ಕಾರದ ಬಗ್ಗೆ ಯೋಚಿಸುವಾಗ ಬಂಡವಾಳಶಾಹಿ ಸಮಾಜದ ರಚನಾ ವಿನ್ಯಾಸಗಳು(ಸಂಸ್ಥೆಗಳು) ಪ್ರಜಾಪ್ರಭುತ್ವದ ಆಶಯಗಳಿಗೆ ಸದಾಕಾಲವೂ ಅಡ್ಡಿ ಪಡಿಸುವುದು ಸಾಮಾನ್ಯವೇ. ಯಾವಾಗಲೂ ಹೀಗೆಯೇ ಆಗುವುದಿಲ್ಲ ಎಂದು ಭಾವಿಸುವುದು ಮತ್ತು ಜನಾಭಿಪ್ರಾಯಕ್ಕೆ ಮನ್ನಣೆಕೊಟ್ಟು, ಬಂಡವಾಳಶಾಹಿ ತೊಡಗಿಕೊಂಡಿರುವ ಚಟುವಟಿಕೆಗಳಲ್ಲಿ ಪ್ರಭುತ್ವವೂ ತೊಡಗಿಕೊಳ್ಳಬಲ್ಲದು ಹಾಗೂ ಈ ಎರಡರ ಚಟುವಟಿಕೆಗಳ ನಡುವೆ ಒಂದು ರೀತಿಯ ಸಮತೋಲನ ಸಾಧಿಸಬಹುದು ಎಂದು ತಿಳಿಯುವುದು, ಬಂಡವಾಳಶಾಹಿ ರಚನಾ ವಿನ್ಯಾಸಗಳು(ಸಂಸ್ಥೆಗಳು) ರಾಜಿ ಮಾಡಿಕೊಳ್ಳುತ್ತವೆ ಎಂದು ನಂಬಿದಂತಾಗುತ್ತದೆ.

ಸಾರಭೂತವಾಗಿ ಒಂದು ಉದಾರ ಸಿದ್ಧಾಂತ ಎನಿಸಿರುವ ಕೀನ್ಸ್‌ವಾದದ ನಂಬಿಕೆಯೂ ಇದೇ ಆಗಿತ್ತು. ಆದರೆ, ನವ–ಉದಾರವಾದವು ಮೇಲುಗೈ ಪಡೆದಿರುವುದು ಮತ್ತು ಮಹಾ ಕುಸಿತದ ಸಮಯದಲ್ಲಿ ಕೀನ್ಸ್ ಸೂಚಿಸಿದ್ದ ಪರಿಹಾರೋಪಾಯಗಳನ್ನು ಇಡೀ ಜಾಗತಿಕ ಅರ್ಥವ್ಯವಸ್ಥೆಯೇ ಬಿಕ್ಕಟ್ಟಿಗೆ ಒಳಗಾಗಿರುವ ಸಂದರ್ಭದಲ್ಲಿ ತಿರಸ್ಕರಿಸಿರುವುದು ಇಂದಿನ ಅರ್ಥವ್ಯವಸ್ಥೆಯ ಸ್ಥಿತಿ–ಗತಿಗಳ ಬಗ್ಗೆ ಉದಾರವಾದಿಗಳು ಹೊಂದಿರುವ ಕಣ್ಣೋಟಕ್ಕಿಂತಲೂ ಎಡಪಂಥೀಯರು ಹೊಂದಿರುವ ಕಣ್ಣೋಟವನ್ನು ಹೆಚ್ಚು ವಿಶ್ವಾಸಾರ್ಹಗೊಳಿಸಿದೆ.

'ಸುಧಾರಣೆ' ಮತ್ತು 'ಕ್ರಾಂತಿ'

ಇಲ್ಲೊಂದು ಗಹನವಾದ ವಿಷಯವಿದೆ. ಚರ್ಚೆಯ ಸಲುವಾಗಿ, ಪ್ರೊ.ಅಮಾರ್ತ್ಯ ಸೇನ್ ಅವರ ಪರಿಕಲ್ಪನೆಯ ಪ್ರಜಾಪ್ರಭುತ್ವವನ್ನು ಸಾಕಾರಗೊಳಿಸಲು, ಬಂಡವಾಳಶಾಹಿಯ ಸ್ವರೂಪದಲ್ಲಿ ಪರಿವರ್ತನೆ ಅಗತ್ಯವಿಲ್ಲ ಎಂದು ಊಹಿಸಿಕೊಳ್ಳೋಣ. ಪ್ರಾರಂಭದಲ್ಲಿ, ಬಂಡವಾಳವು ವಿರೋಧಿಸುತ್ತಿದ್ದ ಕ್ರಮಗಳನ್ನು ಸಾರ್ವಜನಿಕ ಅಭಿಪ್ರಾಯಗಳ ಒತ್ತಡಕ್ಕೆ ಮಣಿದ ಪ್ರಭುತ್ವವು ಆ ಕ್ರಮಗಳನ್ನು ಕೈಗೊಳ್ಳುತ್ತದೆ ಎಂದು ಊಹಿಸಿಕೊಳ್ಳೋಣ. ಆಗ, ಬಂಡವಾಳದ ಪ್ರತಿರೋಧವನ್ನು ಹಿಮ್ಮೆಟ್ಟಿಸಲು ಪ್ರಭುತ್ವದ ಮಧ್ಯಪ್ರವೇಶವನ್ನು (ಅಂದರೆ, ಬಂಡವಾಳಶಾಹಿಯು ತೊಡಗಿಕೊಂಡಿರುವ ಚಟುವಟಿಕೆಗಳಲ್ಲಿ ಪ್ರಭುತ್ವವೂ ಪ್ರತಿಸ್ಪರ್ಧಿಯಾಗಿ ಹೂಡಿಕೆಮಾಡಿ ಅದೇ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು) ಏರಿಸಬೇಕಾಗುತ್ತದೆ. ಈ ಏರಿಕೆಯ ಪ್ರಕ್ರಿಯೆ

ಪುಟ 17 ನೋಡಿ

'ಸುಧಾರಣಾವಾದಿ' ಗಳು ಮತ್ತು 'ಕ್ರಾಂತಿವಾದಿ'ಗಳಿಗೂ ನಡುವೆ ಇರುವ ವ್ಯತ್ಯಾಸವೆಂದರೆ ಅವರು ಸುಧಾರಣೆ ಬಯಸುತ್ತಾರೆ, ಇವರು ಬಯಸುವುದಿಲ್ಲ, ಇವರ ಕಣ್ಣು ಕ್ರಾಂತಿಯತ್ತವೇ ನೆಟ್ಟಿರುತ್ತದೆ ಎಂದೇನೂ ಅಲ್ಲ. ನಿಜವಾದ ವ್ಯತ್ಯಾಸವೆಂದರೆ ಸುಧಾರಣೆಗಳನ್ನು ತರುವುದು ಕಷ್ಟವೆಂದು ಕಂಡುಬಂದಾಗ ಸುಧಾರಣಾವಾದಿಗಳು ಹಿಂದೆ ಸರಿಯುತ್ತಾರೆ, ಕ್ರಾಂತಿಕಾರಿಗಳು ಸುಧಾರಣೆಗಳಿಗೆ ಬದ್ಧರಾಗಿ ಉಳಿಯುತ್ತಾರೆ.

ಜೈಪುರದಲ್ಲಿ ರೈತರ ಬೃಹತ್ ವಿಜಯೋತ್ಸವ-ಸಂಘರ್ಷ ರ್‍ಯಾಲಿ



ಮಾರ್ಚ್ 2 ರಂದು ರಾಜಸ್ತಾನದ ರಾಜಧಾನಿ ಜೈಪುರದಲ್ಲಿ ಒಂದು ಬೃಹತ್ ರೈತ ರ್‍ಯಾಲಿ ನಡೆಯಿತು. ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ ರಾಜಸ್ತಾನ ರಾಜ್ಯ ಸಮಿತಿಯ ಕರೆಗೆ ಓಗೊಟ್ಟು ಸಾವಿರಾರು ರೈತರು ರಾಜ್ಯದ ಮೂಲೆ-ಮೂಲೆಗಳಿಂದ ಬಂದು ನೆರೆದಿದ್ದರು.

ರಾಜ್ಯದಲ್ಲಿ ಈ ಹಿಂದೆ ಇತ್ತೀಚಿನ ದಿನಗಳಲ್ಲಿ ನಡೆದ ರೈತರ ಹಲವು ಪ್ರತಿಭಟನೆಗಳಿಂದಾಗಿ ರಾಜಸ್ತಾನ ಸರಕಾರ ವಿದ್ಯುತ್ ದರಗಳ ಏರಿಕೆಯನ್ನು ಹಿಂತೆಗೆದುಕೊಳ್ಳಬೇಕಾಗಿ ಬಂದಿತ್ತು. ಕೃಷಿಗೆ ಸಾಕಷ್ಟು ನೀರಾವರಿ ವ್ಯವಸ್ಥೆಯನ್ನು ಮಾಡಲು ನಿರಾಕರಿಸುತ್ತಿರುವ ಬಿಜೆಪಿ ಸರಕಾರದ ವಿರುದ್ಧ ಸಂಬಂಧಪಟ್ಟ ಜಿಲ್ಲೆಗಳಲ್ಲಿ ಎಐಕೆಎಸ್ ನೇತೃತ್ವದಲ್ಲಿ ಹೋರಾಟಗಳು ಭುಗಿಲೆದ್ದವು.

ಈ ಪ್ರಶ್ನೆಯನ್ನು ಎತ್ತಿಕೊಳ್ಳುವ ಬದಲು ವಸುಂಧರ ರಾಜೇ ಸರಕಾರ ಶೆಖಾವತಿ ಪಟ್ಟಿಯ ಪ್ರದೇಶದಲ್ಲಿ ನೀರಾವರಿಗೆ ವಿದ್ಯುತ್ ದರಗಳಲ್ಲಿ ಭಾರೀ ಏರಿಕೆ ಮಾಡಲು ಮುಂದಾಯಿತು. ಮನೆಬಳಕೆಯ ವಿದ್ಯುತ್ತಿಗೂ ಭಾರಿ ದರ ಏರಿಕೆ ಪ್ರಕಟಿಸಲಾಯಿತು. ಕೂಡಲೇ ಎಐಕೆಎಸ್ ಇದರ ವಿರುದ್ಧ ಹಲವಾರು ಪ್ರತಿಭಟನೆಗಳನ್ನು ಸಂಘಟಿಸಿತು. ವಿದ್ಯುತ್ ಬಿಲ್ ಪಾವತಿಯನ್ನು ಬಹಿಷ್ಕರಿಸಿ ಎಂಬ ಕರೆಗೆ ವ್ಯಾಪಕ ಸ್ಪಂದನೆ ದೊರೆಯಿತು.

ಈ ಪ್ರದೇಶದಲ್ಲಿ 1 ಲಕ್ಷಕ್ಕೂ ಹೆಚ್ಚು ಕೊಳವೆ ಬಾವಿಗಳಿವೆ. ಬಿಜೆಪಿ ಸರಕಾರ ವಿದ್ಯುತ್ ಪೂರೈಕೆಯನ್ನು ಖಾಸಗೀಕರಿಸಿದ್ದರಿಂದ ದರಗಳು ಆಗಲೇ ವಿಪರೀತ ಏರಿದ್ದವು. ಇವೆಲ್ಲದರ ವಿರುದ್ಧ ಎಐಕೆಎಸ್ ಸಿಕಾರ್ ಜಿಲ್ಲೆಯಲ್ಲಿ 40,000 ರೈತರನ್ನು, ಝುನ್‌ಝುನುನಲ್ಲಿ 25,000, ಚುರುನಲ್ಲಿ 15,000 ಮತ್ತು ನಾಗೂರ್‌ನಲ್ಲಿ 5000 ರೈತರನ್ನು ಅಣಿನೆರೆಸಿ ಪ್ರತಿಭಟನಾ ರ್‍ಯಾಲಿಗಳನ್ನು ಸಂಘಟಿಸಿತು.

ಈ ಪ್ರತಿಭಟನೆಗಳ ಮುಂದಿನ ಕಾರ್ಯಾಚರಣೆ-ಯಾಗಿ ಮಾರ್ಚ್ 2ರಂದು ರಾಜಧಾನಿ ಜಯಪುರದಲ್ಲಿ 'ಮಹಾಪಡಾವ್' ನಡೆಸಲು ನಿರ್ಧರಿಸಲಾಯಿತು. ಸಿಕಾರ್, ನಾಗೂರ್ ಮತ್ತು ಚುರುನಿಂದ ಮೂರು ಜಾತಾಗಳಲ್ಲಿ ಅಪಾರ ಸಂಖ್ಯೆಯಲ್ಲಿ ಜಯಪುರಕ್ಕೆ ಬಂದು ವಿಧಾನಸಭೆಯನ್ನು ಸುತ್ತುವರೆದು ಅಹೋರಾತ್ರಿ ಧರಣಿ ನಡೆಸಲು ಕರೆ ನೀಡಲಾಯಿತು. ಇದು ಸರಕಾರೀ ವಲಯಗಳಲ್ಲಿ ಭೀತಿಯುಂಟು ಮಾಡಿತು. ಪ್ರಮುಖ ವಿರೋಧಪಕ್ಷ ಕಾಂಗ್ರೆಸ್ ವಿದ್ಯುತ್ ದರ ಏರಿ-ಕೆಯ ಪ್ರಶ್ನೆಯನ್ನು ಎತ್ತಿಕೊಳ್ಳಲಿಲ್ಲ. ಆದ್ದರಿಂದ ಕೆಲವು ಕಾಂಗ್ರೆಸ್ ಶಾಸಕರು ಮತ್ತು ಇತರ ಮುಖಂಡರೂ ಎಐಕೆಎಸ್ ರ್‍ಯಾಲಿಗಳಲ್ಲಿ ಭಾಗವಹಿಸಿದರು.

ಈ ಹೋರಾಟಗಳ ಫಲವಾಗಿ ಸರಕಾರ ವಿದ್ಯುತ್ ದರ ಏರಿಕೆಯನ್ನು ಹಿಂದಕ್ಕೆ ಪಡೆಯಿತು. ಇದು ರೈತರಲ್ಲಿ ಹೊಸ ಹುರುಪನ್ನು ಮೂಡಿಸಿತು. ಆದರೆ ರೈತರ ಇತರ ಪ್ರಮುಖ ಬೇಡಿಕೆಗಳು ಈಡೇರಿಲ್ಲ. ಬೆಳೆಗಳಿಗೆ ಫಲದಾಯಕ ಬೆಲೆ ಸಿಗುತ್ತಿಲ್ಲ, ಲಾಗುವಾಡುಗಳ ವಿಪರೀತ ಬೆಲೆಗಳನ್ನು ಇಳಿಸಿಲ್ಲ, ರೈತರಿಗೆ ಸುಲಭ ದರಗಳಲ್ಲಿ ಸಾಲಗಳು ಸಿಗುತ್ತಿಲ್ಲ, ಸಾಲಮನ್ನಾದ ಬೇಡಿಕೆ ಇತ್ಯರ್ಥವಾಗದೇ ಉಳಿದಿದೆ. ಇವೆಲ್ಲ ಬೇಡಿಕೆಗಳ ಮೇಲೆ ಹೋರಾಟ ಮುಂದುವರೆದಿದೆ. ವಿದ್ಯುತ್ ದರ ಇಳಿಕೆಯ ಹೋರಾಟದ ಯಶಸ್ಸಿನ ಹಿನ್ನೆಲೆಯಲ್ಲಿ ವಿಧಾನಸಭೆ ಘೇರಾವ್ ಬದಲು 'ಜೈಪುರ ಕೂಚ್' ರ್‍ಯಾಲಿಗೆ ಕರೆ ನೀಡಲಾಯಿತು. ಇದು ವಿಜಯೋತ್ಸವ-ಸಂಘರ್ಷ ರ್‍ಯಾಲಿ.

ಕೃಷಿರಂಗದಲ್ಲಿ ನವ-ಉದಾರವಾದಿ ಧೋರಣೆಗಳನ್ನು ಅನುಸರಿಸುವಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಒಮ್ಮತವಿದೆ. ಆದರೆ ಎರಡೂ ಪಕ್ಷಗಳೂ ಚೆನ್ನಾಗಿ ನಾಟಕ ಮಾಡುತ್ತಿವೆ. ಪ್ರತಿಪಕ್ಷವಾಗಿರುವಾಗ ಈ ಧೋರಣೆಗಳನ್ನು ವಿರೋಧಿಸುತ್ತವೆ, ಆದರೆ ಅಧಿಕಾರಕ್ಕೆ ಬಂದಾಗ ಅವನ್ನೇ ಜಾರಿ ಮಾಡುತ್ತವೆ. ಆದ್ದರಿಂದ ಈ ಎರಡೂ ಪಕ್ಷಗಳು ಅನುಸರಿಸುತ್ತಿರುವ ರೈತ-ವಿರೋಧಿ ಧೋರಣೆಗಳನ್ನು ಮುಂದುವರೆಸಲು ನಿರ್ಧರಿಸಿದ ಎಐಕೆಎಸ್ ರಾಜ್ಯಸಮಿತಿ ಈ ರ್‍ಯಾಲಿ ನಡೆಸಲು, ಅಲ್ಲಿ ಕಿಸಾನ್ ಪಂಚಾಯತ್ ನಡೆಸಿ ಹೋರಾಟದ ಮುಂದಿನ ಹಂತವನ್ನು ಯೋಜಿಸಲು ನಿರ್ಧರಿಸಿತು.

ಅದರಂತೆ ಈ ಬೃಹತ್ ರ್‍ಯಾಲಿ ನಡೆದಿದೆ. ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ, ಅಧ್ಯಕ್ಷರಾದ ಆಮ್ರ ರಾವ್, ಇತರ ಎಐಕೆಸ್ ಮುಖಂಡರಾದ ಅಶೋಕ ಧವಳೆ, ವಾಸುದೇವ ಶರ್ಮ, ಪೇಮ ರಾಮ್ ಮತ್ತಿತರರು ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು.

ಮಣಿಪುರ ವಿಧಾನಸಭಾ ಚುನಾವಣೆಗಳಲ್ಲಿ ಎಡ ಪ್ರಜಾಪ್ರಭುತ್ವ ರಂಗ

ಮಣಿಪುರ ವಿಧಾನ ಸಭಾ ಚುನಾವಣೆಗಳಲ್ಲಿ ಏಳು ಪಕ್ಷಗಳು, ಸಿಪಿಐ(ಎಂ), ಸಿಪಿಐ, ಜೆಡಿ(ಯು), ಎನ್‌ಸಿಪಿ, ಎಎಪಿ, ಪಿಡಿಎ ಮತ್ತು ಎಂಎನ್‌ಡಿಎಫ್ ಎಡ ಪ್ರಜಾಪ್ರಭುತ್ವ ರಂಗವನ್ನು ರಚಿಸಿಕೊಂಡಿದ್ದು 33 ಸ್ತಾನಗಳಲ್ಲಿ ಸ್ಪರ್ಧಿಸುತ್ತಿವೆ, 21 ಕ್ಷೇತ್ರಗಳಲ್ಲಿ ಎನ್‌ಪಿಪಿ ಗೆ ಬೆಂಬಲ ನೀಡುತ್ತಿವೆ.

ಈ ರಂಗ ಭ್ರಷ್ಟ ಕಾಂಗ್ರೆಸ್ ಸೋಲಿಸಿ ಮತ್ತು ಕೋಮುವಾದಿ ಬಿಜೆಪಿಯನ್ನು ಮೂಲೆಗೆ ತಳ್ಳಿ, ಒಂದು ಪರ್ಯಾಯ ಸರಕಾರವನ್ನು ಆರಿಸಿ ಎಂದು ಮಣಿಪುರದ ಮತದಾರರಿಗೆ ಕರೆ ನೀಡಿದೆ.

ಈ ರಂಗದ ಪರವಾಗಿ ಸಿಪಿಐ(ಎಂ) ಸಂಸತ್ ಸದಸ್ಯ ಮತ್ತು ತ್ರಿಪುರಾದ ಹಿರಿಯ ಮುಖಂಡ ಜಿತೇಂದ್ರ ಚೌಧುರಿ ರಾಜ್ಯದಲ್ಲಿ ಚುನಾವಣಾ ಸಭೆಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದಾರೆ.

ಜಿತೇಂದ್ರ ಚೌಧುರಿಯವರು ಈ ರಾಜ್ಯದಲ್ಲಿ ಮಹಿಳಾ ಹೋರಾಟದ ದನಿಯಾಗಿರುವ ಮತ್ತು ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆ(ಎಎಫ್‌ಎಸ್‌ಪಿಎ) ವಿರುದ್ಧ ದಶಕಗಳಿಂದ ಹೋರಾಡುತ್ತಿರುವ ಇರೋಮ್ ಶರ್ಮಿಲ ಚಾನು ಅವರನ್ನು ಭೇಟಿಯಾಗಿ ಅವರಿಗೆ ಸಿಪಿಐ(ಎಂ)ನ ಬೆಂಬಲವನ್ನು ವ್ಯಕ್ತಪಡಿಸಿದರು. ಇವರು ತಮ್ಮ ದೀರ್ಘ ಕಾಲದ ಉಪವಾಸ ಹೋರಾಟದ ನಂತರ ಈಗ ಈ ಚುನಾವಣೆಗಳಲ್ಲಿ ಹೋರಾಟ ಮುಂದುವರೆಸಲು ನಿರ್ಧರಿಸಿ ಮುಖ್ಯ ಮಂತ್ರಿಯಾಗಿರುವ ಇಬೊಬ್ ಸಿಂಗ್ ಅವರ ವಿರುದ್ಧ ಸ್ಪರ್ಧಿಸುತ್ತಿದ್ದಾರೆ.



ವಿಚಾರ ವಿನಿಮಯದಿಂದ ಸರ್ಕಾರ

ಪುಟ 16 ರಿಂದ

ಸತತವಾಗಿರುವುದಿಲ್ಲ ಮತ್ತು ಒಂದು ಹಂತದಲ್ಲಿ ಅದು ನಿಲ್ಲುತ್ತದೆ ಎಂದು ಅಂದುಕೊಳ್ಳೋಣ.

ಸಾಧಾರಣವಾಗಿ ಹೇಳುವುದಾದರೆ, ಪ್ರಭುತ್ವದ ಮಧ್ಯಪ್ರವೇಶವು ಒಂದು ಅಗತ್ಯ ಮಟ್ಟ ತಲುಪುವ ಮೊದಲೇ ನಿಲ್ಲುತ್ತದೆ. ಏಕೆಂದರೆ, ಸುಧಾರಣೆ ಮಾಡಲು ಹೊರಟ ನಾಯಕರ ನರಗಳು ಇಳೇ ಬೀಳುತ್ತವೆ. ಈ ಮಧ್ಯೆ, ಸಾರ್ವಜನಿಕ ಚರ್ಚೆಗಳ ದಿಕ್ಕು ತಪ್ಪಿಸಿ, ನಾಯಕನ ಪುಕ್ಕಲುತನವನ್ನು ಮುಚ್ಚಿಹಾಕಿಕೊಳ್ಳಲು ಅನುಕೂಲವಾಗುವಂತೆ ಇಡೀ ಚರ್ಚೆಯನ್ನು ನಿರ್ವಹಿಸಲಾಗುತ್ತದೆ. ಸಾರ್ವಜನಿಕ ಚರ್ಚೆ ಅಥವಾ ವಿಚಾರ-ವಿನಿಮಯಗಳು ಸರ್ಕಾರದ ನೀತಿಗಳ ಮೇಲೆ ಪ್ರಭಾವ ಬೀರುವುದರ ಬದಲಾಗಿ, ಕೆಲವು ಇತಿ ಮಿತಿಗಳನ್ನು ವೈಭವೀಕರಿಸಿ ಅವು ಸಾರ್ವಜನಿಕ ಚರ್ಚೆಯ ಫಲಶೃತಿಯನ್ನೇ ಪ್ರಭಾವಿಸುತ್ತವೆ.

'ಸುಧಾರಣೆ'ಯಿಂದ ಬೇಳೆ ಬೇಯುವುದು ಇಷ್ಟೇ. 'ಸುಧಾರಣಾವಾದಿ' ಗಳು ಮತ್ತು 'ಕ್ರಾಂತಿವಾದಿ'ಗಳಿಗೂ ನಡುವೆ ಇರುವ ವ್ಯತ್ಯಾಸವೆಂದರೆ ಅವರು ಸುದ-ಾರಣೆ ಬಯಸುತ್ತಾರೆ, ಇವರು ಬಯಸುವುದಿಲ್ಲ, ಇವರ ಕಣ್ಣು ಕ್ರಾಂತಿಯತ್ತವೇ ನೆಟ್ಟಿರುತ್ತದೆ ಎಂದೇನೂ ಅಲ್ಲ. ನಿಜವಾದ ವ್ಯತ್ಯಾಸವೆಂದರೆ ಸುಧಾರಣೆಗಳನ್ನು ತರುವುದು ಕಷ್ಟವೆಂದು ಕಂಡುಬಂದಾಗ ಸುಧಾರಣಾವಾದಿಗಳು ಹಿಂದೆ ಸರಿಯುತ್ತಾರೆ, ಕ್ರಾಂತಿಕಾರಿಗಳು ಸುಧಾರಣೆಗಳಿಗೆ ಬದ್ಧರಾಗಿ ಉಳಿಯುತ್ತಾರೆ. ರಷ್ಯಾ ಕ್ರಾಂತಿ ಸನ್ನಿಹಿತವಾಗುವ ಕೆಲವು ದಿನಗಳ ಹಿಂದೆ ಅಧಿಕಾರದಲ್ಲಿದ್ದ ಕೆರೆನ್ಸ್ಕಿ ಸರ್ಕಾರವು 'ಭೂಮಿ - ಶಾಂತಿ-ಅನ್ನ' ಒದಗಿಸುವ ಕಾರ್ಯಕ್ರಮದಿಂದ ಹಿಂದೆ ಸರಿಯಿತು. ಬೋಲ್ಷೆವಿಕ್ ಕ್ರಾಂತಿ ಅದನ್ನು ಅನುಷ್ಠಾನಗೊಳಿಸಿತು. ವ್ಯತ್ಯಾಸ ಇರುವುದು ಇಲ್ಲೇ.

ಪ್ರಜಾಪ್ರಭುತ್ವ ಎಂದರೆ ಅದು ಚರ್ಚೆಯ ಅಥವಾ ವಿಚಾರವಿನಿಮಯಗಳ ಮೂಲಕ ನಡೆಯುವ ಸರ್ಕಾರ ಎಂಬುದಾಗಿ ಪ್ರೊ.ಅಮಾರ್ತ್ಯ ಸೇನ್ ಮಾಡಿರುವ ನಿರೂಪಣೆ ಮಹತ್ವಪೂರ್ಣವಾಗಿದೆ. ಬಂಡವಾಳಶಾಹಿ ಸಂಸ್ಥೆಗಳು ಪ್ರಜಾಪ್ರಭುತ್ವದ ಆಶಯಗಳಿಗೆ ಅಡ್ಡಿಯಾಗಿವೆ. ಬಂಡವಾಳಶಾಹಿ ವ್ಯವಸ್ಥೆಯ ಚೌಕಟ್ಟಿನೊಳಗೆ ಚರ್ಚೆ-ವಿಚಾರವಿನಿಮಯಗಳ ಮೂಲಕ ಬಯಸುವ ಸುಧಾರಣೆಗಳು ಯಶಸ್ವಿಯಾಗುತ್ತವೆಯೊ ಇಲ್ಲವೊ ಎಂಬುದು ಭಾವನೆಗಳಿಗೆ ಸಂಬಂಧಿಸಿದ **ಅಮೂರ್ತ** ಸಂಗತಿಯಲ್ಲ.ಪಟ್ಟುಹಿಡಿದು ಸುಧಾರಣೆಗಳು ಸಾಕಾರಗೊಳ್ಳುವಂತೆ ಮಾಡುವ **ಮೂರ್ತ** ಸಂಗತಿ. ಈ ವಿಶ್ಲೇಷಣೆಯ ಪ್ರಕಾರ ಸುಧಾರಣೆಗಳಿಗೆ ನಿರಂತರ ಬದ್ಧತೆಯ ಫಲಶೃತಿಯೇ ಕ್ರಾಂತಿ.



ಸಾಮಾಜಿಕ ಭದ್ರತೆ ನೀಡಿ ಹೋರಾಟಕ್ಕೆ ಅಸಂಘಟಿತ ಕಾರ್ಮಿಕರ ನಿರ್ಧಾರ

ನಗರದಲ್ಲಿ ದಿನದ ಕೂಲಿ ನಂಬಿ ಬದುಕು ಸಾಗಿಸುವ ಅಸಂಘಟಿತ ಕಾರ್ಮಿಕರ ಕುರಿತು ಇತ್ತೀಚಿಗೆ ಬೆಂಗಳೂರಿನಲ್ಲಿ "ಅಸಂಘಟಿತ ಕಾರ್ಮಿಕರು ಮತ್ತು ಸಾಮಾಜಿಕ ಭದ್ರತೆ" ಎಂಬ ವಿಚಾರಸಂಕಿರಣ ಏರ್ಪಡಿಸಲಾಗಿತ್ತು. ಸಮಾಜವಾದಿ ಕ್ರಾಂತಿ ಶತಮಾನೋತ್ಸವ ಸಮಿತಿ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್, ಮನೆಕೆಲಸಗಾರರ ಸಂಘ, ಬೀದಿಬದಿ ವ್ಯಾಪಾರಿಗಳ ಸಂಘ ಹಾಗು ಆಟೋರಿಕ್ಷಾ ಚಾಲಕರ ಸಂಘಗಳು ಜಂಟಿಯಾಗಿ 'ಸಮಾಜವಾದಿ ಕ್ರಾಂತಿ ಶತಮಾನೋತ್ಸವ'ದ ಅಂಗವಾಗಿ ವಿಚಾರಸಂಕಿರಣ ಹಮ್ಮಿಕೊಂಡಿದ್ದವು. ಈ ವಿಚಾರ ಸಂಕಿರಣದಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಅಸಂಘಟಿತ ಕಾರ್ಮಿಕರ ದಯನೀಯ ಬದುಕಿನ ಬವಣೆಯನ್ನು ತೆರೆದಿಟ್ಟಿತು.

ಅಸಂಘಟಿತ ಕಾರ್ಮಿಕರು ಎಂದರೆ ಯಾರು?

ಇಂದು ದೇಶದಲ್ಲಿ 93 ಶೇಕಡ ಇದ್ದಾರೆ. ಬಿಡಿ ಬಿಡಿಯಾಗಿ ದುಡಿಯುವ, ಯಾವುದೇ ಸಾಮಾಜಿಕ ಭದ್ರತೆ – ಕೆಲಸದ ಭದ್ರತೆ ಮತ್ತು ಕಾರ್ಮಿಕ ಕಾನೂನುಗಳು ಯಾವುದೂ ಅನ್ವಯಿಸುವುದಿಲ್ಲವೋ ಅಂಥವರನ್ನು ಅಸಂಘಟಿತ ಕಾರ್ಮಿಕರು ಎಂದು ಕರೆಯಲಾಗುತ್ತದೆ. ಕಾರ್ಮಿಕ ಇಲಾಖೆ ವ್ಯಾಖ್ಯಾನದಂತೆ 'ಗ್ರ್ಯಾಚುಯಿಟಿ ಇಲ್ಲದ, ಪಿಎಫ್ ಇಲ್ಲದ ಮತ್ತು ಇಎಸ್‌ಐ ಸೌಲಭ್ಯಗಳಿಲ್ಲದೇ ದುಡಿಯುವವರನ್ನು ಅಸಂಘಟಿತ ಕಾರ್ಮಿಕರು' ಎಂದು ಪರಿಗಣಿಸಲಾಗುತ್ತದೆ. ಇವರಲ್ಲಿ ವಿದ್ಯಾಭ್ಯಾಸ ಇಲ್ಲದವರು ಅಥವಾ ಕಡಿಮೆ ವಿದ್ಯಾಭ್ಯಾಸ ಇರುವವರು ಮಾತ್ರವೇ ಇದ್ದಾರೆ. ಇವರಿಗೆ ಸುಲಭದಲ್ಲಿ ಉದ್ಯೋಗ ಸಿಗುವುದಿಲ್ಲ. ಹಾಗು ಕೈಗಾರಿಕಾ ವಲಯದಲ್ಲಿ ಉದ್ಯೋಗ ಸಿಗುವುದು ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಅವರು ಅಸಂಘಟಿತ ವಲಯದ ಕೆಲಸಗಳಲ್ಲಿ ತೊಡಗುವುದು ಸಾಮಾನ್ಯವಾಗಿದೆ.

ಇಂಥ ಅಸಂಘಟಿತ ಕಾರ್ಮಿಕರ ಸಂಖ್ಯೆ ನಮ್ಮ ದೇಶದಲ್ಲಿ ದಿನೇ ದಿನೇ ಬೆಳೆಯುತ್ತಲೇ ಇದೆ. ಸರ್ಕಾರದ ಕೈಗಾರಿಕಾ ನೀತಿ, ಶಿಕ್ಷಣ ನೀತಿ, ಆರೋಗ್ಯ ನೀತಿ, ಕೃಷಿ ನೀತಿಯಿಂದಾಗಿ ಬಹಳ ದೊಡ್ಡ ಸಂಖ್ಯೆಯಲ್ಲಿ ಅಸಂಘಟಿತ ಕಾರ್ಮಿಕರು ಸೃಷ್ಟಿಯಾಗುತ್ತಿದ್ದಾರೆ. ಕೃಷಿ ಕೂಲಿಕಾರರಾಗಿ ಹಾಗು ಸಣ್ಣ ಹಿಡುವಳಿದಾರರಾಗಿ ಹಳ್ಳಿಗಳಲ್ಲಿ ದುಡಿಯುತ್ತಿದ್ದವರು ಕೃಷಿ ಇಳಿಮುಖವಾಗುತ್ತಿರುವುದರಿಂದ ಹಾಗು ನಿರಂತರ ದುಡಿಮೆ ಇಲ್ಲದಿರುವುದು ಹಾಗು ಸಿಗುವ ಕೂಲಿ ಜೀವನ ನಿರ್ವಹಿಸಲು ಸಾಕಾಗದಿರುವುದು ವಲಸೆಗೆ ಕಾರಣವಾಗುತ್ತಿದೆ. ಬಹುತೇಕ ಇಂತಹ ಜನ ದೊಡ್ಡ ನಗರಗಳಿಗೆ ವಲಸೆ ಬರುತ್ತಿರುವ ಪರಿಣಾಮ ಅವರೆಲ್ಲರೂ ಕಟ್ಟಡ ನಿರ್ಮಾಣ, ಆಟೋ ಓಡಿಸುವುದು, ಮನೆಕೆಲಸ ಮಾಡುವುದು, ಹಮಾಲಿ, ಬೀಡಿ ಕಟ್ಟುವುದು, ಟೈಲರ್, ದೋಬಿ, ಇತ್ಯಾದಿ ಕೆಲಸಗಳಲ್ಲಿ ತೊಡಗಿ ದುಡಿಯುತ್ತಿದ್ದಾರೆ.

ರಾಜ್ಯ ಸರ್ಕಾರ ರಾಜ್ಯದಲ್ಲಿ 122 ತರಹದ ಕೆಲಸ ಮಾಡುವ ಕಾರ್ಮಿಕರನ್ನು ಅಸಂಘಟಿತರೆಂದು ಪರಿಗಣಿಸಿದೆ. ಇಂದು ರಾಜ್ಯ ಸರ್ಕಾರಿ ಅಂಕಿಅಂಶಗಳ ಪ್ರಕಾರ ಸುಮಾರು 2 ಕೋಟಿ ಅಸಂಘಟಿತ ಕಾರ್ಮಿಕರಿದ್ದಾರೆಂದು ಗುರ್ತಿಸಿದೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿರುವ ಈ ಕಾರ್ಮಿಕರಿಗೆ ಸರ್ಕಾರದಿಂದ ಈವರೆಗೆ ಯಾವ ಸೌಲಭ್ಯಗಳೂ ದಕ್ಕಿಲ್ಲ. ಬಹಳ ವರ್ಷಗಳಿಂದಲೂ ಅಸಂಘಟಿತ ಕಾರ್ಮಿಕರ ಕಾನೂನು ತರಲು ಪ್ರಯತ್ನ ನಡೆದಿತ್ತಾದರೂ ಇತ್ತೀಚಿಗೆ 2008 ರಲ್ಲಿ 'ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾನೂನು ಜಾರಿಗೆ ಬಂದಿದೆ. ಹಾಗೆಯೇ ಇದೇ ಸಮಯದಲ್ಲಿ ರಾಜ್ಯದಲ್ಲಿ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಯನ್ನೂ ರಚಿಸಲಾಗಿದೆ. ಅದರ ಕೇಂದ್ರ ಕಛೇರಿ ಬೆಂಗಳೂರಿನ ಕಾರ್ಮಿಕ ಭವನದಲ್ಲಿ ತನ್ನ ಕಾರ್ಯ ನಿರ್ವಹಿಸುತ್ತಿದೆ.

ಅಸಂಘಟಿತ ಕಾರ್ಮಿಕರ ಬದುಕು – ಬವಣೆ

ಅಸಂಘಟಿತ ಕಾರ್ಮಿಕರೆಂದರೆ ಬೆಂಗಳೂರಿನ ಕಟ್ಟಕಡೆಯ ಶ್ರಮಜೀವಿಗಳು. ಇವರಿಗೆ ಕೆಲಸದ ಅವಧಿಯೆಂಬುದಿಲ್ಲ. ನಿಗದಿತ ಆದಾಯವೆಂಬುದಿಲ್ಲ. ಸ್ಲಂಗಳಲ್ಲಿ, ಸಣ್ಣಪುಟ್ಟ ಕಾಲೋನಿಗಳಲ್ಲಿ, ಶೆಡ್‌ಗಳಲ್ಲಿ, ಹೆಚ್ಚೆಂದರೆ ಸಾಧಾರಣ ಸಿಂಗಲ್ ಬೆಡ್‌ರೂಂ ಮನೆಗಳೇ ಇವರ ಅರಮನೆಗಳು. ಕೆಲ ಬೀದಿಬದಿ ವ್ಯಾಪಾರಿಗಳ ವಾಸಸ್ಥಾನ ಬೀದಿಯೇ ಆಗಿರುತ್ತದೆ. ಬಹುತೇಕರು ಸಿಟಿಯಿಂದ ಆಚೆ ವಾಸವಿದ್ದು ಬೆಳಿಗ್ಗೆ ಕೆಲಸಕ್ಕೆ ಬಂದರೆ ಮನೆಗೆ ಹಿಂತಿರುಗುವುದು ರಾತ್ರಿ 9ರ ನಂತರವೇ. ಸರ್ಕಾರಿ ಅಥವಾ ಕಾರ್ಪೋರೇಷನ್ ಶಾಲೆಗಳ ವಿದ್ಯಾರ್ಥಿಗಳಲ್ಲಿ ಬಹುತೇಕರು ಇವರ ಮಕ್ಕಳೇ ಆಗಿರುತ್ತಾರೆ. ಆರೋಗ್ಯ ಕೆಟ್ಟಲ್ಲಿ, ಮಳೆ ಬಂದಲ್ಲಿ, ಸ್ಟ್ರೈಕ್ ಅಥವಾ ಬಂದ್ ಆದಲ್ಲಿ ಇವರ ಅಂದಿನ ಆದಾಯವೂ ಬಂದ್ ಆಗುತ್ತದೆ. ಹೆಚ್ಚು ತೆರಿಗೆ ಕಟ್ಟುವವರೂ ಇವರೇ, ಪೊಲೀಸರ ಜೇಬು ತುಂಬಿಸುವವರೂ ಇವರೇ, ಚುನಾವಣೆಯಲ್ಲಿ ಕ್ಯೂನಲ್ಲಿ ಮತ ಹಾಕುವವರೂ ಇವರೇ. ಎಷ್ಟು ದುಡಿದರೂ ನೆಮ್ಮದಿ ಜೀವನ ಇವರ ಪಾಲಿಗಿಲ್ಲ. ಈ ಜನ ಸರ್ಕಾರಗಳ, ಮಾಲೀಕರ ಅವಕೃಪೆಗೆ ಸದಾ ಒಳಗಾಗುತ್ತಲೇ ಬಂದಿದ್ದಾರೆ. ಕನಿಷ್ಠಕೂಲಿ, ಪೌಷ್ಠಿಕ ಆಹಾರ, ವಿದ್ಯಾಭ್ಯಾಸ, ಆರೋಗ್ಯಲ್ಲದರಿಂದಲೂ ವಂಚಿತರಾದವರೂ ಇವರೇ ಆಗಿದ್ದಾರೆ.



ಅಸಂಘಟಿತ ಕಾರ್ಮಿಕರ ಹೋರಾಟ

ರಾಜ್ಯ ಸರ್ಕಾರ ಕಾರ್ಮಿಕ ಸಂಘಟನೆಗಳ ಅನೇಕ ವರ್ಷಗಳ ಹೋರಾಟದ ಒತ್ತಾಯದ ಪರಿಣಾಮವಾಗಿ ಕಲ್ಯಾಣ ಮಂಡಳಿಯನ್ನೇನೋ ರಚಿಸಿತು. ಆದರೆ ಅದಕ್ಕೆ ಬೇಕಾದ ಹಣಕಾಸು ಒದಗಿಸಲಿಲ್ಲ. ಹೀಗಾಗಿ ಕಲ್ಯಾಣ ಮಂಡಳಿ ಇದ್ದೂ ಇಲ್ಲದಂತಾಗಿದೆ. ಸಿಐಟಿಯು ಸೇರಿದಂತೆ ಇತರೆ ಕಾರ್ಮಿಕ ಸಂಘಟನೆಗಳು ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಸೌಲಭ್ಯಗಳಾದ ಆರೋಗ್ಯ ವಿಮೆ, ಭವಿಷ್ಯ ನಿಧಿ, ವಸತಿ ಯೋಜನೆ, ಆರೋಗ್ಯ ಸೌಲಭ್ಯ, ಶೈಕ್ಷಣಿಕ ನೆರವು, ಕೆಲಸದ ಭದ್ರತೆ, ಸಾಲ ಸೌಲಭ್ಯ, ಕನಿಷ್ಠ ಕೂಲಿ ಇತ್ಯಾದಿ ಬೇಡಿಕೆಗಳನ್ನಿಟ್ಟು ಅನೇಕ ವರ್ಷಗಳಿಂದ ಹೋರಾಟಗಳನ್ನು ನಡೆಸುತ್ತಿವೆ. ಇದರ ಫಲವಾಗಿಯೇ 'ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ'ಯನ್ನು ರಚಿಸಲಾಯಿತು. ಸಾಕಷ್ಟು ಇತಿಮಿತಿಗಳಿದ್ದಾಗಿಯೂ ಇದರಿಂದ ಒಂದಷ್ಟು ಸೌಲಭ್ಯಗಳು ಕಟ್ಟಡ ಕಾರ್ಮಿಕರಿಗೆ ಸಿಗುತ್ತಿವೆ. ಆದರೆ ಇನ್ನುಳಿದ ಅಸಂಘಟಿತರಿಗೆ ಯಾವ ರೀತಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಇದುವರೆವಿಗೂ ಸಾಧ್ಯವಾಗಿಲ್ಲ. ಒಂದಿಷ್ಟು ಆರೋಗ್ಯ ವಿಮೆ ಸೌಲಭ್ಯಗಳನ್ನು ಪ್ರಕಟಿಸಿವೆಯಾದರೂ ಅವು ಪ್ರಯೋಜನಕ್ಕೆ ಬರುತ್ತಿಲ್ಲ. ಕಾರಣ ಬಹುತೇಕ ಆರೋಗ್ಯ ವಿಮೆಗಳು ಸಾವು ಬಂದರೆ ಮಾತ್ರವೇ ಅನ್ವಯವಾಗುವಂತಹ ರೀತಿಯಲ್ಲಿ ಅವುಗಳ ನಿಯಮಾವಳಿಗಳಿವೆ ಎಂಬುದು ವಾಸ್ತವ.

ವಿಶ್ವಬ್ಯಾಂಕ್ ವಿಧಿಸಿದ ಷರತ್ತುಗಳ ಕಾರಣದಿಂದ ಸರ್ಕಾರಗಳು ಸಾಮಾಜಿಕ ಸುರಕ್ಷತಾ ಯೋಜನೆಗಳಿಗೆ ಹಣ ಒದಗಿಸುತ್ತಿಲ್ಲ. ಎಲ್ಲದಕ್ಕೂ ಹಣಕಾಸು ಇಲಾಖೆ 'ವಿಶ್ವಬ್ಯಾಂಕ್ ಷರತ್ತಿ'ನ ನೆಪವೊಡ್ಡಿ ಕೊಕ್ಕೆ ಹಾಕುತ್ತದೆ. ಇಂಥ ಪರಿಸ್ಥಿತಿಯಲ್ಲಿ ಸೌಲಭ್ಯಗಳಿಗೆ ಸಂಪನ್ಮೂಲ ಒದಗಿಸುವುದಾದರೂ ಎಲ್ಲಿಂದ ಎಂಬ ಯಕ್ಷ ಪ್ರಶ್ನೆ ಕಾಡುವುದು ಸಹಜವೇ ಆದರೂ ದಾರಿಗಳೂ ಇವೆ ಎಂಬುದೂ ಸತ್ಯ. ಈಗಾಗಲೇ ಪಶ್ಚಿಮ ಬಂಗಾಳ, ತ್ರಿಪುರಾ ಮತ್ತು ಕೃಳಾ ರಾಜ್ಯಗಳಲ್ಲಿ ಸಾಮಾಜಿಕ ಸುರಕ್ಷತಾ ಸೌಲಭ್ಯಗಳನ್ನು ತಮ್ಮ ಇತಿಮಿತಿಯಲ್ಲಿ ನೀಡುತ್ತಿವೆ. ಉದಾಹರಣೆಗೆ ಪಶ್ಚಿಮ ಬಂಗಾಳದಲ್ಲಿ ಅಸಂಘಟಿತ ಕಾರ್ಮಿಕರಿಗೆ ಭವಿಷ್ಯ ನಿಧಿ ಜಾರಿಯಲ್ಲಿದೆ. ಕಾರ್ಮಿಕ ಒಂದು ಷೇರು ನೀಡಿದ್ದಲ್ಲಿ ಸರ್ಕಾರವೂ ಒಂದು ಷೇರು ನೀಡುತ್ತಿದೆ. ಇದೇ ಮಾದರಿಯಲ್ಲಿ ಕರ್ನಾಟಕದಲ್ಲೂ ಜಾರಿ ಮಾಡಬೇಕೆಂದು ಸಿಐಟಿಯು ಸರ್ಕಾರವನ್ನು ಒತ್ತಾಯಿಸುತ್ತಿದೆ. ಕಾರ್ಮಿಕ ಇಲಾಖೆಯ ಅಧಿಕಾರಿಗಳು ಪಶ್ಚಿಮ ಬಂಗಾಳದ ಭವಿಷ್ಯ ನಿಧಿ ಮಾದರಿಯಂತೆ ಸರಕಾರಕ್ಕೆ ಪ್ರಸ್ತಾಪ ಸಲ್ಲಿಸಿದ್ದಾರೆ. ಆದರೆ ಇದಕ್ಕೆ ಹಣಕಾಸು ಇಲಾಖೆ ಒಪ್ಪಿಗೆ ನೀಡುತ್ತಿಲ್ಲ ಎಂದು ತಮ್ಮ ಅಸಹಾಯಕತೆ ವ್ಯಕ್ತಪಡಿಸುತ್ತಾರೆ.

ಕಟ್ಟಡ ನಿರ್ಮಾಣ ಕಾರ್ಮಿಕರ ಕಲ್ಯಾಣ ನಿಧಿಗೆ ಕಟ್ಟಡದ ಮಾಲೀಕರಿಂದ ಸೆಸ್ ಸಂಗ್ರಹಿಸುವ ಮಾದರಿಯಲ್ಲಿಯೇ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಗೂ ನಿಧಿ ಸಂಗ್ರಹಿಸಲು ಹಲವು ಮಾರ್ಗಗಳಿವೆ. ಕೈಗಾರಿಕೆಗಳಿಂದ, ಎಪಿಎಂಸಿ, ಕಂದಾಯ ಇಲಾಖೆ, ಬಿಬಿಎಂಪಿ ಮುಂತಾದ ವಿಭಾಗಗಳಿಂದ ನಿಧಿ ಸಂಗ್ರಹಿಸಲು ಸಾಧ್ಯವಿದೆಯಾದರೂ ಸರ್ಕಾರ ತನ್ನ ಇಚ್ಛಾಸಕ್ತಿ ತೋರುತ್ತಿಲ್ಲ. ಕೈಗಾರಿಕಾ ಉದ್ದಿಮೆದಾರರು ಇಲ್ಲಿನ ಭೂಮಿ, ನೀರು, ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ತಮ್ಮ ಲಾಭ ಹೆಚ್ಚಿಸಿಕೊಳ್ಳುವಾಗ ತಮ್ಮ ಲಾಭದ ಶೇಕಡ 1ರಷ್ಟನ್ನು ಸೆಸ್ ರೂಪದಲ್ಲಿ ನೀಡಿದರೂ ಅಸಂಘಟಿತ ಕಾರ್ಮಿಕರಿಗೆ ಅನೇಕ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಿದೆ. ಹೀಗೆ ಅನೇಕ ಮಾರ್ಗಗಳಿವೆ ಹಾಗು ಇವೆಲ್ಲವು ಅಧಿಕಾರಿಗಳಿಗೆ ತಿಳಿದಿಲ್ಲವೆಂದೇನಲ್ಲ, ಆದರೆ ಮಾಡುವ ಪ್ರಯತ್ನಕ್ಕೆ ಮುಂದಾಗುತ್ತಿಲ್ಲ. ಹಾಗೆಂದು ಹೋರಾಟಗಳು ನಿಂತಿಲ್ಲ, ಮುಂದುವರಿಯುತ್ತಿವೆ. ಅಸಂಘಟಿತರನ್ನು ಸಂಘಟಿಸುವ, ಅವರಲ್ಲಿ ಅರಿವು ಮೂಡಿಸುವ ಆ ಮೂಲಕ ಹೋರಾಟಗಳಲ್ಲಿ ಅಣಿನೆರಸುವ ಪ್ರಯತ್ನ ಮುಂದುವರಿಯಬೇಕಿದೆ.

ನಿರ್ಣಯ

ಅಸಂಘಟಿತ ಕಾರ್ಮಿಕರಿಗೆ ವಸತಿ–ನಿವೇಶನಕ್ಕಾಗಿ ಏಪ್ರಿಲ್ 4 ರಂದು ಬೃಹತ್ ಹೋರಾಟ

ಸರ್ಕಾರದ ಕಾರ್ಮಿಕ ಇಲಾಖೆ ಗುರ್ತು ಮಾಡಿರುವ 122 ತರಹದ ಕೆಲಸ ನಿರ್ವಹಿಸುವ ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ರಾಜ್ಯ ಸರ್ಕಾರವು ಸರ್ಕಾರಿ ಭೂಮಿಯಲ್ಲಿ ಅಥವಾ ಭೂಮಿಯನ್ನು ಖರೀದಿಸಿ ಮನೆ –ನಿವೇಶನ ನೀಡಬೇಕೆಂದು ಒತ್ತಾಯಿಸಿ ಏಪ್ರಿಲ್ 4, 2017 ರಂದು ಬೃಹತ್ ಪ್ರತಿಭಟನೆ ಮಾಡಲು ವಿಚಾರಸಂಕಿರಣದಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಪ್ರೊ. ಚಂದ್ರಪೂಜಾರಿ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು. ಸಿಐಟಿಯು ರಾಜ್ಯಾಧ್ಯಕ್ಷರಾದ ವರಲಕ್ಷ್ಮಿ, ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಮಾತನಾಡಿದರು. ಕಾರ್ಮಿಕ ಇಲಾಖೆಯ ಜಂಟಿ ಆಯುಕ್ತ ಶ್ರೀಪಾದ್, ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್‌ನ ರಾಜ್ಯಾಧ್ಯಕ್ಷ ಕೆ.ಮಹಾಂತೇಶ್ ಹಾಗು ಬೀದಿಬದಿ ವ್ಯಾಪಾರಿಗಳ ಸಂಘದ ರಾಜ್ಯಾಧ್ಯಕ್ಷ ಕೆ.ಎನ್.ಉಮೇಶ್ ಅಸಂಘಟಿತ ಕಾರ್ಮಿಕರ ವಿವಿಧ ವಿಷಯಗಳ ಕುರಿತು ವಿಷಯ ಮಂಡನೆ ಮಾಡಿ ಮಾತನಾಡಿದರು. ಉದ್ಘಾಟನಾ ಸಭೆಯ ಅಧ್ಯಕ್ಷತೆಯನ್ನು ಸಿಐಟಿಯು ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಅಧ್ಯಕ್ಷ ಕೆ.ಪ್ರಕಾಶ್ ಅ ಧ್ಯಕ್ಷತೆ ವಹಿಸಿದ್ದರು. ವಿಚಾರ ಗೋಷ್ಠಿ ಅಧ್ಯಕ್ಷತೆಯನ್ನು ಆಟೋರಿಕ್ಷಾ ಚಾಲಕರ ಸಂಘದ ಕಾರ್ಯಾಧ್ಯಕ್ಷ ಬಿ.ರಾಜಶೇಖರ ಮೂರ್ತಿ ವಹಿಸಿದ್ದರು. ಸಿಐಟಿಯು ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಬಿ.ಎನ್.ಮಂಜುನಾಥ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಸಮ್ಮ ಮತ್ತು ಬಿ.ವಿ ರಾಘವೇಂದ್ರ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಬಿ.ಎನ್.ರಘು ಮತ್ತು ಡಿ.ಮಹದೇಶ್ ಸ್ವಾಗತ ಮಾಡಿದರೆ ಸೆಲ್ವಿ ಹಾಗು ರುದ್ರಮೂರ್ತಿ ವಂದನಾರ್ಪಣೆ ಮಾಡಿದರು.

– ಲಿಂಗರಾಜು

ಸಾವಿನ ವ್ಯಾಪಾರಿ ಸಂಘ ಪರಿವಾರ, ಪಿಣರಾಯಿ ಅಲ್ಲ......

ಪುಟ 2 ರಿಂದ


ತೊಕ್ಕೊಟ್ಟಿನಲ್ಲಿ ಉಳ್ಳಾಲ ವಲಯ ಸಮಿತಿ ಆಫೀಸಿಗೆ ಬೆಂಕಿ ಹಾಕಿರುವುದು

ತಾತ್ವಿಕವಾಗಿ ಸಿಪಿಐ(ಎಂ) ಪಕ್ಷವನ್ನ ಎದುರಿಸಿ. ಕಳ್ಳರ ರೀತಿಯಲ್ಲಿ, ಗೂಂಡಾಗಳ ರೀತಿಯಲ್ಲಿ, ಸಮಾಜಘಾತುಕ ಶಕ್ತಿಗಳ ರೀತಿಯಲ್ಲಿ ದಬ್ಬಾಳಿಕೆ ಮಾಡುವುದಲ್ಲ, ಹೆದರಿಸುವುದಲ್ಲ, ಸಿಪಿಐ(ಎಂ) ಪಕ್ಷದ ಕಮ್ಯೂನಿಸ್ಟರ ಇತಿಹಾಸ ನಿಮಗೆ ಗೊತ್ತಿಲ್ಲ. ನಿಮ್ಮ ಪೂರ್ವಜ ಇದ ಹಿಟ್ಲರ್‌ಗೆ ಗೋರಿ ಕಟ್ಟಿಸಿದ್ದು ಕಮ್ಯೂನಿಸ್ಟ್ ಪಕ್ಷ. ನೆನಪಿರಬೇಕು ಆರೆಸ್ಸೆಸ್ ನವರಿಗೆ ಮುಸಲೋನಿಗೆ ಸಮಾಧಿ ಕಟ್ಟಿಸಿದ್ದು ಕಮ್ಯೂನಿಸ್ಟ್ ಪಕ್ಷ. ಭಾರತ ದೇಶದಲ್ಲಿ ನಿಮಗೆ ಗೋರಿ ತೋಡೋರು ಸಿಪಿಐ(ಎಂ) ಪಕ್ಷ ಮತ್ತು ಕಮ್ಯೂನಿಸ್ಟರು.


ನಿಮ್ಮ ಕೈಯಲ್ಲಿ ಸಿಪಿಐ(ಎಂ) ಪಕ್ಷವನ್ನ ತಾತ್ವಿಕವಾಗಿ, ರಾಜಕೀಯವಾಗಿ ಎದುರಿಸುವ ಶಕ್ತಿ ಇಲ್ಲದೆ ದಾಳಿ, ದಬ್ಬಾಳಿಕೆಗೆ ಇಳಿತೀರಿ. ತಾತ್ವಿಕವಾಗಿ ಒಂದು ಸಿದ್ದಾಂತವನ್ನು ಎದುರಿಸಲಿಕ್ಕೆ ಶಕ್ತಿ ಇಲ್ಲದವರು. ಬುದ್ಧಿ ಶಕ್ತಿ ಇರದ ದೀವಾಳಿಕೋರರು, ಶಾರೀರಿಕ ಶಕ್ತಿಯನ್ನು ಉಪಯೋಗಿಸುತ್ತಾರೆ. ಅದನ್ನೆ ಫ್ಯಾಸಿಸಂ ಅಂತ ಕರಿಯೋದು. ತನ್ನ ಅಭಿಪ್ರಾಯಕ್ಕೆ ವಿರೋಧ ಇದಂತವರನ್ನು ಕೊಲೆ ಮಾಡುವವರು. ಚರ್ಚೆ ಮಾಡಲಿಕ್ಕೆ, ಸಂವಾದದಿಂದ ಚರ್ಚೆಯಿಂದ ಪರಿಹಾರ ಮಾಡಲಿಕ್ಕೆ ತಯಾರಿಲ್ಲ. ದಬ್ಬಾಳಿಕೆಯಿಂದ ಎದುರಿಸಲಿಕ್ಕೆ ಹೊರಟಿದ್ದೀರಿ. ದಕ್ಷಿಣ ಕನ್ನಡ ಜಿಲ್ಲೆ ಕರಾವಳಿಯಲ್ಲಿ ಸತತವಾಗಿ ಐದು ವರ್ಷಗಳಿಂದ ನಿಮ್ಮ ಕೋಮುವಾದಿ ಆರೆಸ್ಸ್‌ಸ ಸಂಘ ಪರಿವಾರ ವಿರುದ್ಧ ನೇರವಾದ ಸಂಘರ್ಷಕ್ಕೆ ನಾವು ಇಳಿದಿದ್ದೀವಿ. ಅದರ ಒಂದು ಭಾಗವೇ ಈ ಸೌಹಾರ್ದ ರ್‍ಯಾಲಿ.

ದಕ್ಷಿಣ ಕನ್ನಡ ಜಿಲ್ಲೆ ಕರಾವಳಿಯಲ್ಲಿ ಸೌಹಾರ್ದತೆ ನೆಲೆಸಬೇಕೆಂದು ನಾವು ಕೇಳ್ತಾ ಇದ್ದೀವಿ. ನಿಮಗೆ ನಿಜವಾಗಲೂ ಸೌಹಾರ್ದತೆಯ ಬಗ್ಗೆ ಗೌರವವಿದ್ದರೆ, ನೀವಿದಕ್ಕೆ ಬೆಂಬಲ ಕೊಡಬೇಕಾಗಿತ್ತು. ನಮ್ಮನ್ನ ವಿರೋಧಮಾಡಿದ್ದೀರಿ ಅಂತ ಹೇಳಿದ್ರ ನಿಮಗೆ ಸೌಹಾರ್ದ ಬೇಕಾಗಿಲ್ಲ. ಸೌಹಾರ್ದ ಬೇಕು, ಆ ಸೌಹಾರ್ದತೆಯನ್ನೆ ಕಾಪಾಡಲಿಕ್ಕೆ, ಐಕ್ಯತೆಯನ್ನ ಕಾಪಾಡಲಿಕ್ಕೆ, ಶಾಂತಿಯನ್ನು ರಕ್ಷಣೆ ಮಾಡಲಿಕ್ಕೆ ಎಂತಹ ತ್ಯಾಗಕ್ಕೂ ಕೂಡ ಸಿಪಿಐ(ಎಂ) ಸಿದ್ಧವಾಗಿದೆ. ಈ ರ್‍ಯಾಲಿಯನ್ನ ಸೌಹಾರ್ದ ರ್‍ಯಾಲಿಯನ್ನ, ನೀವು ಎಷ್ಟೇ ಬೆದರಿಕೆಗಳನ್ನು ಹಾಕಿದರೂ ನಮ್ಮ ಕಾರ್ಯಕರ್ತರು ನಿಮ್ಮನ್ನು ಎದುರಿಸಿ ಇದನ್ನು ಯಶಸ್ವಿಗೊಳಿಸಿದ್ದಾರೆ. ನಿಮಗೆ ಅರ್ಥವಾಗಿದೆ ಸಿಪಿಐ(ಎಂ) ನಿಮ್ಮ ಗೊಡ್ಡು ಬೆದರಿಕೆಗಳಿಗೆ ಹೆದರೋದಿಲ್ಲ.

ನೀವು ತಿಳಿದುಕೊಂಡಿರಬಹುದು ಕಮ್ಯೂನಿಸ್ಟರು ಕೇವಲ ಕೂಲಿಗೋಸ್ಕರ ಹೋರಾಟ ಮಾಡ್ತಾರೆ ಅಂತ. ಕೂಲಿ ಮಾಡುವ ಶ್ರಮಶಕ್ತಿಗಳೇ ಇಲ್ಲದೇ ಇದಿದ್ರೇ ಈ ದೇಶದ ಸಂಪತ್ತು ಬೆಳೆಯುತ್ತಿರಲಿಲ್ಲ. ಆ ದುಡಿಯುವ ಜನ ಕಮ್ಯೂನಿಸ್ಟ್ ಪಕ್ಷದ ಜೊತೆ ಇದ್ದಾರೆ. ಧರ್ಮ, ಜಾತಿಗಳ ಹೆಸರಿನಲ್ಲಿ ಅವರ ಐಕ್ಯತೆಯನ್ನ ಒಡೆಯಲಿಕ್ಕೆ ಹೋಗಿದ್ದೀರಿ. ಇಡೀ ಕರ್ನಾಟಕ ರಾಜ್ಯದಲ್ಲಿ ಇವತ್ತು ಚುನಾವಣೆ ಹತ್ತಿರ ಬರುತ್ತಿದೆ. ಹೈದರಾಬಾದ್ ಕರ್ನಾಟಕಕ್ಕೆ ಹೋಗಿದ್ದೀರಿ, ಅಲುಗುಮಾಲೆ ಹೆಸರಿನಲ್ಲಿ ಎಸ್.ಟಿ. ಗಳನ್ನ ಸಂಘಟನೆ ಮಾಡಲಿಕ್ಕೆ ಹೊರಟಿದ್ದೀರಿ. ಬಾಂಬೆ ಕರ್ನಾಟಕದಲ್ಲಿ ಕುರುಬರನ್ನು ಸಂಘಟನೆ ಮಾಡಲಿಕ್ಕೆ ಸಂಗೊಳ್ಳಿ ರಾಯಣ್ಣನ ಹೆಸರನ್ನ ಹೇಳುತ್ತೀರಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದುರ್ಗಾ ಪರಮೇಶ್ವರಿ ಮಾಲೆಯನ್ನ ಹಾಕಲಿಕ್ಕೆ ಹೊರಟಿದ್ದೀರಿ. ಚಿಕ್ಕಮಂಗಳೂರಿನಲ್ಲೂ ದತ್ತ ಮಾಲೆ ಅಂತ ಹೇಳುತ್ತಿರಿರೀ ಎಲ್ಲಾ ಮಾಲೆಗಳು ನಿಮ್ಮ ರಾಜಕೀಯ ತಂತ್ರಗಾರಿಕೆಗೆ, ಮತರಾಜಕಾರಣಕ್ಕೊಸ್ಕರ. ಜಾತಿ ಜಾತಿಗಳ ಮಧ್ಯೆ, ಧರ್ಮ ಧರ್ಮಗಳ ಮಧ್ಯೆ ಸಂಘರ್ಷಗಳನ್ನು ಉಂಟುಮಾಡಲಿಕ್ಕೆ ಹೊರಟಿದ್ದೀರಿ.



ಕರ್ನಾಟಕ ರಾಜ್ಯದಲ್ಲಿ ನಿಮ್ಮ ಆಟವನ್ನು ಆಡಲಿಕ್ಕೆ ಸಿಪಿಐ(ಎಂ) ಬಿಡೋದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀವು ನಡೆಸಿದಂತಹ ಕೊಲೆಗಳೆಷ್ಟು, 13 ಜನ ಹಿಂದುಗಳನ್ನ ಕೊಲೆ ಮಾಡಿದ್ದೀರಿ. ಪಟ್ಟಿ ಇದೆ. 13 ಜನ ವಿನಾಯಕ ಬಾಳಿಗದಿಂದ ಹಿಡಿದು ಪ್ರತಾಪ ಪೂಜಾರಿವರೆಗೂ 13 ಜನರನ್ನು ಕೊಲೆ ಮಾಡಿದ್ದು ನೀವು. ಬಿಜೆಪಿ, ಆರೆಸ್ಸೆಸ್ ಸಂಘಪರಿವಾರದವರು ಯಾಕೆ ಕೊಲೆ ಮಾಡಿದ್ದೀರಿ ಹೇಳಿ, ದಕ್ಷಿಣ ಕನ್ನಡ ಜಿಲ್ಲೆಯನ್ನು ಕೋಮುವಾದಿ ಶಕ್ತಿಗಳು ತಮ್ಮ ಪ್ರಯೋಗ ಶಾಲೆಯನ್ನಾಗಿ ಮಾಡಿಕೊಂಡಿವೆ. ಅದರ ವಿರುದ್ಧ ಸಿಪಿಐ(ಎಂ) ಪಕ್ಷ ಸಂಘರ್ಷ ನಡೀತಾ ಇದೆ ಇವತ್ತು. ಸೌಹಾರ್ದತೆಗಾಗಿ ಸಂಘರ್ಷವನ್ನು ನಡೆಸುತ್ತಿದ್ದೇವೆ ನಾವಿವತ್ತು.



ಬಂಧುಗಳೇ, ಕರ್ನಾಟಕ ರಾಜ್ಯದಲ್ಲಿ ಒಂದು ವರ್ಷ ಇದೆ ಚುನಾವಣೆ. ಆ ಚುನಾವಣಾ ರಾಜಕಾರಣಕೊಸ್ಕರ ಕೋಮುಗಲಭೆಗಳನ್ನು ಸೃಷ್ಟಿ ಮಾಡಲಿಕ್ಕೆ ಹೊರಟಿದ್ದಾರೆ. ನಾವು ಎಚ್ಚರಿಕೆಯಿಂದ ಇರಬೇಕು. ನಾನು ಕರ್ನಾಟಕ ರಾಜ್ಯದ ಎಲ್ಲಾ ಜಾತ್ಯಾತೀತ ಪಕ್ಷಗಳಲ್ಲಿ ವಿನಂತಿ ಮಾಡ್ತಾ ಇದ್ದೀನಿ. ಅತ್ಯಂತ ಅಪಾಯಕಾರಿ ಸ್ಥಿತಿಯಲ್ಲಿದೆ ಕರ್ನಾಟಕ. ಭಾರತ ದೇಶವು ಅತ್ಯಂತ ಅಪಾಯಕಾರಿ ಸ್ಥಿತಿಯಲ್ಲಿದೆ. ಒಂದು ಕಡೆ ಅಲ್ಪಸಂಖ್ಯಾತರ ಮೇಲೆ ದಾಳಿ, ಇನ್ನೊಂದು ಕಡೆ ದಲಿತರ ಮೇಲೆ ದಾಳಿ, ಮಹಿಳೆಯರ ಮೇಲೆ ದಾಳಿ, ಭೌತಿಕ ಚಿಂತನೆಗಳ ಮೇಲೆ ದಾಳಿ, ವಿಶ್ವವಿದ್ಯಾನಿಲಯಗಳ ಮೇಲೆ ದಾಳಿ. ಕಡೆಗೆ ಬೌದ್ಧಿಕ ಚಿಂತನೆಯಲ್ಲಿ ನಿಮ್ಮಗೆ ವಿರುದ್ಧವಾಗಿರುವವರ ಕೊಲೆಗಳನ್ನು ಮಾಡಲಿಕ್ಕೆ ಹೊರಟಿದ್ದೀರಿ. ಗೋವಿಂದ, ಪನ್ಸಾರೆ, ದಾಬೋಲ್ಕರ್, ಡಾ. ಕಲಬುರ್ಗಿಯಿಂದ ಹಿಡಿದು ಎಲ್ಲರನ್ನು ಕೂಡ. ವಿಶ್ವವಿದ್ಯಾನಿಲಯಗಳ ಮೇಲೆ ದಾಳಿ ಮಾಡುತ್ತಿದ್ದೀರಿ. ನಾವು ಏನು ತಿನ್ನಬೇಕು– ಏನು ತಿನ್ನಬಾರದು; ಏನು ಮಾತನಾಡಬೇಕು – ಏನು ಮಾತನಾಡಬಾರದು; ಯಾವ ರೀತಿ ಬಟ್ಟೆ ಹಾಕಬೇಕು – ಯಾವ ರೀತಿ ಬಟ್ಟೆ ಹಾಕಬಾರದು; ನಾವು ಯಾರನ್ನು ಮದುವೆ ಆಗಬೇಕು – ನಾವು ಯಾರನ್ನು ಮದುವೆಯಾಗಬಾರದು – ಎಂದು ನೀವು ನಿರ್ದೇಶನ ಮಾಡುವ ಸ್ಥಿತಿಗೆ ಬಂದಿದೆ.


ನಿನ್ನೆ ನನಗೆ ಒಬ್ಬರು ಪತ್ರಕರ್ತರು ಪ್ರಶ್ನೆ ಕೇಳ್ತಾರೆ, ಪಿಣರಾಯಿ ವಿಜಯನ್ ಬರಲಿಕ್ಕೆ ವಿರೋಧವಿಲ್ಲ, ಅವರು ಸೌಹಾರ್ದತೆ ಬಗ್ಗೆ ಮಾತನಾಡಬಾರದು ಅಂತ ಹೇಳಿ. ಏನು ಅದರರ್ಥ? ಒಂದು ರಾಜ್ಯದ ಮುಖ್ಯಮಂತ್ರಿ ಏನು ಮಾತನಾಡಬಾರದು – ಏನು ಮಾತನಾಡಬೇಕೆನ್ನುವುದನ್ನ ಯಾರು ತೀರ್ಮಾನ ಮಾಡುವುದು? ಈ ಫ್ಯಾಸಿಸ್ಟ್ ಮನೋಭಾವವನ್ನು ಸಿಪಿಐ(ಎಂ) ಪಕ್ಷ ಖಂಡಿತವಾಗಿಯೂ ಸಹಿಸಲಿಕ್ಕೆ ಸಾಧ್ಯವಿಲ್ಲ. ದಕ್ಷಿಣ ಕನ್ನಡ ಜಿಲ್ಲೆ ಜನರಲ್ಲಿ ವಿನಂತಿ ಮಾಡ್ತಿದೀನಿ. ಕರ್ನಾಟಕ ರಾಜ್ಯದಲ್ಲಿ ಸಿಪಿಐ(ಎಂ) ಪಕ್ಷ ಬಹಳ ದೊಡ್ಡ ಪಕ್ಷ ಅಂತ ನಾವೇನ್ ಹೇಳ್ತಿಲ್ಲ. ಆದರೆ ಒಂದು ಸ್ಪಷ್ಟ ಮಾಡ್ತಾ ಇದ್ದೇವೆ. ಇವತ್ತು ಎಲ್ಲಾ ಕರ್ನಾಟಕ ರಾಜ್ಯದ ದೊಡ್ಡ ಸಣ್ಣ ರಾಜಕೀಯ ಪಕ್ಷಗಳು ಕೋಮುವಾದಿ ಶಕ್ತಿಗಳ ವಿರುದ್ಧ ಬಾಯಿ ಬಿಚ್ಚಲಿಕ್ಕೆ ತಯಾರಿಲ್ಲ. ಆದರೆ ಸಿಪಿಐ(ಎಂ) ಪಕ್ಷ ಮಾತ್ರವೇ ಕರ್ನಾಟಕ ರಾಜ್ಯದಲ್ಲಿ ಇವತ್ತು ನಿರಂತರವಾಗಿ ಕೋಮುವಾದಿ ಶಕ್ತಿಗಳಿಗೆ ಸವಾಲಾಕಿ ಹೋರಾಟ ಮಾಡ್ತಿದ್ದೀವಿ. ಇದೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿರಂತರವಾಗಿ ಕೋಮುವಾದಿ ಶಕ್ತಿಗಳ ವಿರುದ್ಧ ದಾಳಿಯನ್ನ ನಡೆಸುತ್ತಿರುವುದು ನಾವು.

ಹಾಗಾಗಿ ಕೋಮುವಾದಿ ಶಕ್ತಿಗಳ ವಿರುದ್ಧ ಸಿಪಿಐ(ಎಂ) ಪಕ್ಷ ನಡೆಸುತ್ತಿರುವಂತಹ ಈ ಹೋರಾಟಕ್ಕೆ ಕರ್ನಾಟಕ ರಾಜ್ಯದ ಎಲ್ಲಾ ಪ್ರಗತಿಪರ ಶಕ್ತಿಗಳು, ಬರಹಗಾರರು, ಪ್ರಜಾಪ್ರಭುತ್ವ ಶಕ್ತಿಗಳು ಈ ಬೆಂಬಲ ಕೊಡಬೇಕು. ಅದೇ ರೀತಿಯಲ್ಲಿ ಕರಾವಳಿ ಪ್ರದೇಶದ ಜನ ಇವತ್ತು ನೀವು ತೋರಿಸಿ ಕೊಟ್ಟಿದ್ದೀರಿ. ನಿಮ್ಮ ಪರವಾಗಿ ನಾವು ಇದ್ದೀವಿ ಅಂತ ತೋರಿಸಿಕೊಟ್ಟಿದ್ದೀರಿ. ಬಂದ್‌ಗೆ ಕರೆ ಕೊಟ್ಟರೂ ಜನ ಹೆದರಲಿಲ್ಲ. ಕೆಲವರು ಪಾಪ ಕಲ್ಲು ಹೊಡೆಯುತ್ತಾರಂತ ಭಯ ಬಿದ್ದು ಅಂಗಡಿ ಬಾಗಿಲು ಮುಚ್ಚಿದ್ದಾರೆ ಅಷ್ಟೇ. ಅದ್ದರಿಂದ ಬಂಧುಗಳೇ, ಈ ಸೌಹಾರ್ದ ರ್‍ಯಾಲಿ ನಡೀತಿರುವಂತಹ ಸಂದರ್ಭದಲ್ಲಿ ನಮ್ಮ ಈ ಹೋರಾಟಕ್ಕೆ ಕರ್ನಾಟಕ ರಾಜ್ಯದ ಉದ್ದಗಲಕ್ಕೂ ಬರಹಗಾರರು, ಮೇಧಾವಿಗಳು, ಬುದ್ದೀಜೀವಿಗಳು, ಸ್ವಾಮಿಗಳು, ಸಂಘಟನೆಗಳು, ಸ್ನೇಹಿತರು ಈ ರ್‍ಯಾಲಿಗೆ ಬೆಂಬಲ ಕೊಟ್ಟಿದ್ದಾರೆ. ಅವರೆಲ್ಲರಿಗೂ ಕೂಡ ನಾನು ಸಿಪಿಐ(ಎಂ) ಪಕ್ಷದ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಬಂಧುಗಳೇ. ಅದೇ ರೀತಿ ಕರಾವಳಿ ಪ್ರದೇಶದ ಜನ, ದಕ್ಷಿಣ ಕನ್ನಡದ ಜಿಲ್ಲೆಯ ಜನ ಈ ಸೌಹಾರ್ದ ರ್‍ಯಾಲಿಯ ಯಶಸ್ವಿಗಾಗಿ ನಮಗೆ ಎಲ್ಲಾ ರೀತಿಯಾದಂತಹ ಸಹಕಾರವನ್ನು ಕೊಟ್ಟಿದ್ದಾರೆ. ಅವರಿಗೂ ಕೂಡ ನಾನು ಧನ್ಯವಾದಗಳನ್ನ ಅರ್ಪಿಸುತ್ತಾ ಇದೀನಿ. ಆದ–ರೆ ಇಂತಹ ಒಂದು ಕಠಿಣ ಪರಿಸ್ಥಿತಿಯನ್ನ ಎದುರಿಸಿ ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಸಮಿತಿಯ ಮುಖಂಡತ್ವ ಮತ್ತು ಎಲ್ಲಾ ಪಕ್ಷದ ಸದಸ್ಯರು ಒಬ್ಬ ವ್ಯಕ್ತಿಯಾಗಿ ನಿಂತು ಕೋಮುವಾದಿಗಳ ಸವಾಲಿನ ದಬ್ಬಾಳಿಕೆಯನ್ನು ಎದುರಿಸಿ ಯಶಸ್ವಿ ಮಾಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಸಿಪಿಐ(ಎಂ) ಪಕ್ಷದ ಎಲ್ಲಾ ಮುಖಂಡರಿಗೂ ನಾನು ರಾಜ್ಯ ಸಮಿತಿಯ ಪರವಾಗಿ ಧನ್ಯವಾದಗಳನ್ನ ಅರ್ಪಿಸುತ್ತೇನೆ. ಹಾಗೆನೇ ಇದನ್ನ ಯಶಸ್ವಿ ಮಾಡಲಿಕ್ಕೆ ಜಿಲ್ಲಾ ಆಡಳಿತ ಮತ್ತು ವಿಶೇಷವಾಗಿ ಪೊಲೀಸರು ನಮಗೆ ಸಹಕಾರ ಕೊಟ್ಟಿದೆ. ಅವರಿಗೂ ಕೂಡ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

> ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಿಜೆಪಿ, ವಿ.ಎಚ್.ಪಿ., ಭಜರಂಗದಳ ಕರೆ ನೀಡಿರುವ ಹರತಾಳವು ಕೋಮುಗಲಭೆ ಸೃಷ್ಟಿಸುವ ಹುನ್ನಾರವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟಿಸುವ ಹಕ್ಕು ಎಲ್ಲರಿಗೂ ಇದೆ. ಕೇರಳದಲ್ಲಿ ಹಿಂದೂ ಕಾರ್ಯಕರ್ತರ ಹತ್ಯೆ ನಡೆಯುತ್ತಿದೆ ಎಂದು ಹೇಳಿಕೆ ನೀಡುತ್ತಾ ಇಡೀ ಸಮಾಜವನ್ನು ತಪ್ಪುದಾರಿಗೆ ಎಳೆಯುತ್ತಿರುವುದು ಖಂಡನೀಯ. ಕೇರಳದಲ್ಲಿ ಬಿಜೆಪಿ ಸರ್ಕಾರ ರಚಿಸಲು ಸಾಧ್ಯವಾಗದ ಕಾರಣ ಈ ರೀತಿಯ ಅಪಪ್ರಚಾರ ಮಾಡಲಾಗುತ್ತಿದೆ. ಪೊಲೀಸರು ಕಾನೂನು ಕೈಗೆತ್ತಿಕೊಳ್ಳುವವರ ಹಾಗೂ ಸಮಾಜದ ಶಾಂತಿ, ಸಾಮರಸ್ಯ ಕದಡುತ್ತಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು.
>
> – ಪಿ.ಬಿ. ಡೆಸಾ, ಉಪಾಧ್ಯಕ್ಷ, ಪಿ.ಯು.ಸಿ.ಎಲ್.

JANASHAKTHI KANNADA VARA PATRIKE Mar 6-12, 2017 Price : Rs. 10/- Date of Publication : 3 March 2017 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283



ಸೌಹಾರ್ದ ಕಹಳೆ

ಈ ಇಳಿವಯಸ್ಸಿನ ಕಾಮ್ರೇಡ್ ಹೆಸರು ವಾಸು ನಾಯ್ಕ.

ಕಮ್ಯುನಿಸ್ಟ್ ಚಳವಳಿಯ ಆರಂಭದ ದಿನಗಳಿಂದಲೇ ಕೆಂಬಾವುಟ ಹಿಡಿದವರು. ಹೆಂಚು ಕಾರ್ಮಿಕರ ಹೋರಾಟ, ಗೇಣಿದಾರರ ಸಮರಶೀಲ ಚಳವಳಿ, ಗೋಡಂಬಿ, ಸಾರಿಗೆ, ಬೀಡಿ, ಮೂರ್ತೆ(ಶೇಂದಿ) ದಾರರ ಹೋರಾಟಗಳಲ್ಲಿ ಭಾಗಿಯಾದವರು. ಆ ಎಲ್ಲಾ ಮೆರವಣಿಗೆಗಳು ಆರಂಭವಾಗುತ್ತಿದ್ದದ್ದೇ ಇವರು ಕೊಂಬು(ಕಹಳೆ) ಊದುವ ಮೂಲಕ. ಆ ಕಾಲದ ಎಲ್ಲಾ ನಿರ್ಣಾಯಕ ಹೋರಾಟಗಳಿಗೂ ಇವರು ಕಹಳೆ ಊದಿದ್ದಾರೆ. ಹೋರಾಟಗಳೆಲ್ಲ ಬಹುತೇಕ ಗೆದ್ದಿದೆ. ಭೂಮಿ, ಹಕ್ಕು ದೊರಕಿದೆ. ಎಲ್ಲಾ ಹೋರಾಟಗಳಿಗೂ ತನ್ನ ಕೊಂಬು ಸಹಿತ ಹಾಜರಿ ಹಾಕುವ ವಾಸು ನಾಯ್ಕ ಇತ್ತೀಚಿನ ವರ್ಷಗಳಲ್ಲಿ ನೇಪಥ್ಯಕ್ಕೆ ಸರಿದಿದ್ದರು.

ಈಗ ಮತ್ತೆ ಕಾಮ್ರೇಡ್ ವಾಸು ನಾಯ್ಕ ಅದೇ ಹಳೆಯ ಜೋಶ್ ನೊಂದಿಗೆ ಕೊಂಬು (ಕಹಳೆ) ಊದಿದ್ದಾರೆ. ಮೆರವಣಿಗೆ ಹೊರಟಿದೆ....

ಸುಟ್ಟ ಕಾಗದ ಇತಿಹಾಸ ಹೇಳುತ್ತದೆ

ಈ ನಾಡಿನ ದುಡಿಯುವ ಜನತೆಯ ಹಿರಿಯ ಸಂಗಾತಿ ವಿಜೆಕೆ ನಾಯರ್ ರವರ ಒಳಮನದಲ್ಲಿ ಹಾಗೂ ನಿಮ್ಮೆಲ್ಲರ ಮನದಲ್ಲೂ ಮೂಡಿರಬಹುದೆಂದು ನಂಬಿ ಬರೆದೆ. ಸಂಘಪರಿವಾರದ ಫ್ಯಾಸಿಸ್ಟ್ ಕ್ರಿಯೆಗೆ ನನ್ನ ಪ್ರತಿಕ್ರಿಯೆ:



ಈ ನೆಲದಲ್ಲಿ ಪುಸ್ತಕಗಳು ಮಾತಾಡುತ್ತವೆ..
ಅಕ್ಷರಗಳು ದೃಷ್ಟಿ ಕೊಡುತ್ತವೆ
ಹರಿದ ಹಾಳೆಗಳು ಇತಿಹಾಸ ಹೇಳುತ್ತವೆ
ಸುಟ್ಟು ಕರಕಲಾದ ಕಾಗದವೊಂದೇ ಅಲ್ಲ
ನೀವು ಕತ್ತಲಲ್ಲಿ ಹೂತ
ಹೆಣವೂ ಸತ್ಯ ಹೇಳುತ್ತದೆ...

ಬಗೆದು ಹೊಸೆದ ಭ್ರೂಣವೂ ಕಥೆ ಹೇಳುತ್ತದೆ

ನೀವು ಬಳಸಿ ಬಿಸಾಡಿದ ಅವಳ ಸಹಸ್ರ ಗರ್ಭಚೀಲಗಳು
ಬಾನೆತ್ತರದ ಧ್ವನಿಯಲ್ಲಿ ಕೂಗಿ ಹೇಳುತ್ತಿವೆ

ಒಂದಲ್ಲ ಒಂದು ದಿನ
ನಿಮ್ಮ ಹೇಯ ಧ್ಯೇಯ ಬಯಲಾಗುತ್ತದೆ
ಅಂದು ನಿಮ್ಮೆದುರು ನಾವು ಲಗ್ಗೆ ಇಡುತ್ತೇವೆ
ನಿಮ್ಮಂತಲ್ಲ
ನೀವು ಬಿತ್ತಿದ ದ್ವೇಷದ ಮೇಲೆ ಪ್ರೀತಿಯ ಲಗ್ಗೆ
ನೀವು ಸಾಣೆ ಹಾಕಿದ ಕತ್ತಿ ಚಾಕು ಕಠಾರಿ ಮೇಲೆ
ಸೌಹಾರ್ದ ಭಾವದ ಲಗ್ಗೆ
ನಿಮ್ಮ ಅಹಮ್ಮಿನ ಕೋಟಿ ಲೂಟಿ ರೋಷದ ಮೇಲೆ
ಜನಮನದ ಮಹಾಕಾವ್ಯದ ಲಗ್ಗೆ ...
ಅಂದು ಮತ್ತೆ ಪುಸ್ತಕಗಳು ಮಾತು ಕಲಿಸುತ್ತವೆ...
ನೀವು ಸುಟ್ಟ ಹಳೆಯ ದಫ್ತಾರಗಳ ಬೂದಿ
ಗೊಬ್ಬರವಾಗಿ
ನಮ್ಮೆಳೆಯರನ್ನು ಚಿಗುರಿಸುತ್ತದೆ...

– ಯಮುನಾ ಗಾಂವ್ಕರ್

ಸಾಮಾಜಿಕ ಮಾಧ್ಯಮ ಬಳಕೆಯಲ್ಲೊಂದು ನೆಗೆತ

ಪಕ್ಷದ ಮತ್ತು ಜನಶಕ್ತಿ ಪತ್ರಿಕೆಯ ಸಾಮಾಜಿಕ ಮಾಧ್ಯಮ ಚಟುವಟಿಕೆ ಕಳೆದ 1 ವರ್ಷದಿಂದ ನಡೆಯುತ್ತಿದ್ದು ಇತ್ತೀಚಿನ ತಿಂಗಳುಗಳಲ್ಲಿ ಹೆಚ್ಚಿನ ಪಕ್ಷದ ಪ್ರಜಾಸತ್ತಾತ್ಮಕ ಸಾಮೂಹಿಕ ಸಂಘಟನೆಗಳ ಚಳುವಳಿಗಳ ಪ್ರಚಾರಾಂದೋಲನದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಕಳೆದ ಕೆಲವು ತಿಂಗಳುಗಳಿಂದ ಬಳಕೆಯ ವೈವಿಧ್ಯತೆ, ಸೃಜನಾತ್ಮಕ ಪ್ರಚಾರ ಪರಿಕರಗಳ ತಯಾರಿ, ಉದ್ದೇಶಿತ ಜನವಿಭಾಗಗಳಿಗೆ ತಲುಪುವ ಪ್ರಮಾಣ, ಬೀರುವ ಪ್ರಭಾವ ಇವೆಲ್ಲದರಲ್ಲೂ ತೀವ್ರ ಪ್ರಗತಿ ಸಾಧಿಸಿದೆ. ಮಾಣಿಕ್ ಸರ್ಕಾರ್ ಅವರ ಕರ್ನಾಟಕ ಭೇಟಿ ಸಮಯದಲ್ಲಿ ಒಂದು ನೆಗೆತವನ್ನೂ ಕಂಡಿತ್ತು. ಪ್ರಮುಖ ಕಾರ್ಯಕ್ರಮಗಳ, ಭಾಷಣಗಳ ಲೈವ್ ಫೇಸ್ ಬುಕ್ ಪ್ರಸಾರದ ಮೂಲಕ ನೆಗೆತ ಸಾಧಿಸಿತ್ತು. ಕರಾವಳಿ ಕೋಮುವಾದದ ವಿರುದ್ಧ ಮತ್ತು ಸೌಹಾರ್ದತೆಗಾಗಿ ಹಲವು ವಾರಗಳ ಪ್ರಚಾರಾಂದೋಲನದಲ್ಲಿ ಸಾಮಾಜಿಕ ಮಾಧ್ಯಮ ಪ್ರಮುಖ ಪಾತ್ರ ವಹಿಸುತ್ತಾ ಬಂದಿದೆ. ಸೌಹಾರ್ದ ರ್‍ಯಾಲಿಯ ದಿನವಂತೂ ಹಿಂದಿನ ನೆಗೆತದ ಮೇಲೊಂದು ನೆಗೆತ ಸಾಧಿಸಿತು ಎಂದರೆ ತಪ್ಪಾಗಲಾರದು.

ಫ. 25 ರಂದು ಸಿಪಿಐ(ಎಂ) ಕರ್ನಾಟಕ ಫೇಸ್ ಬುಕ್ ಪುಟದಿಂದ ಮಾಡಿದ ಪಿಣರಾಯಿ ಭಾಷಣದ ಲೈವ್ ಪ್ರಸಾರದ ವಿಡಿಯೊವನ್ನು ಇದುವರೆಗೆ 1.1 ಲಕ್ಷ ಜನ ನೋಡಿದ್ದಾರೆ. 51 ಸಾವಿರ ಜನ ಲೈಕ್+ಶೇರ್+ಕಮೆಂಟ್ ಮಾಡಿದ್ದಾರೆ. ಇವುಗಳಲ್ಲಿ 3200 ಶೇರ್ ಗಳು. ಇನ್ನೂ ಆ ದಿನದ ಮೆರವಣಿಗೆಯ ವಿಡಿಯೊವನ್ನು 3.6 ಲಕ್ಷ ಜನ ನೋಡಿದ್ದಾರೆ. 1.4 ಲಕ್ಷ ಜನ ಲೈಕ್+ಶೇರ್+ಕಮೆಂಟ್ ಮಾಡಿದ್ದಾರೆ. ಇವುಗಳಲ್ಲಿ 12 ಸಾವಿರ ಶೇರ್‌ಗಳು. ಈ ಪ್ರಚಾರಾಂದೋಲನದ ವಾರದಲ್ಲಿ ವಿವಿಧ ಪೋಸ್ಟರುಗಳು, ವಿಡಿಯೊಗಳು 17 ಲಕ್ಷ ಜನರನ್ನು ತಲುಪಿವೆ. ಸಾಮಾನ್ಯವಾಗಿ ಸರಾಸರಿ ವಾರಕ್ಕೆ 30 ಸಾವಿರ ಜನರನ್ನು ತಲುಪುತ್ತವೆ. ಮಾಣಿಕ ಸರ್ಕಾರ್ ಕರ್ನಾಟಕ ಬೇಟಿ ಸಮಯದಲ್ಲಿ 1.5 ಲಕ್ಷ ತಲುಪಿತ್ತು ಎಂದು ಹೋಲಿಸಿದರೆ ಈ ಬಾರಿಯ "ನೆಗೆತದಲ್ಲಿ ನೆಗೆತ" ಏನು ಎಂದು ತಿಳಿಯುತ್ತದೆ. ಸಿಪಿಐ(ಎಂ)



ಕರ್ನಾಟಕ ಫೇಸ್ ಬುಕ್ ಪುಟದ ಪೇಜ್ ಲೈಕ್ ಈ ಪ್ರಚಾರಾಂದೋಲನದ ಸುಮಾರು ಎರಡು ವಾರಗಳಲ್ಲಿ 15 ಸಾವಿರದಿಂದ 30 ಸಾವಿರಕ್ಕೆ ಇಮ್ಮಡಿಗೊಂಡಿದೆ.

ಈ "ನೆಗೆತದಲ್ಲಿ ನೆಗೆತ" ಸಾಧಿಸಲು ದುಡಿದವರು – ನವೀನ್ ಕುಮಾರ್ ನೇತೃತ್ವದಲ್ಲಿ ಪ್ರಶಾಂತ ಆಚಾರ್ಯ, ಮಿಥುನ್ ರಾಜ್ ಕುತ್ತಾರ್, ಚೇತನಾ ತೀರ್ಥಹಳ್ಳಿ ಮತ್ತು ಹಲವು ಯುವ ಬ್ರಿಗೇಡಿನ ಸದಸ್ಯರು, ಮತ್ತು ರಾಜ್ಯದ ದೇಶದ ಸಾಮಾಜಿಕ ಮಾಧ್ಯಮ ಜಾಲದ ಸದಸ್ಯರು. ಅವರಿಗೆ ಬೆಂಬಲವಾಗಿ ನಿಂತವರು ಮುನೀರ್, ಸಂತೋಷ್ ಬಜಾಲ್, ವಸಂತ್.

ಈ ಇಡೀ ಸಾಮಾಜಿಕ ಮಾಧ್ಯಮ ತಂಡ–ಕ್ಕೊಂದು ಲಾಲ್ ಸಲಾಂ !!

ಕೊನೆಯ ಶಾಟ್ !

ಆಸ್ಟ್ರೇಲಿಯ ವಿರುದ್ಧ ಮೊದಲ ಟೆಸ್ಟ್ ಸೋತ ಬಳಿಕ ಕ್ಯಾಪ್ಟನ್ ಪ್ರತಿಕ್ರಿಯೆ:
"ನಮಗಿಂತ ಹೀನಾಯವಾಗಿ ಮಂಗಳೂರಿನ ಸಂಘಿಗಳು ಸೋತಿದ್ದಾರೆ" : ವಿರಾಟ್ ಕೊಹ್ಲಿ

ಅಪರಿಚಿತ ಪೋನ್ ನಂಬರ್ ನಿಂದ

*DYFI ದ.ಕ ಜಿಲ್ಲಾ ಕಾರ್ಯದರ್ಶಿ
ಸಂತೋಷ್ ಕುಮಾರ್ ಬಜಾಲ್ ಗೆ *ಜೀವ ಬೆದರಿಕೆ*
ಪಾಂಡೇಶ್ವರ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಸಿದ್ದರಾಮಯ್ಯ ಜೀ, ಥ್ಯಾಂಕ್ಸ್ !

ಫೆಬ್ರವರಿ 25 ರಂದು ಮಂಗಳೂರಿನಲ್ಲಿ ನಡೆದ 'ಸೌಹಾರ್ದ ಸಮಾವೇಶ' ಯಶಸ್ವಿಯಾಗುವಂತೆ ಕಾನೂನು ಸುವ್ಯವಸ್ಥ ಕ್ರಮ ಕೈಗೊಂಡ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಕೇರಳ ಮುಖ್ಯಮಂತ್ರಿ ಕಾಮ್ರೇಡ್ ಪಿಣರಾಯಿ ವಿಜಯನ್ ಅವರು ಧನ್ಯವಾದವನ್ನು ಅರ್ಪಿಸಿ ಪತ್ರ ಬರೆದಿದ್ದಾರೆ:

ಪ್ರಿಯ ಶ್ರೀ ಸಿದ್ದರಾಮಯ್ಯ ಜೀ,

ನಿಮಗೆ ತಿಳಿದಿರುವಂತೆ 25.02.2017ರಂದು ಮಂಗಳೂರಿನಲ್ಲಿ ನನ್ನ ಕಾರ್ಯಕ್ರಮಗಳು ನಿಗದಿಯಾಗಿದ್ದವು. ಆರೆಸ್ಸೆಸ್ ಮತ್ತು ಅದರ ಸಹ ಸಂಘಟನೆಗಳು ವಿವಾದ ಎಬ್ಬಿಸಿ, ಸಾರ್ವಜನಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ನನಗೆ ಅವಕಾಶ ಕೊಡುವುದಿಲ್ಲ ಎಂದು ಸಾರ್ವಜನಿಕ ಹೇಳಿಕೆ ನೀಡಿದ್ದವು. ನಾವೆಲ್ಲರೂ ಇಷ್ಟು ವರ್ಷಗಳ ಕಾಲ ಪೋಷಿಸಿಕೊಂಡು ಬಂದ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಸಂಪೂರ್ಣ ವಿರುದ್ಧವಾದ ಈ ಸಂಘಟನೆಗಳ ಫ್ಯಾಸಿಸ್ಟ್ ಧೋರಣೆ ಆಘಾತ ತರಿಸಿತ್ತು.

ವೈಯಕ್ತಿಕವಾಗಿ ನಾನು ಮತ್ತು ನಾನು ಪ್ರತಿನಿಧಿಸುವ ರಾಜಕೀಯ ಪಕ್ಷ ಇಂಥ ಬೆದರಿಕೆಗಳನ್ನು ಬಹಳ ಬಾರಿ ಎದುರಿಸಿದ್ದೇವೆ. ಪ್ರಸ್ತುತ ನಾನು ಸಾಂವಿಧಾನಾತ್ಮಕವಾಗಿ ಪಡೆದಿರುವ ಹುದ್ದೆಯು ಅವರ ಸವಾಲುಗಳಿಗೆ ಅವರದೇ ಧಾಟಿಯಲ್ಲಿ ಉತ್ತರ ಕೊಡದಂತೆ ಮಿತಿ ಹೇರಿವೆ. ನಿಮ್ಮ ನೇತೃತ್ವದ ಕರ್ನಾಟಕ ಸರ್ಕಾರವು ಈ ಸಂದರ್ಭವನ್ನು ನಿಭಾಯಿಸಿ, ಕಾರ್ಯಕ್ರಮ ಶಾಂತಿಯಿಂದ ನೆರವೇರುವಂತೆ ದೃಢತೆಯಿಂದ ಕಾರ್ಯ ನಿರ್ವಹಿಸಿದ್ದು ನನಗೆ ಸಂತಸ ತಂದಿದೆ.

ನನ್ನ ಭೇಟಿಯ ಸಂದರ್ಭದಲ್ಲಿ ಸೂಕ್ತ ಭದ್ರತೆ ನೀಡಿ ಕಾರ್ಯಕ್ರಮಗಳು ಸುಸೂತ್ರವಾಗಿ ನಡೆಯುವಂತೆ ಸಹಕರಿಸಿದ ತಮಗೆ ನಾನು ವಿಧ್ಯುಕ್ತವಾಗಿ ಧನ್ಯವಾದವನ್ನು ಸಮರ್ಪಿಸುತ್ತಿದ್ದೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ
ಪಿಣರಾಯಿ ವಿಜಯನ್

ಲಾಲ್ ಸಲಾಂ – ಯುವ ರೆಡ್ ಬ್ರಿಗೇಡ್ !!

ಸೌಹಾರ್ದ ರ್‍ಯಾಲಿ ಎಂಬ ಈ ಅದ್ಭುತ ಘಟಿಸಲು ಹಲವು ಅಂಶಗಳು – ಪಿಣರಾಯಿಗೆ ಸಂಘ ಪರಿವಾರದ ಬೆದರಿಕೆ, ಸರಕಾರದ ಬಿಗಿ ಕ್ರಮ, ಕೋಮುವಾದಿ–ವಿರೋಧಿ ಪ್ರಗತಿಪರ ಶಕ್ತಿಗಳ ಐಕ್ಯತೆ, ಪಿಯುಸಿ ಪರೀಕ್ಷೆಯಿಂದಾಗಿ ಬಂದ್ ಕರೆ ಬಗ್ಗೆ ಆಕ್ರೋಶ – ಇತ್ಯಾದಿ ಸಹಕಾರಿಯಾದವು. ಆದರೆ ಇವೆಲ್ಲ ಸಕಾರಾತ್ಮಕ ಅಂಶಗಳನ್ನು ಬಳಸಿ, ಇನ್ನೆಷ್ಟೋ ನಕಾರಾತ್ಮಕ ಅಂಶಗಳನ್ನು ಮೆಟ್ಟಿ ನಿಂತ ಯುವ ರೆಡ್ ಬ್ರಿಗೆಡ್ ಇಲ್ಲದೆ ಸೌಹಾರ್ದ ರ್‍ಯಾಲಿ ಖಂಡಿತ ಯಶಸ್ವಿಯಾಗುತ್ತಿರಲಿಲ್ಲ.
ರ್‍ಯಾಲಿಗೆ ಕೆಲವೇ ದಿನ ಇರುವಾಗ ದಾಳಿಯ ಬೆದರಿಕೆ, ದಾಳಿಗಳ ನಡುವೆ ಮತ್ತೆ ಮತ್ತೆ (3–4 ಬಾರಿ) ಹರಿದ ಬ್ಯಾನರ್/ಫ್ಲೆಕ್ಸ್ ಗಳನ್ನು ಕಟ್ಟುವ, ಕರಿ ಮೆತ್ತಿದ ಪೋಸ್ಟರು ಗೋಡಬರಹಗಳನ್ನು ಮತ್ತೆ ಅಂಟಿಸುವ/ಬರೆಯುವ ಹಗಲು ರಾತ್ರಿಯೆನ್ನದೆ ಪ್ರಚಾರ, ಬೈಕ್ ರ್‍ಯಾಲಿ, ಪಾದಯಾತ್ರೆ ಕೈಗೊಳ್ಳುವ ಅತ್ಯಂತ ಉನ್ನತ ಮಟ್ಟದ ಬದ್ಧತೆಯ ವಿದ್ಯಾರ್ಥಿ–ಯುವ ಜನರ ರೆಡ್ ಬ್ರಿಗೇಡ್ ಕೊಂಡಾಡದಿರಲು ಸಾಧ್ಯವೇ ಇಲ್ಲ. ರ್‍ಯಾಲಿಯ ದಿನವೂ, ಬಹಿರಂಗ ಸಭೆ ನಡೆಯುವ ಮೈದಾನದ ಮತ್ತು ಮೆರವಣಿಗೆಯ ಭದ್ರತೆ ಬಗ್ಗೆ ಕಣ್ಣಿಡುವುದು, ಸೇರಿದಂತೆ ಮತ್ತಿತರ ನೂರಾರು ಕೆಲಸಗಳನ್ನು ಮಾಡಿದ್ದು ಈ ಯುವ ಬ್ರಿಗೇಡ್. ಸಾಮಾಜಿಕ ಮಾಧ್ಯಮದಲ್ಲೂ ಇತರ ಸಾಂಪ್ರದಾಯಿಕ ವಿಧಾನಗಳಲ್ಲೂ ಸೌಹಾರ್ದ ರ್‍ಯಾಲಿಗೆ ಪ್ರಚಾರ ಕೊಟ್ಟಿದ್ದರ ಸಿಂಹಪಾಲು ಸಹ ಈ ಬ್ರಿಗೇಡಿದ್ದೇ. ಇಲ್ಲಿ ನೋಡಿ! ರ್‍ಯಾಲಿ ಮುಗಿದ ಮೇಲೆ ವೇದಿಕೆ ಹತ್ತಿ ವಿಜಯದ ಸಾರ್ಥಕತೆಯ ನಗೆ ಬೀರುತ್ತಿದೆ.
ಯುವ ರೆಡ್ ಬ್ರಿಗೇಡ್ ಗೊಂದು ಲಾಲ್ ಸಲಾಂ !!



JANASHAKTHI KANNADA VARA PATRIKE: Printed, Published by **G.V. SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V. SRIRAMA REDDY**